
ರಂಜನೆ ಬೋಧನೆ ಪ್ರಚೋದನೆ


ಲಂಕೇಶ್

ಸೆಪ್ಟೆಂಬರ್ 22, 2010 ರೂ. 12/-

ಪೇಜಾವರಗೆ ಮಾದಾರಸ್ವಾಮಿ ಕೌಂಟರ್ ಪಂಚ್









ಹೆಂಡತಿ ಹೆಸರಲ್ಲಿ ಲೂಟಿ

ಕದ್ದ ದುಡ್ಡಲ್ಲಿ ರಾಜ್-ವಿಷ್ಣು ಪ್ರತಿಮೆ



ಸಮಾಜ ಕಲ್ಯಾಣ ಮಂತ್ರಿಯ ದರೋಡೆ



ದೂರತೀರಕೆ ಮುರಳಿ ಯಾನ



ಕಾಳಿಂಗರಾವ್ ಗೆಳತಿಯರ ಬದುಕು ಉದಯವಾಗಲಿಲ್ಲ

ಅಣ್ಣಿಗೇರಿ: ಪಂಡಿತರ ಬುರುಡೇ ಬುರುಡೆ

ಅಂತಃಸ್ಸಾಕ್ಷಿಯಿಲ್ಲದ ಚಳವಳಿಗಳು ಸಮಾಜದ ಸಾಕ್ಷಿಪ್ರಜ್ಞೆಗಳಾಗುವುದಿಲ್ಲ

ಯಾವುದೇ ಸಮಾಜದಲ್ಲಿ ಆಳುವ-ಶೋಷಕ ವರ್ಗಗಳು ಭ್ರಷ್ಟರಾಗಿರುವುದು ಅಥವಾ ನೈತಿಕವಾಗಿ ಅಧಃಪತನಗೊಳ್ಳುವುದು ಆಶ್ಚರ್ಯಕರವಲ್ಲ. ಆದರೆ ಇತಿಹಾಸದ ಅತ್ಯಂತ ದುರಂತದ ಕ್ಷಣಗಳು ಅದರ ವಿರುದ್ಧ ಏಳುವ ಬಂಡಾಯಗಳು, ಸಂಘರ್ಷಗಳ ಲೋಕವು ಭ್ರಷ್ಟಗೊಳ್ಳುವುದು ಮತ್ತು ನೈತಿಕವಾಗಿ ಅಧಃಪತನಗೊಳ್ಳುವುದು.

ಇತಿಹಾಸದಲ್ಲಿ ಹಳೆಯ ಆಳುವವರ್ಗಗಳನ್ನು ಸೋಲಿಸಿ ಹೊಸ ವರ್ಗಗಳು ತಮ್ಮ ಐತಿಹಾಸಿಕ ಉದಯವನ್ನು ಸೂಚಿಸುವಾಗಲೆಲ್ಲಾ ಸಂಘರ್ಷ ನಡೆದಿರುವುದು ಕೇವಲ ರಣರಂಗದಲ್ಲಿ ಮಾತ್ರವಲ್ಲ, ಅಥವಾ ದೈಹಿಕವಾಗಿ ಮಾತ್ರವಲ್ಲ. ಅಲ್ಲಿ ಹಳೆಯ ಮೌಲ್ಯ ವ್ಯವಸ್ಥೆ ಮತ್ತು ಹೊಸ ಮೌಲ್ಯ ವ್ಯವಸ್ಥೆಗಳ ನಡುವೆಯೂ ಸಂಘರ್ಷ ನಡೆದಿದೆ. ಆದರೆ ಗೆದ್ದವರೇ ಇತಿಹಾಸ ಬರೆಯುವುದರಿಂದ ಈ ಮೌಲ್ಯ ವ್ಯವಸ್ಥೆಗಳ ನಡುವಿನ ಸಂಘರ್ಷದ ಇತಿಹಾಸದಲ್ಲಿ ದಾಖಲಾಗಿರುವುದು ಕಡಿಮೆ. ಅದೇನೇ ಇದ್ದರೂ ಒಂದು ಕ್ರಾಂತಿ ಅಥವಾ ಸಾಮಾಜಿಕ ಬದಲಾವಣೆ ಆಗಬೇಕೆಂದರೆ ಅಥವಾ ಆಗುತ್ತಿದೆ ಎಂದು ಭಾವಿಸಬೇಕಾದರೆ ಸಾರಾಂಶದಲ್ಲಿ ಹಳೆಯ ಮೌಲ್ಯ ವ್ಯವಸ್ಥೆಯ ವಿರುದ್ಧವೂ ಸಂಘರ್ಷ-ಕ್ರಾಂತಿ ನಡೆದಿರಬೇಕು. ಅಂಥ ಮೌಲ್ಯ ಕ್ರಾಂತಿ ಇಲ್ಲದಿರುವ ಯಾವುದೇ ಸಾಮಾಜಿಕ 'ಹೋರಾಟ'ಗಳು ಅಥವಾ 'ಕ್ರಾಂತಿ'ಗಳು ಸಾರಾಂಶದಲ್ಲಿ ಒಂದು ನಿಜವಾದ ಅರ್ಥದಲ್ಲಿ ಹೋರಾಟವೆಂದಾಗಲೀ, ಕ್ರಾಂತಿಯೆಂದಾಗಲೀ ಕರೆಸಿಕೊಳ್ಳಲು ಅರ್ಹವಾಗಿರುವುದಿಲ್ಲ. ಅಂಥಾ ಕ್ರಾಂತಿಗಳು ಹೋರಾಟಗಳು ಶೋಷಕ ವ್ಯಕ್ತಿಗಳನ್ನು ಬದಲಿಸಿರುತ್ತದೆಯೇ ವಿನಃ ಶೋಷಕ ಶಕ್ತಿಗಳನ್ನಲ್ಲ.


ಎಲ್ಲಾ ಸಾಮಾಜಿಕ ಹೋರಾಟಗಳು ಆಳುವ ಶೋಷಕ ವರ್ಗ ಸಮಾಜದ ಶೋಷಿತ ವರ್ಗ ಅಥವಾ ದಮನಿತ ಸಮುದಾಯಗಳ ಮೇಲೆ ನಡೆಸುವ ಶೋಷಣೆ ಮತ್ತು ದಮನದ ವಿರುದ್ಧ ನಡೆಸುವ ಬಂಡಾಯವೇ ಆಗಿರುತ್ತದೆ. ಇಂದಿನ ಸಂದರ್ಭದಲ್ಲೂ ಅದು ರೈತ ಹೋರಾಟ, ದಲಿತರ ಸಂಘರ್ಷ, ಕನ್ನಡಪರ ಹೋರಾಟ, ಕಾರ್ಮಿಕರ ಪ್ರತಿಭಟನೆ, ನಕ್ಸಲೀಯರ ಸಮಗ್ರ ಬಂಡಾಯ-ಯಾವುದೇ ಇರಲಿ ಈ ಎಲ್ಲಾ ಹೋರಾಟಗಳು ತಮ್ಮ ತಮ್ಮ ನೆಲೆಯಲ್ಲಿ ಶೋಷಕ ವರ್ಗಗಳ ಆರ್ಥಿಕ, ಭಾಷಿಕ ಮತ್ತು ಸಾಮಾಜಿಕ ನೀತಿಯನ್ನು ಮಾತ್ರ ಪ್ರಶ್ನಿಸುತ್ತಿರುವುದಿಲ್ಲ, ಅದೇ ಸಮಯದಲ್ಲಿ ಅವು ಆಳುವವರ ದಮನಕಾರಿ ನೀತಿಸಂಹಿತೆ ಮತ್ತು ಮೌಲ್ಯ ವ್ಯವಸ್ಥೆಯನ್ನೂ ಪ್ರಶ್ನಿಸುತ್ತಿರುತ್ತದೆ. ಪ್ರಶ್ನಿಸಬೇಕು.

ಆದರೆ ಆ ಬಗೆಯಲ್ಲಿ ಪ್ರಶ್ನಿಸುವ ನೈತಿಕ ಶಕ್ತಿ ಚಳವಳಿಗೆ ಬರಬೇಕೆಂದರೆ ಅವು ಅದಕ್ಕೆ ಪರ್ಯಾಯವಾದ ಮೌಲ್ಯಗಳನ್ನು ಮತ್ತು ನೀತಿಸಂಹಿತೆಯನ್ನೂ ಪ್ರತಿಪಾದಿಸುತ್ತಿರಬೇಕು ಮತ್ತು ಆಚರಿಸುತ್ತಿರಬೇಕು. ಆಗ ಮಾತ್ರ ಅವು ನಿಜವಾದ ಪರ್ಯಾಯವಾಗಬಲ್ಲವು. ಅಂದರೆ ಜನಪರ ಚಳವಳಿಗಳು ಮತ್ತು ಸಂಘಟನೆಗಳು ಪರ್ಯಾಯವಾದ ಸಂಸ್ಕೃತಿ ಮತ್ತು ನೀತಿಸಂಹಿತೆಗಳನ್ನು ತಮ್ಮ ತಮ್ಮ ಸಂಘಟನೆ, ನಾಯಕತ್ವ ಮತ್ತು ಚಳವಳಿಗಳ ಮೂಲಕ ಮೊದಲಿಂದಲೇ ಕಟ್ಟಬೇಕು. ವಾಸ್ತವವಾಗಿ ಅಂಥಾ ಪ್ರಯತ್ನಗಳನ್ನು ಕರ್ನಾಟಕದಲ್ಲಿ 70-80ರ ದಶಕದಲ್ಲಿ ದಲಿತ, ರೈತ, ಕಾರ್ಮಿಕ ಚಳವಳಿಗಳು ಕಟ್ಟಲು ಯತ್ನಿಸಿದ್ದವು. ಅದಕ್ಕೆ ಅವು ರಾಜ್ಯಾಧಿಕಾರ ಪಡೆಯದಿದ್ದರೂ ಪ್ರಬಲ ವಿರೋಧ ಪಕ್ಷಗಳಾಗಿಯೂ, ಪ್ರಬಲ ಪರ್ಯಾಯ ನೈತಿಕ ಶಕ್ತಿಯಾಗಿಯೂ, ಸಮಾಜದ ಸಾಕ್ಷಿಪ್ರಜ್ಞೆಗಳಾಗಿಯೂ ಕೆಲಸ ಮಾಡಿದ್ದವು. ಈಗ ಅಂಥಾ ಚಳವಳಿಗಳಲ್ಲಿದ್ದ ಹಲವರು ಅಧಿಕಾರ ಹಂಚಿಕೊಂಡಿದ್ದಾರೆ. ಆದರೆ ಚಳವಳಿಗಳು ಈಗಲೂ ಅದೇ ಬಗೆಯ ಪ್ರಬಲ ನೈತಿಕ ಅಂತಸಾಕ್ಷಿಯನ್ನು ಉಳಿಸಿಕೊಂಡಿವೆಯೇ? ಇಂದು ಕರ್ನಾಟಕದಲ್ಲಿ ಚಳವಳಿ ರಾಜಕಾರಣದಲ್ಲಿ ಕಂಡುಬರುತ್ತಿರುವ ಸ್ತಬ್ಧತೆಗೂ ಮತ್ತು ಚಳವಳಿಗಳು ಎದುರಿಸುತ್ತಿರುವ ನೈತಿಕ-ಸಾಂಸ್ಕೃತಿಕ ಬಿಕ್ಕಟ್ಟಿಗೂ ಏನಾದರೂ ಸಂಬಂಧವಿರಬಹುದೇ?

ಉದಾಹರಣೆಗೆ ಕಣ್ಣೆದುರಿಗೇ ರೈತರ ಆತ್ಮಹತ್ಯೆಗಳು ದಿನನಿತ್ಯ ನಡೆಯುತ್ತಿದ್ದರೂ ಪ್ರಧಾನಿ ಮನಮೋಹನ್ ಸಿಂಗ್ "ಬಡವರಿಗೆ ಉಚಿತವಾಗಿ ಆಹಾರ ಧಾನ್ಯವನ್ನು ಒದಗಿಸುವುದಕ್ಕಿಂತ ಅದನ್ನು ಗೋಡೌನಿನಲ್ಲಿ ಕೊಳೆಯಲು, ಇಲಿಗಳು ತಿನ್ನಲು ಬಿಡುವುದೇ ಹೆಚ್ಚು ಸೂಕ್ತ. ಏಕೆಂದರೆ ಹಾಗೆ ಉಚಿತವಾಗಿ ಕೊಟ್ಟರೆ ಮಾರುಕಟ್ಟೆ ಆರ್ಥಿಕತೆಯ ಸಹಜ ನಡೆಯಲ್ಲಿ ಮಧ್ಯಪ್ರವೇಶ ಮಾಡಿದಂತಾಗುತ್ತದೆ" ಎಂದು ಹೇಳುವಾಗ ಅವರು ಕೇವಲ ಒಂದು ಆರ್ಥಿಕ ನೀತಿಯನ್ನು ಪ್ರತಿಪಾದಿಸುತ್ತಿಲ್ಲ. ಬದಲಿಗೆ ಸಹಜೀವಿಗಳು ಹಸಿವಿನಿಂದ ನೊಣಗಳಂತೆ ಸಾಯುತ್ತಿದ್ದರೂ ಕೆಲವರ ಲಾಭವೇ ಮುಖ್ಯ ಎಂಬ ಶೋಷಕ ಮೌಲ್ಯವನ್ನು ಮತ್ತು ನೀತಿಸಂಹಿತೆಯನ್ನು ಪ್ರತಿಪಾದಿಸುತ್ತಿದ್ದಾರೆ. ಪ್ರಧಾನಿಯ ಈ ನೀತಿಯನ್ನು ಪ್ರತಿಭಟಿಸುವ ರೈತಸಂಘಗಳು ಮನಮೋಹನ್ ಸಿಂಗ್ ಪ್ರಣೀತ ಈ ಬಂಡವಾಳಶಾಹಿ ಆರ್ಥಿಕ ನೀತಿಗಳನ್ನು ಮಾತ್ರ ಪ್ರತಿಭಟಿಸಿದರೆ ಸಾಲದು. ಅದರ ಜೊತೆಗೆ ಅದರ ಹಿಂದಿರುವ ಬಂಡವಾಳಶಾಹಿ, ಬರ್ಬರ ನೀತಿಸಂಹಿತೆಯನ್ನೂ ಪ್ರತಿಭಟಿಸಬೇಕಾಗುತ್ತದೆ. ಅದಕ್ಕೇ ಪರ್ಯಾಯವಾದ ನೀತಿಸಂಹಿತೆ ರೈತ ಸಂಘದ ಹೋರಾಟ ಪ್ರಣಾಳಿಕೆಯ ಭಾಗವೇ ಆಗಬೇಕಿರುತ್ತದೆ. ಆರ್ಥಿಕ ನೀತಿಯ ವಿರುದ್ಧದ ಹೋರಾಟ ಧರಣಿ, ಮುತ್ತಿಗೆಗಳ ರೂಪದಲ್ಲಿ ನಡೆಯಬಹುದು. ಆದರೆ ಒಂದು ದಮನಕಾರಿ ನೀತಿ ಸಂಹಿತೆಯ ವಿರುದ್ಧದ ಬಂಡಾಯ ಚಳವಳಿಗಾರರ ಬದುಕಿನಲ್ಲಿ ಮತ್ತು ಚಳವಳಿಗಳ ಸಂಘಟನಾ ನೀತಿ-ಸಂಸ್ಕೃತಿ ಮತ್ತು ಕ್ರಮಗಳಲ್ಲೇ ಪ್ರತಿಫಲಿತವಾಗುವ ಅಗತ್ಯವಿದೆ. ಇಲ್ಲದಿದ್ದರೆ ಅದು ಸಮಗ್ರ ಪ್ರತಿರೋಧವಾಗುವುದೇ ಇಲ್ಲ.

ಅದೇರೀತಿ ಕಾರ್ಮಿಕ ಸಂಘಟನೆಗಳು ಬಂಡವಾಳಶಾಹಿ ಮಾಲೀಕರ ವಿರುದ್ಧ ಹೋರಾಡುವಾಗ ಬಂಡವಾಳಶಾಹಿ ನೀತಿಸಂಹಿತೆಯೇ ಆದ ಸ್ವಾರ್ಥ, ಸುಲಿಗೆಯ ಮನೋಭಾವದ ವಿರುದ್ಧವೂ ಹೋರಾಡದಿದ್ದರೆ ಮತ್ತು ತಮ್ಮ ಸಂಘಟನಾ ಸಂಸ್ಕೃತಿಯಲ್ಲಿ ಮತ್ತು ಹೋರಾಟಗಳಲ್ಲಿ ಇದಕ್ಕೆ ಪರ್ಯಾಯ ಮೌಲ್ಯಗಳಾದ ನಿಸ್ವಾರ್ಥ, ಸಹಕಾರ ಇತ್ಯಾದಿ ಮೌಲ್ಯಗಳು ಮತ್ತು ಇರುವುದನ್ನು ಸಮಾನವಾಗಿ ಹಂಚಿ ತಿನ್ನುವ ಮನೋಭಾವಗಳನ್ನು ಹೊಂದಿರದಿದ್ದರೆ ಆ ಸಂಘಟನೆಯೂ ಗಟ್ಟಿಯಾಗುವುದಿಲ್ಲ. ಹೋರಾಟವೂ ಯಶಸ್ವಿಯಾಗುವುದಿಲ್ಲ. ವಾಸ್ತವವಾಗಿ ಕಾರ್ಮಿಕ ಕ್ರಾಂತಿಯಿಂದ ರಷ್ಯಾ ಹಾಗೂ ಪೂರ್ವ ಯೂರೋಪುಗಳಲ್ಲಿ ರಾಜ್ಯಾಧಿಕಾರ ಪಡೆದ ಕಾರ್ಮಿಕ ವರ್ಗವು ಅಲ್ಲಿ ಅಧಿಕಾರವನ್ನು ಕಳೆದುಕೊಳ್ಳಲು ಪ್ರಧಾನ ಕಾರಣ ಅಲ್ಲಿನ ಕಾರ್ಮಿಕ ವರ್ಗದ ನಾಯಕತ್ವದಲ್ಲಿ ಬಂಡವಾಳಶಾಹಿ ಮೌಲ್ಯಗಳೇ ಕ್ರಮೇಣವಾಗಿ ಆವರಿಸಿಕೊಂಡಿದ್ದು. ಪರ್ಯಾಯ ಮೌಲ್ಯ ವ್ಯವಸ್ಥೆಯ ಆಧಾರದಲ್ಲಿ ಸಮಾಜವನ್ನು ಕಟ್ಟಲು ಪ್ರಯತ್ನಿಸದೇ ನಾಯಕತ್ವವೇ ಬಂಡವಾಳಶಾಹಿ ನೀತಿ-ಸಂಸ್ಕೃತಿಯನ್ನು ಮೈಗೂಡಿಸಿಕೊಂಡು ಕ್ರಾಂತಿಗೆ ಮತ್ತು ಕಾರ್ಮಿಕ ವರ್ಗಕ್ಕೆ ದ್ರೋಹ ಬಗೆದದ್ದು.


ಅದೇ ರೀತಿ ಬ್ರಾಹ್ಮಣ್ಯದ ವಿರುದ್ಧ ನಡೆಯಬೇಕಾದ/ನಡೆಯುತ್ತಿರುವ ದಲಿತ ಸಂಘರ್ಷವೂ ಒಂದು ಪರ್ಯಾಯ ನೀತಿಸಂಹಿತೆಯನ್ನು ಮೈಗೂಡಿಸಿಕೊಳ್ಳಬೇಕಾಗುತ್ತದೆ. ಬ್ರಾಹ್ಮಣ್ಯ ನಿಂತಿರುವುದೇ ತಾರತಮ್ಯ ನೀತಿಯ ಆಧಾರದಲ್ಲಿ ಮತ್ತು ದಮನವನ್ನೂ ಸಹ ತತ್ವದ ಮಟ್ಟಕ್ಕೆ ಏರಿಸುವ ತಾತ್ವಿಕ ಮತ್ತು ನೈತಿಕ ಭ್ರಷ್ಟಾಚಾರದ ಆಧಾರದಲ್ಲಿ. ಹೀಗಾಗಿ ಬ್ರಾಹ್ಮಣ್ಯದ ಈ ಅನೈತಿಕ ತಾತ್ವಿಕ ಸಮರ್ಥನೆಯ ಬೆಂಬಲದೊಂದಿಗೆ ಮೇಲ್ಜಾತಿಗಳು ದಲಿತರ ಮೇಲೆ ನಡೆಸುವ ದೌರ್ಜನ್ಯಗಳ ವಿರುದ್ಧ, ವ್ಯವಸ್ಥಿತ ಅಸಮಾನತೆಯ ವಿರುದ್ಧ ದಲಿತ ಸಂಘಟನೆಗಳು ನಡೆಸುವ ಸಂಘರ್ಷದಲ್ಲಿ, ಈ ಭ್ರಷ್ಟಾಚಾರದ ವಿರುದ್ಧ ಮತ್ತು ಅದನ್ನು ತತ್ವದ ಮಟ್ಟಕ್ಕೆ ಏರಿಸುವ ಬ್ರಾಹ್ಮಣೀಯ ಅನೈತಿಕತೆಯ ವಿರುದ್ಧವೂ ಸಂಘರ್ಷವಿರಬೇಕಾದ ಅಗತ್ಯವಿದೆ. ಅಸಮಾನತೆ ಮತ್ತು ಅಸಮಾನತೆಯನ್ನು ಮುಂದುವರೆಸಲು ಅವರು ಬಳಸುವ ಪ್ರತಿಭೆಯೆಂಬ ಬ್ರಾಹ್ಮಣೀಯ ಕುತರ್ಕದ ವಿರುದ್ಧ ಸಮಾನತೆ ಮತ್ತು ಇವರ ಸಂಚಿನ ಎದುರು 'ಅಪ್ರತಿಭ'ರಾದವರಿಗೆ ಸಂಪನ್ಮೂಲಗಳಲ್ಲಿ ಮೊದಲ ಆದ್ಯತೆಯೆಂಬ ನೀತಿಸಂಹಿತೆಯನ್ನು ಅನುಸರಿಸಬೇಕಾಗುತ್ತದೆ. ಯಾವ ಕಾರಣಕ್ಕೂ ಕೆಲವರನ್ನು ಮತ್ತು ತಮ್ಮೊಳಗೆ



ಸೇರಿಸಿಕೊಂಡುಬಿಡುವ ಬ್ರಾಹ್ಮಣೀಯ ನೀತಿಗಳ ಬಗ್ಗೆ ಎಚ್ಚರವಾಗಿರುವ ಮತ್ತು ಯಾವ ಕಾರಣಕ್ಕೂ ತಾತ್ವಿಕ ಭ್ರಷ್ಟಾಚಾರಕ್ಕೆ ಒಳಗಾಗದ ಮತ್ತು ಅದರ ಮುಂದುವರಿಕೆಯೇ ಆದ ಆರ್ಥಿಕ ಭ್ರಷ್ಟತೆಗೊಳಗಾಗದಂಥ ಎಚ್ಚರವನ್ನು ಕಾಪಾಡಿಕೊಳ್ಳಬೇಕಾಗುತ್ತದೆ. ಯಾವಾಗ ದಲಿತ ಸಂಘರ್ಷವು ಈ ನೈತಿಕ ನೆಲೆಯಲ್ಲಿ ರಾಜಿ ಮಾಡಿಕೊಳ್ಳುತ್ತದೋ/ರಾಜಿ ಮಾಡಿಕೊಂಡಿತೋ, ಆಗಲೇ ದಲಿತ ಸಂಘರ್ಷದ ಅವನತಿಯೂ ಕರ್ನಾಟಕದಲ್ಲಿ ಪ್ರಾರಂಭಗೊಂಡಿತು! ಎಲ್ಲೆಲ್ಲಿ ದಲಿತ ಪ್ರತಿರೋಧಗಳು ಇಂಥಾ ಬ್ರಾಹ್ಮಣೀಯ ನೀತಿಸಂಹಿತೆಯ ಜೊತೆ ರಾಜಿ ಮಾಡಿಕೊಂಡಿಲ್ಲವೋ ಅಲ್ಲೆಲ್ಲಾ ಇನ್ನೂ ಹೋರಾಟದ ಕಿಡಿ ಜ್ವಲಂತವಾಗಿದೆ.

ಹಾಗೆಯೇ ಕನ್ನಡದ ಅಸ್ಮಿತೆಯನ್ನು ಎತ್ತಿಹಿಡಿಯಲು ಬಯಸುವ ಕನ್ನಡ ಹೋರಾಟಗಳೂ ಸಹ ದಮನ, ಶೋಷಣೆ, ಭ್ರಷ್ಟಾಚಾರ ರಹಿತವಾದ ನೀತಿ ಸಂಹಿತೆ ಮತ್ತು ಪರ್ಯಾಯ ಮೌಲ್ಯ ಪದ್ಧತಿಗಳನ್ನು ಆಚರಿಸದಿದ್ದರೆ ಅದು ಯಾವುದೇ 'ಪ್ರಗತಿಪರ' ಹಣೆಪಟ್ಟಿಯನ್ನು ಹೊರಲೂ ಸಾಧ್ಯವಾಗುವುದಿಲ್ಲ. ಕನ್ನಡದ ಮೇಲೆ ಇಂಗ್ಲಿಷ್ ಅಥವಾ ಸಂಸ್ಕೃತ ಹೇರಿಕೆ ಅಥವಾ ಕೇಂದ್ರದ





ತಾರತಮ್ಯ ನೀತಿ ಇತ್ಯಾದಿಗಳ ವಿರುದ್ಧ ಹೋರಾಡುವ ಕನ್ನಡ ಪ್ರಜ್ಞೆ ಸಾರಾಂಶದಲ್ಲಿ ದಮನ, ಶೋಷಣೆ ಮತ್ತು ತಾರತಮ್ಯಗಳನ್ನು ಮಾಡುವ ಅಧಿಕಾರ ಕೇಂದ್ರಗಳ ಜೊತೆ ಯಾವುದೇ ಬಗೆಯ ಅನುಸಂಧಾನಗಳನ್ನು ಇಟ್ಟುಕೊಳ್ಳದಿರುವುದು ಪೂರ್ವಶರತ್ತು.

ಆದರೆ, ಅಂಥಾ ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಕೇಂದ್ರಗಳ ಜೊತೆ ಮಾಡಿಕೊಳ್ಳುವ ಅನುಸಂಧಾನಗಳು ಕೇವಲ ತಾಂತ್ರಿಕವಾಗಿ ಉಳಿದುಕೊಳ್ಳದೇ ನೈತಿಕ ಮತ್ತು ಸೈದ್ಧಾಂತಿಕ ಸ್ವೇಚ್ಛಾನುಸಂಧಾನಕ್ಕೂ ಎಡೆ ಮಾಡಿಕೊಡುತ್ತಿರುವುದನ್ನೇ ನಾವು ಉದ್ದಕ್ಕೂ ನೋಡುತ್ತಾ ಬಂದಿರುವುದು. ಹೀಗಾಗಿಯೇ ಕೆಲವು ಅಪವಾದಗಳನ್ನು ಹೊರತುಪಡಿಸಿದರೆ ಬಹುಪಾಲು ಕನ್ನಡ ಸಂಘಟನೆಗಳು ಕನ್ನಡದ ಮತ್ತು ಕನ್ನಡಿಗರ ನಿಜವಾದ ಹಾಗೂ ಪ್ರಬಲರಾದ ಶತ್ರುಗಳ ಜೊತೆ ರಾಜಿಯನ್ನು ಮಾಡಿಕೊಂಡು, ದುರ್ಬಲರನ್ನು ಮಾತ್ರ ಟಾರ್ಗೆಟ್ ಮಾಡಿಕೊಂ ಶೋಷಕ ವರ್ಗಗಳ ರಾಜಕಾರಣವನ್ನೇ ನಡೆಸುತ್ತಿರುವುದು. ಕನ್ನಡಪ್ರಜ್ಞೆ ನಿಜವಾದ ಶತ್ರುಗಳಾದ ಬ್ರಾಹ್ಮಣೀಯ ಕೋಮುವಾದಿ ಶಕ್ತಿಗಳೊಂದಿಗೆ ತಾ ಅನುಸಂಧಾನವನ್ನೂ ಮಾಡಿಕೊಂಡು ಒಳಗಿನಿಂದಲೇ ಕನ್ನಡವನ್ನು ಕೊಲ್ಲುತ್ತಿರುವು (ಕೆಲವು ವರ್ಷಗಳ ಹಿಂದೆ ರಾಜ್‌ಕುಮಾರ್‌ರನ್ನು ವೀರಪ್ಪನ್ ಅಪಹರಿಸಿದ ಒಂದು ಕನ್ನಡ ಸಂಘಟನೆ ಒಂದು ಧರಣಿ ಕಾರ್ಯಕ್ರಮವನ್ನು ಏರ್ಪಡಿಸಿ ಅಲ್ಲಿ ಮಾತನಾಡಿದ ಒಬ್ಬ ಪ್ರಗತಿಪರ ಕನ್ನಡ ಸಾಹಿತಿಗಳು "ಪ್ರತಿಯೊ ತಮಿಳಿಗನ ಮನಸ್ಸಿನಲ್ಲಿಯೂ ಒಬ್ಬ ವೀರಪ್ಪನ್ ಇರುತ್ತಾನೆ" ಎಂದು ಅ ಕೊಡಿಸಿದ್ದರು. ಅದಕ್ಕೆ ಕೆಲವು ದಿನಗಳ ಮುಂಚೆ ಕೋಮುವಾದಿ ಬುದ್ಧಿಜೀವಿಯ ಚಿದಾನಂದ ಮೂರ್ತಿಗಳು "ಪ್ರತಿಯೊಬ್ಬ ಮುಸ್ಲಿಮನ ಮನಸ್ಸಿನಲ್ಲಿಯೂ ಒಂ ಪಾಕಿಸ್ತಾನವಿರುತ್ತದೆ" ಎಂದು ಘೋಷಿಸಿದ್ದರು. ಇಲ್ಲಿ ಅವರಿಬ್ಬರ ಹೇಳಿಕೆ ನಡುವೆ ಇರುವ ಸಾಮ್ಯತೆ ಕೇವಲ ವಾಕ್ಯಗಳದ್ದಲ್ಲ, ಭಾಷಾ ದುರಭಿಮ ಮತ್ತು ಧಾರ್ಮಿಕ ದುರಭಿಮಾನಗಳಿಗಿರುವ ಸಾಮ್ಯತೆಯದು. ಎರಡ ದುರಭಿಮಾನಗಳು ಫ್ಯಾಸಿಸ್ಟ್ ಆಗಿಬಿಡಬಹುದಾದ ಶಕ್ತಿ ಹೊಂದಿದೆ ಎಂ ಎಚ್ಚರಿಸುವ ಸಾಮ್ಯತೆಯದು. ಭಾಷಾ ಮತ್ತು ಕೋಮುವಾದಿ ಫ್ಯಾಸಿ ಶಕ್ತಿಗಳ ನಡುವೆ ಏರ್ಪಡುವ ಮೈತ್ರಿಯ ಸಾಧ್ಯತೆಯನ್ನು ಸೂಚಿಸುವ ಸಾಮ್ಯತೆಯ ಭಾಷಾ ಹೋರಾಟ ಜನಪರ ಹೋರಾಟವೇ ಆಗಿದ್ದರೂ ಅದನ್ನು ಪ್ರಜಾತಾಂ ನೆಲೆಯಲ್ಲಿ ವಿವರಿಸಿಕೊಳ್ಳದಿದ್ದರೆ ಹೇಗೆ ಅದು ಕೋಮುವಾದಿಯ ಆಗಿಬಿಡಬಹುದು ಎಂದು ತೋರಿಸುವ ಸಾಮ್ಯತೆಯದು. ಜನಪರ ಹೋರಾಟ ಮೌಲ್ಯ ಮತ್ತು ನೀತಿಸಂಹಿತೆ ಶೋಷಣೆ ಮತ್ತು ದಮನ ಮಾಡುವ ಶಕ್ತಿ ಮೌಲ್ಯವಾದ ತಾರತಮ್ಯ, ದಬ್ಬಾಳಿಕೆ, ಭ್ರಷ್ಟಾಚಾರ ಇವುಗಳಿಗಿಂತ ಭಿನ್ನವಾಗಿರದಿ ಅವು ಮತ್ತೊಂದು ಜನವಿರೋಧಿ ಶಕ್ತಿಯೇ ಆಗಿಬಿಡುತ್ತವೆ ಎಂದು ತೋರಿಸ ಸಾಮ್ಯತೆಯದು. ಈ ತಾತ್ವಿಕ, ನೈತಿಕ ಭ್ರಷ್ಟಾಚಾರವೇ ಹಲವು ಕನ್ನಡ ಸಂಘಟನೆ ಕನ್ನಡ ಚಳವಳಿಯನ್ನು ಒಂದು ಉದ್ದಿಮೆಯಾಗಿಯೂ, ದಂಧೆಯನ್ನಾಗಿಯ ನಡೆಸುವಷ್ಟು ಮತ್ತು ಅದನ್ನು ಪ್ರಶ್ನಿಸಿದರೂ ಸಮರ್ಥಿಸಿಕೊಳ್ಳುವಷ್ಟು "ನೈತಿ ಬಲವನ್ನು ತಂದುಕೊಟ್ಟಿರುವುದು!!

ಇದೊಂದು ದುರಂತ. ಶೋಷಕ ರಾಜಕೀಯ, ಸಾಮಾಜಿಕ, ಸಾಂಸ್ಕೃ ಅಧಿಕಾರ ಕೇಂದ್ರಗಳ ವಿರುದ್ಧ ನಡೆಯುವ ಬಹುಪಾಲು ಚಳವಳಿಗಳು (ಕೆಲ ಅಪವಾದಗಳನ್ನು ಹೊರತುಪಡಿಸಿ) ರೂಢಿಗತ ಮೌಲ್ಯ ವ್ಯವಸ್ಥೆಗ ಪರ್ಯಾಯವಾದ ನೀತಿಸಂಹಿತೆ ಮತ್ತು ಮೌಲ್ಯ ವ್ಯವಸ್ಥೆಯನ್ನು ಅಂತರಂಗದ ರೂಢಿಸಿಕೊಳ್ಳದಿರುವುದೇ ಇಂದು ಕರ್ನಾಟಕದಲ್ಲಿ ನಾವು ಕಾಣುತ್ತಿರು ಪರ್ಯಾಯ ರಾಜಕಾರಣದ ಸ್ತಬ್ಧತೆಗೆ ಕಾರಣವಿರಬೇಕು.

ಶೋಷಕ ವ್ಯವಸ್ಥೆಗೆ ಪರ್ಯಾಯ ಸೃಷ್ಟಿಯಾಗುವುದು ಶೋಷಣೆ ಮ ದಮನಕ್ಕೆ ಪರ್ಯಾಯವಾದ ಮೌಲ್ಯಗಳು ಸಮಾಜದಲ್ಲಿ ಗಟ್ಟಿಗೊಂಡ ಮಾತ್ರ. ಅದನ್ನು ಸಮಾಜದಲ್ಲಿ ಬೇರೂರಿಸಬೇಕಾಗಿರುವುದು ಸಾಮಾ ಚಳವಳಿಗಳೇ. ಆದರೆ ಆ ಚಳವಳಿಗಳಲ್ಲೇ ಈ ಬಗೆಯ ಶೋಷಕ ಮೌಲ್ಯಗ ನಿಧಾನವಾಗಿ ಬೇರೂರುತ್ತಿರುವುದು ವರ್ತಮಾನದ ಅತಿದೊಡ್ಡ ದುರಂತ.

ನಮ್ಮ ಸಂದರ್ಭದ ವಿಶೇಷತೆ ಎಂದರೆ ಇದರ ಬಗ್ಗೆ ಕಳವಳವುಳ್ಳವ ಸಹ ಮೌನವಾಗಿರುವುದು. ಭ್ರಷ್ಟರ ಧ್ವನಿ ಮತ್ತು ಶಕ್ತಿ ದೊಡ್ಡದಿರುವುದರಿ ಅಸಹಾಯಕತೆ ಮತ್ತು ಬೇಜವಾಬ್ದಾರಿಯಿಂದಲೂ ಕರ್ನಾಟಕದ ಚಳವಳಿ ರಾಜಕಾರಣದಲ್ಲಿ ಒಂದು ಬಗೆಯ ಅನೀತಿಯುತ ಸಮತೋಲನ ಏರ್ಪಟ್ಟ ಇದರ ಪರಿಣಾಮವೇನೆಂದರೆ ಚಳವಳಿಗಳ ರಾಜಕಾರಣವೂ ಪರ್ಯಾಯ ಸೃಷ್ಟಿ ಮಾಡುವುದಿರಲಿ ಸಮಾಜದಲ್ಲಿ ಒಂದು ಪ್ರಬಲ ನೈತಿಕಶಕ್ತಿಯಾಗಿಯ ಸಾಕ್ಷಿ ಪ್ರಜ್ಞೆಯಾಗಿಯೂ ಉಳಿದುಕೊಂಡಿಲ್ಲ. ಈ ಮೌನ ಮುರಿಯಬೇ ಇಂಗ್ಲಿಷ್ ಕವಿ ಯೇಟ್ಸ್ ಹೇಳುವಂತೆ ಇಂದಿನ ಸಂದರ್ಭ **"The be lack all conviction, while the worst are full passionate intensity"** ಎಂಬಂತೆಯೇ ಇದೆ.

ಇದು ಫ್ಯಾಸಿಸ್ಟ್ ಶಕ್ತಿಗಳು ಪ್ರಬಲವಾಗುವುದಕ್ಕೂ ಹೇಳಿಮಾಡಿಸಿದ ಸಂದ ಈ ಕರ್ನಾಟಕ ಜನರ ಕರ್ನಾಟಕವಾಗಿ ಉಳಿಯಲೂ ಮತ್ತು ಇತಿಹಾಸದುದ್ದ ಸೌಹಾರ್ದಶೀಲ ಮತ್ತು ಪ್ರಜಾಸತ್ತಾತ್ಮಕ ಪ್ರಜ್ಞೆಯಾಗಿಯೇ ಸಜೀವವಾಗಿರ ಕನ್ನಡ ಪ್ರಜ್ಞೆ ಭ್ರಷ್ಟವಾಗದಿರಲೂ ಇಂದು ಚಳವಳಿಗಳ ಮಾನಸಿಕತೆಯ ಉಂಟಾಗಿರುವ ಈ ಅನೀತಿಯುತ ಸಮತೋಲನ ಬದಲಾಗಬೇಕು. ಒಂ ನೈತಿಕ ಮತ್ತು ಮೌಲಿಕವಾದ ಅಂತರಂಗಿಕ ಸಂಘರ್ಷವಾಗಬೇಕು. ಈ ತಲ ಮತ್ತು ಮಥನದಲ್ಲಿ ಪ[illegible]ಗೊಂಡು ಹೊಸ ಮನುಷ್ಯರಾಗಿ ಹೊರಬ ಹೊಸ ಸಮಾಜ ಹೇಗೆ [illegible]ನೇ ಸೃಷ್ಟಿಯಾದೀತು?

ನೋ ಕಾಮೆಂಟ್ಸ್

"ತಾನು ಅನುಮತಿ ನೀಡಿರುವ ಎಲ್ಲಾ ವಿದ್ಯುತ್ ಯೋಜನೆಗಳು ಜಾರಿಗೆ ಬರಲು ಸಾಧ್ಯವಿಲ್ಲ ಎಂದು ಸರ್ಕಾರಕ್ಕೆ ಎಷ್ಟು ಬೇಗ ಮನವರಿಕೆ ಆದರೆ ಅಷ್ಟು ಒಳ್ಳೆಯದು. ಸರ್ಕಾರದ ಹುಚ್ಚುತನ ಹೇಗಿದೆಯೆಂದರೆ ಅರುಣಾಚಲ ಪ್ರದೇಶದಲ್ಲಿ ಹರಿಯುವ ಪ್ರತಿಯೊಂದು ನದಿ-ತೊರೆಗಳ ಮೇಲೂ ಸರಾಸರಿ ಹತ್ತು ಹೈಡಲ್ ಪವರ್ ಯೋಜನೆಗಳಿವೆ. ಏನಿಲ್ಲವೆಂದರೂ 50,000 ಮೆಗಾವ್ಯಾಟಿನಷ್ಟು ವಿದ್ಯುಚ್ಛಕ್ತಿ ಉತ್ಪಾದನೆ ಮಾಡುವ 150 ಒಪ್ಪಂದಗಳಿಗೆ ಸಹಿ ಹಾಕಲಾಗಿದೆ. ಛತ್ತೀಸ್‌ಘಡದ ದಾಬ್ರಾ ಪ್ರಾಂತ್ಯದಲ್ಲಿ ಕೇವಲ 10 ಕಿಮೀ ಸುತ್ತಳತೆಯಲ್ಲಿ 9 ಶಾಖೋತ್ಪನ್ನ ವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸಲಾಗಿದೆ. ಅಲ್ಲಿನ ಜಾಂಗೀರ್-ಚಂಪಾ ಜಿಲ್ಲೆಯೊಂದರಲ್ಲೇ 49 ವಿದ್ಯುತ್ ಯೋಜನೆಗಳಿಗೆ ಅನುಮತಿ ನೀಡಲಾಗಿದೆ. ಈ ಹುಚ್ಚುತನ ನಿಲ್ಲಲೇ ಬೇಕು."

- ಸುನೀತಾ ನಾರಾಯಣ್,
ಡೌನ್ ಟು ಅರ್ಥ್ ಪತ್ರಿಕೆಯ ಸಂಪಾದಕಿ


"ನೀವು ಪಶ್ಚಿಮದಿಂದ ಪೂರ್ವದ ಕಡೆ ಲೂಟಿ-ದರೋಡೆ ಮಾಡುತ ಹೊರಟರೆ ನಿಮ್ಮನ್ನು ಅಲೆಕ್ಸಾಂಡರ್ ತರಹದ ಮಹಾನ್ ವ್ಯಕ್ತಿ ಎಂದ ಕೊಂಡಾಡಲಾಗುತ್ತದೆ. ಆದರೆ ನೀವು ಪೂರ್ವಮೂಲದಿಂದ ಪಶ್ಚಿಮದ ಮೇ ದಂಡೆತ್ತಿ ಹೊರಟರೆ ನಿಮ್ಮನ್ನು ಚೆಂಗೀಸ್ ಖಾನ್‌ನಂಥ ಬರ್ಬರ ದರೋಡೆಕೋ ಎಂದು ಬಣ್ಣಿಸಲಾಗುತ್ತದೆ."

- ಜಾವೇದ್ ಅಖ್ತರ್

"ಈ ಖಾಪ್ ಪಂಚಾಯತ್‌ಗಳ ನಾಯಕರಿಗೆ ತಮ್ಮ ಪಂಚಾಯತ್‌ಗಳ ನಿಜಕ್ಕೂ ತಮ್ಮ ಸಮುದಾಯವನ್ನು ರಕ್ಷಿಸಲೆಂದೇ ಇವೆ ಎಂ ದೃಢವಿಶ್ವಾಸವಿರುವುದಾದರೆ ಅವರು ಅಜಯ್ ದೇವಗನ್ ನಾಯಕನಾ ತೆರೆಗೆ ಬರುತ್ತಿರುವ 'ಆಕ್ರೋಶ್' ಚಿತ್ರದ ಬಗ್ಗೆಯಾಗಲೀ, 'ಕಲರ್ಸ್' ಹಿಂದಿ ಚಾನೆಲ್‌ನಲ್ಲಿ ಇದರ ಬಗ್ಗೆ ಬರಲಿರುವ ಧಾರಾವಾಹಿಗಳ ಬಗ್ಗೆಯಾಗಲಿ ತಲೆಕೆಡಿಸಿಕೊಳ್ಳುವ ಅಗತ್ಯವೇ ಇಲ್ಲವಲ್ಲ!"

- ರಂಜೂ ಕುಮಾರ್, ಚಿಂತ

ಮನಮೋಹನ್ ಸಿಂಗ್ ಶೈಲಿ ರೇಷ್ಮೆ ಶಾಲಿನಿಂದ ಚಪ್ಪಲಿಯೇಟು....



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com


ಪ್ರಧಾನಿ ಮನಮೋಹನ್ ಸಿಂಗ್ ಅವರನ್ನು ಸೂಕ್ಷ್ಮ ...ಸ್ಸಿನ ವ್ಯಕ್ತಿ ಭಾರತದ ಆರ್ಥಿಕ ವ್ಯವಸ್ಥೆಯನ್ನೇ ಬದಲಾಯಿ... ಆರ್ಥಿಕ ತಜ್ಞ, ಸರಳ ಜೀವಿ ಮತ್ತು ಸಜ್ಜನ ವ್ಯಕ್ತಿ ...ದೆಲ್ಲಾ ಹಲವರು ಬಣ್ಣಿಸುತ್ತಾರೆ. ಆದರೆ ಆ ಮೆಲುದನಿಯ ...ತ್ತು ಮೃದು ಮುಖದ ಹಿಂದೆ ಅದೆಂತಹ ಕಠೋರ ...ಯ ಅಡಗಿದೆ ಎಂಬುದು ಮತ್ತೆ ಮತ್ತೆ ಸಾಬೀತಾಗುತ್ತಿದೆ. ...ರಿಕದ ಗುಲಾಮನಂತೆ ವರ್ತಿಸುವ ಮನಮೋಹನ್ ...್ ಅವರಿಗೆ ಈ ರಾಷ್ಟ್ರದ ಪ್ರಜೆಗಳ ಸುರಕ್ಷತೆಗಿಂತ ...ರಿಕ ಬಂಡವಾಳಶಾಹಿ ಕಂಪನಿಗಳ ಲಾಭವೇ ಮುಖ್ಯ ...ಬುದನ್ನು ಅಣು ಅವಘಡ ...ಣೆಗಾರಿಕೆ ಕಾಯಿದೆ ಬಯಲು ...ಸಿತ್ತು. ಹಾಗೆಯೇ ಸಿಂಗ್ ...ರ್ಥಿಕವಾಗಿ ಎಷ್ಟು 'ಜಾಣ' ...ದರೆ ಅವರ ಅಧಿಕಾರಾವಧಿ ...ಲ್ಲಿ ಈ ದೇಶದ 49 ಜನ ...ಲರ್‌ಗಳಲ್ಲಿ ಬಿಲಿಯಾಧೀಶ ...ದ್ದರೆ, ಸುಮಾರು ಒಂದು ಲಕ್ಷ ಡಾಲರ್‌ಗಳಲ್ಲಿ ಮಿಲಿಯಾ...ಧರಾಗಿದ್ದರೆ, ಅದೇ ಹೊತ್ತಿಗೆ ಇದೇ ಭಾರತದ ಸುಮಾರು ...ಕೋಟಿ ಜನ ದಿನಕ್ಕೆ ಕೇವಲ ಇಪ್ಪತ್ತು ರೂಪಾಯಿಗಳನ್ನು ...ತ್ರ ಗಳಿಸುವಂತಹ ದಾರಿದ್ರ್ಯ ಪರಿಸ್ಥಿತಿಗೆ ದೂಡಲ್ಪಟ್ಟಿದ್ದಾರೆ. ...ಯ 49 ಜನ ಬಿಲಿಯಾಧೀಶರು, ಎಲ್ಲಿಯ 40 ...ಟಿ ಬಡಬಗ್ಗರು? ಇದೆಂತಹ ಆರ್ಥಿಕ ತಜ್ಞತೆ?

ಇದೇ ಸಿಂಗ್ ಮೊನ್ನೆ ತಾನೆಷ್ಟು ಬಡವರ ವಿರೋಧಿ ...ಬುದನ್ನು ಮತ್ತೊಮ್ಮೆ ಬಟಾಬಯಲಾಗಿಸಿದ್ದಾರೆ.

ಈಗ ಎಲ್ಲರಿಗೂ ಗೊತ್ತಿರುವಂತೆ ಭಾರತದ ಹಲವಾರು ...ದಾಮುಗಳಲ್ಲಿ ಲಕ್ಷಾಂತರ ಟನ್‌ಗಳಷ್ಟು ಆಹಾರ ...ನ್ಯಗಳು ಕೊಳೆಯುತ್ತಿದ್ದು ಅವುಗಳನ್ನು ಇಲಿ, ಹೆಗ್ಗಣಗಳು ...ತ್ತಿವೆ. ಕೇಂದ್ರ ಸರ್ಕಾರವೇ ಘೋಷಿಸಿದ್ದಂತೆ 2008–09 ... ದಾಖಲೆ ಪ್ರಮಾಣದಲ್ಲಿ ಆಹಾರ ಧಾನ್ಯಗಳನ್ನು ಈ ...ದಲ್ಲಿ ಬೆಳೆಯಲಾಗಿತ್ತು. ಆದರೆ ಆ ಅವಧಿಯಲ್ಲಿ ...ನ 235 ಮಿಲಿಯನ್ ಟನ್‌ಗಳಷ್ಟು ಆಹಾರ ಧಾನ್ಯಗಳಲ್ಲಿ ...ರ್ಧದಷ್ಟನ್ನೂ ಸುರಕ್ಷಿತವಾಗಿಡುವ ಸಾಮರ್ಥ್ಯ ಫುಡ್ ...ರ್ಪೊರೇಷನ್ ಆಫ್ ಇಂಡಿಯಾ(ಭಾರತೀಯ ಆಹಾರ ...ನು)ದ ಗೋದಾಮುಗಳಿಗಿರಲಿಲ್ಲ, ಆದ್ದರಿಂದ ಲಕ್ಷಾಂತರ ...ಗಳ ಆಹಾರ ಧಾನ್ಯಗಳನ್ನು ಬಯಲಿನಲ್ಲಿ; ಬಿಸಿಲು, ..., ಮಳೆಗಳಿಗೆ ತುತ್ತಾಗುವಂತೆ ಇಡಲಾಗಿತ್ತು. ...ಜವಾಗಿಯೇ ಅವು ಕೊಳೆಯಲಾರಂಭಿಸಿದ್ದವು.

...ಎಂತಹ ವಿಪರ್ಯಾಸ ನೋಡಿ. ಈ ದೇಶದಲ್ಲಿ ಒಂದೆಡೆ ...ವಿನಂಚಿನಲ್ಲಿ ಬದುಕುತ್ತಿರುವ 40 ಕೋಟಿ ಬಡವರು, ...ನ್ನೊಂದೆಡೆ ಕೊಳೆಯುತ್ತಿರುವ ಲಕ್ಷಾಂತರ ಟನ್‌ಗಳಷ್ಟು ...ಹಾರ ಧಾನ್ಯಗಳು! ಇದನ್ನು ನೋಡಿಯೇ ಇತ್ತೀಚೆಗೆ ...ರ್ವೋಚ್ಚ ನ್ಯಾಯಾಲಯವು "ಇಲಿ, ಹೆಗ್ಗಣಗಳ ಪಾಲಾಗು...ವ ಈ ಆಹಾರ ಧಾನ್ಯವನ್ನು, ನಮ್ಮ ದೇಶದ ಬಡವರಿ...ಗಾದರೂ ಹಂಚಿ. ಇಲ್ಲಿ ಇಷ್ಟೊಂದು ಬಡವರಿರುವಾಗ ಒಂದು ಕಾಳು ಧಾನ್ಯ ಕೂಡ ನಾಶವಾಗುವುದು ಒಂದು ಅಪರಾಧವೇ ಸರಿ" ಎಂದು ಕೇಂದ್ರ ಸರ್ಕಾರಕ್ಕೆ ಸೂಚಿಸುವ ಮೂಲಕ ತನ್ನ ಮಾನವೀಯತೆಯನ್ನು ಮತ್ತು ನ್ಯಾಯಪರತೆಯನ್ನು ಪ್ರದರ್ಶಿಸಿತ್ತು.

ಆದರೆ ಸುಪ್ರೀಂಕೋರ್ಟಿನ ಈ ಸೂಚನೆಗೆ 'ಸಜ್ಜನ' ಪ್ರಧಾನಿ ಸಿಂಗ್ ಅವರು ಪ್ರತಿಕ್ರಿಯಿಸಿರುವುದು ಹೇಗೆ ಗೊತ್ತಾ?! 'ಪ್ರಜಾವಾಣಿ' ಪತ್ರಿಕೆಯ ಸೆಪ್ಟೆಂಬರ್ 7 ರ ಸಂಚಿಕೆಯಲ್ಲಿ ಪ್ರಕಟಗೊಂಡಿರುವ ವರದಿ (ಪಿಟಿಐ/ ಐಎಎನ್‌ಎಸ್) ಹೀಗಿದೆ: "ಕಡು ಬಡವರಿಗೆ ಆಹಾರ ಧಾನ್ಯ ವಿತರಿಸುವ ಕುರಿತು ಸುಪ್ರೀಂ ಕೋರ್ಟ್ ಇತ್ತೀಚೆಗೆ ನೀಡಿದ ಸೂಚನೆ ಕುರಿತು (ಪತ್ರಕರ್ತರು) ಪ್ರಶ್ನಿಸಿದಾಗ "ದೇಶದ ಜನಸಂಖ್ಯೆಯಲ್ಲಿ ಶೇ. 37 ರಷ್ಟು ಜನ ಬಡತನರೇಖೆಯ ಕೆಳಗೆ ಇದ್ದಾರೆ. ಅವರಿಗೆಲ್ಲ ಉಚಿತವಾಗಿ ಆಹಾರ ನೀಡಲು ಸಾಧ್ಯವಿಲ್ಲ" ಎಂದು ಮೃದುವಾಗಿ (ಬತ್ತ-ನನ್ನದು) ಹೇಳಿದರು."



ಇಲ್ಲಿ 'ಮೃದುವಾಗಿ' ಎಂಬ ಪದದ ಅರ್ಥ, ತರ್ಕವೇನು? ಖಂಡಿತವಾಗಿಯೂ ಅದು ಅವರ 'ದನಿಯ' ಮೃದುತನವನ್ನು ಬಿಂಬಿಸುತ್ತದೆಯೇ ಹೊರತು ಬಡವರ ಅಸಹಾಯಕತೆ ಬಗ್ಗೆ ಸಿಂಗ್ ಅವರಲ್ಲಿ ಇರುವ ಮೃದುತನವನ್ನಲ್ಲ! ಏಕೆಂದರೆ ಆಹಾರ ಧಾನ್ಯಗಳನ್ನು ಪುಕ್ಕಟೆಯಾಗಿ ಅಂಬಾನಿಗಳಿಗೊ, ಮಿತ್ತಲ್‌ಗಳಿಗೋ, ಟಾಟಾಗಳಿಗೋ ಹಂಚಿ ಎಂದು ನ್ಯಾಯಾಲಯ ಹೇಳಿರಲಿಲ್ಲ, ಹಾಗೊಮ್ಮೆ ಹೇಳಿದ್ದರೆ ಅದನ್ನು ಸಿಂಗ್ ಚಾಚೂತಪ್ಪದೆ ಮೃದುವಾಗಿ ಮತ್ತು ಅಷ್ಟೇ ನಾಜೂಕಾಗಿ ಪಾಲಿಸುತ್ತಿದ್ದರು ಎಂಬುದರಲ್ಲಿ ಸಂಶಯವೇ ಇಲ್ಲ.

ಭಾರತದ ಕೋಟ್ಯಂತರ ಬಡವರಿಗೆ ಆಹಾರ ಧಾನ್ಯಗಳನ್ನು ಪುಕ್ಕಟೆಯಾಗಿ ಬೇಡ, ಕನಿಷ್ಠ ರಿಯಾಯಿತಿ ದರದಲ್ಲಾದರೂ ಕೊಡಬಹುದಿತ್ತು, ಆದರೆ ಅದಕ್ಕೂ ಸಿಂಗ್ ತಯಾರಿಲ್ಲ, ಅದಕ್ಕೆ ಅವರು ಕೊಟ್ಟಿರುವ ಕಾರಣ ಏನು ಗೊತ್ತೆ? "ಉಚಿತವಾಗಿ ಅಥವಾ ರಿಯಾಯಿತಿ ದರದಲ್ಲಿ ಆಹಾರ ಧಾನ್ಯ ವಿತರಿಸಿದಲ್ಲಿ ರೈತರ ಉತ್ಸಾಹ ಕುಗ್ಗಿಸಿದಂತೆ ಆಗುತ್ತದೆ. ಧಾನ್ಯ ಉತ್ಪಾದನೆ ಹೆಚ್ಚದಿದ್ದಲ್ಲಿ ಬಡವರಿಗೆ ವಿತರಿಸಲು ಆಹಾರವೇ ಇರುವುದಿಲ್ಲ" ಎಂದಿದ್ದಾರೆ ಸಿಂಗ್. ವಾಸ್ತವವಾಗಿ ಭಾರತ ಸರ್ಕಾರವು ರೈತರಿಗೆ ಬೆಂಬಲ ಬೆಲೆ ನೀಡಿ ಆಹಾರ ಧಾನ್ಯವನ್ನು ಖರೀದಿಸಬೇಕು ಮತ್ತು ಅದನ್ನು ಕಡಿಮೆ ದರದಲ್ಲಿ ಬಡವರಿಗೆ ಮಾರಬೇಕು. ಆಗ ರೈತರಿಗೂ ನ್ಯಾಯ ಸಿಗುತ್ತದೆ, ಕೋಟ್ಯಂತರ ಬಡವರಿಗೆ ಪೌಷ್ಟಿಕ ಆಹಾರ ದೊರಕಿ ದೇಶದ ಆರೋಗ್ಯವು ವೃದ್ಧಿಸುತ್ತದೆ.

ಆದರೆ ಮುಕ್ತ ಮಾರುಕಟ್ಟೆಯ ಬಗ್ಗೆಯೇ ಜಪ ಮಾಡುವ ಸಿಂಗ್ ಅವರಿಗೆ ಇಂತಹ ಸಮಾಜವಾದಿ ಆರ್ಥಿಕ ನೀತಿಗಳು ಕಂಡರೆ ಆಗುವುದಿಲ್ಲ, ಅದಕ್ಕೆ ಅವರು ಬಡವರಿಗೆ ಕಡಿಮೆ ದರದಲ್ಲಿ ಅಗತ್ಯವಾದ ಆಹಾರ ಧಾನ್ಯಗಳನ್ನು ಹಂಚಲು ಸರ್ಕಾರದಲ್ಲಿ ಹಣವಿಲ್ಲ ಎನ್ನುತ್ತಾರೆ.

ಆದರೆ ಅದೆಷ್ಟು ನಿಜ? ಒಂದು ಅಂದಾಜಿನ ಪ್ರಕಾರ ನಮ್ಮ ದೇಶದ 40 ಕೋಟಿ ಬಡವರಿಗೆ ಒಂದು ರೂಪಾಯಿ ದರದಲ್ಲಿ ಎರಡು ಕೇಜಿ ಧಾನ್ಯ ಕೊಟ್ಟರೆ ಅದಕ್ಕೆ ತಗಲುವ ವೆಚ್ಚ 40,000 ಕೋಟಿ ರೂಪಾಯಿಗಳು. ಇದು ಸಾಮಾನ್ಯರಿಗೆ ದೊಡ್ಡ ಮೊತ್ತವಾಗಿ ಕಾಣಿಸುತ್ತದೆ ನಿಜ. ಆದರೆ ಇದೇ ಮನಮೋಹನ್ ಸಿಂಗ್ ಅವರ ಸರ್ಕಾರ ಕಳೆದ ವರ್ಷ ಕೇವಲ ಮೂರು ತೆರಿಗೆ ಬಾಬತ್ತಿನಲ್ಲಿ ದೊಡ್ಡ ಉದ್ಯಮಪತಿಗಳಿಗೆ ನೀಡಿದ ರಿಯಾಯಿತಿಯ ಮೊತ್ತ ಎಷ್ಟು ಗೊತ್ತಾ? ಬರೋಬ್ಬರಿ ಐದು ಲಕ್ಷ ಕೋಟಿ ರೂಪಾಯಿಗಳು. ಬಡವರ ಜೀವರಕ್ಷಣೆಗೆ ನೀಡಬಹುದಾದ 46,000 ಕೋಟಿ, ಎಲ್ಲಿ ಉದ್ಯಮಪತಿಗಳ ಲಾಭವನ್ನು ಹೆಚ್ಚಿಸಲು ನೀಡಿದ 5,00,000 ಕೋಟಿ ರೂಪಾಯಿಗಳು ಎಲ್ಲಿ? ಹಾಗೆಯೇ ಕಾಮನ್‌ವೆಲ್ತ್‌ಗೆ ಗೇಮ್ಸ್‌ಗೆ ಸರ್ಕಾರ ವ್ಯಯಿಸುತ್ತಿರುವುದು 46,000 ಕೋಟಿ ರೂ.!

ಸಿಂಗ್‌ರವರ ಇಂತಹ "ಬಡವರ ನಿರ್ಲಕ್ಷ್ಯ ಮತ್ತು ಸಹಕಾರರ ಪೋಷಣೆ" ನೀತಿಗೆ ಹಲವಾರು ಉದಾಹರಣೆಗಳನ್ನು ಕೊಡಬಹುದು. ಎರಡು ವರ್ಷಗಳ ಹಿಂದೆ ಆರ್ಥಿಕ ಬಿಕ್ಕಟ್ಟು ಉದ್ಭವಿಸಿದಾಗ, ಆಗ ದೊಡ್ಡದೊಡ್ಡ ಉದ್ಯಮಪತಿಗಳನ್ನು ರಕ್ಷಿಸಲು ಸಿಂಗ್ ಅವರ ಸರ್ಕಾರ ಎರಡು ಬಾರಿ ``bail out'' ಪ್ಯಾಕೇಜ್‌ಗಳನ್ನು ಘೋಷಿಸಿತ್ತು, ಆ ಎರಡೂ ಪ್ಯಾಕೇಜುಗಳಿಂದಾಗಿ ಕೇಂದ್ರ ಸರ್ಕಾರಕ್ಕೆ ಆದ ನಷ್ಟ ಸುಮಾರು 3,60,000 ಕೋಟಿ ರೂಪಾಯಿಗಳು. ಇಲ್ಲಿ ಇನ್ನೊಂದು ಅಂಕಿ ಅಂಶವನ್ನು ಗಮನಿಸಿ: ಭಾರತದ ರಿಸರ್ವ್ ಬ್ಯಾಂಕ್ ಪ್ರಕಾರ ಪ್ರತಿ ವರ್ಷ ವಿಶೇಷ ಆರ್ಥಿಕ ವಲಯಗಳಿಗೆ ಸರ್ಕಾರ ನೀಡುತ್ತಿರುವ ತೆರಿಗೆ ರಿಯಾಯಿತಿ 1,75,000 ಕೋಟಿ ರೂಪಾಯಿಗಳು! ಈ ರಿಯಾಯಿತಿಗಳಲ್ಲಿ ಮೂರನೆ ಒಂದು ಭಾಗವನ್ನು ನೀಡದಿದ್ದರೂ ಸಾಕು, 40 ಕೋಟಿ ಬಡವರಿಗೆ ಉಚಿತವಾಗಿ ಆಹಾರ ಧಾನ್ಯಗಳನ್ನು ಹಂಚಬಹುದು. ಆದರೆ ಸಿಂಗ್‌ಗಾಗಲಿ, ಯುಪಿಎ ಸರ್ಕಾರಕ್ಕಾಗಲಿ ಅದೆಲ್ಲ ಬೇಕಿಲ್ಲ.

ಕೊಳೆಯುತ್ತಿರುವ ಆಹಾರ ಧಾನ್ಯ




ಕೇಂದ್ರ ಸರ್ಕಾರವೇ ಒಪ್ಪಿಕೊಂಡಿರುವಂತೆ ಪ್ರತಿ ವರ್ಷ 60,000 ಕೋಟಿ ರೂಪಾಯಿಗಳಷ್ಟು ಬೆಲೆ ಬಾಳುವ ಆಹಾರ ಧಾನ್ಯಗಳು ಕೊಳೆತು ಹೋಗುತ್ತಿವೆ. ಅಷ್ಟೇ ಅಲ್ಲ ಹೀಗೆ ಕೊಳೆತಿರುವ ಧಾನ್ಯಗಳನ್ನು ಬಿಸಾಡಲು ಸರ್ಕಾರವು ಪ್ರತಿ ವರ್ಷ 2.6 ಕೋಟಿ ರೂಪಾಯಿಗಳನ್ನು ಜನರ ತೆರಿಗೆ ಹಣದಿಂದ ವೆಚ್ಚ ಮಾಡುತ್ತದೆ. ಬೂಷ್ಟು ಮತ್ತು ಹೆಗ್ಗಣಗಳಿಂದಾಗಿ ಪ್ರತಿವರ್ಷ 20 ಮಿಲಿಯನ್ ಟನ್‌ಗಳಷ್ಟು ಆಹಾರ ಧಾನ್ಯ ನಾಶವಾಗುತ್ತಿದೆ. ಇಷ್ಟೆಲ್ಲ ದುರಂತಗಳು ಸಂಭವಿಸುತ್ತಿದ್ದರೂ ಆ ಆಹಾರ ಧಾನ್ಯದ ಒಂದು ಕಾಳನ್ನೂ ಬಡವರಿಗೆ ನೀಡುವುದಿಲ್ಲ ಎಂಬ ಕಠಿಣ ನಿಲುವು ಪ್ರಧಾನಿ ಸಿಂಗ್‌ರದ್ದು.

ಇನ್ನು ಬಡವರ ಬಗ್ಗೆ ಅಪಾರ ಕಾಳಜಿ ತೋರಿದ್ದ ಸುಪ್ರೀಂಕೋರ್ಟ್ ಕೂಡ ಈಗ ಸಿಂಗ್‌ರ ಸರ್ಕಾರ ನೀಡಿರುವ ಸಮಜಾಯಿಷಿಯನ್ನು ಒಪ್ಪಿಕೊಂಡು ಸುಮ್ಮನಾಗಿದೆ. ಸರ್ಕಾರದ ಪರವಾಗಿ ಸುಪ್ರೀಂಕೋರ್ಟ್ ಮುಂದೆ ಅಫಿಡವಿಟ್ ಅನ್ನು ಸಲ್ಲಿಸಿದ ಹೆಚ್ಚುವರಿ ಸಾಲಿಸಿಟರ್ ಜನರಲ್ ಮೋಹನ್ ಪರಾಶರನ್ ಅವರು ಬಡಜನರಿಗೆ ಅಗ್ಗದ ದರದಲ್ಲಿ ಆಹಾರ ವಿತರಿಸಲು ಸರ್ಕಾರ ಕ್ರಮಗಳನ್ನು ಕೈಗೊಂಡಿದೆ ಎಂದಿದ್ದಾರೆ. ಆದರೆ ಆ ಅಫಿಡವಿಟ್‌ನಲ್ಲಿ ಎಲ್ಲೂ ಸರ್ಕಾರಿ ಗೋದಾಮುಗಳಲ್ಲಿ ಆಹಾರ ಧಾನ್ಯಗಳನ್ನು ಕೊಳೆಯುವುದಕ್ಕೆ ಬಿಡುವ ಬದಲು ಅದನ್ನು ಬಡವರಿಗೆ ಹಂಚಿದರೆ ಸೂಕ್ತ ಎಂದಿದ್ದ ಕೋರ್ಟಿನ ಸೂಚನೆ ಬಗ್ಗೆ ಒಂದೇ ಒಂದು ಮಾತಿಲ್ಲ! ಆದರೂ ಸುಪ್ರೀಂಕೋರ್ಟ್ ಈ ಅಫಿಡವಿಟ್ ಅನ್ನು ಅಂಗೀಕರಿಸಿತಲ್ಲದೆ "ಸರ್ಕಾರ ನೀಡಿರುವ ಸಮಗ್ರ ಉತ್ತರದಿಂದ ತನಗೆ ಅತ್ಯಂತ ಸಂತೋಷವಾಗಿದೆ" ಎಂದಿದೆ!

ಭಾರತದಲ್ಲಿ ಬಡವರ ಅಸಹಾಯಕತೆಯನ್ನು ಅಣಕಿಸುವ ಎಂತೆಂತಹ ನಾಟಕಗಳು ನಡೆಯುತ್ತವೆ ನೋಡಿ.... ●

ಪೇಜಾವರಗೊಂದು ಕೌಂಟರ್‌ಪಂಚ್ ಬ್ರಾಹ್ಮಣಕೇರಿಗೆ ಮಾದಾರಸ್ವಾಮಿ!



ಹೌದು, ಇದು ಗಿಮಿಕ್ ಪೇಜಾವರ ಮತ್ತವರ ಸೋಗಲಾಡಿ ಅನುಯಾಯಿಗಳಿಗೆ ಬೀಳಲಿರುವ ಕೌಂಟರ್‌ಪಂಚ್! ಮಾದಿಗ ಜನಾಂಗದ ಗುರುಪೀಠದ ಮಾದಾರ ಚನ್ನಯ್ಯ ಸ್ವಾಮಿಯವರು ಬ್ರಾಹ್ಮಣರ ನಾಜೂಕು ಶೈಲಿಯಲ್ಲಿಯೇ ಸಾಫ್ಟ್ ಆಗಿಯೇ ಒಂದು ಕೌಂಟರ್‌ಪಂಚ್ ನೀಡಿದ್ದಾರೆ.

ಇತ್ತೀಚಿನ ಎರಡು ವಾರಗಳಲ್ಲಿ ...ಲಿತರ ಕೇರಿಗೆ 'ನುಗ್ಗಿ' ಪಾದಯಾತ್ರೆ ನಡೆಸುತ್ತಿರುವ ಪಕ್ಕಾ ಜಾತಿವಾದಿ, ...ಮುವಾದಿ ಪೇಜಾವರ ವಿಶ್ವೇಶತೀರ್ಥ ಸ್ವಾಮೀಜಿಗೆ ಇಂಥದೊಂದು ...ದಿರೇಟು ಮಾದಿಗ ಸಮುದಾಯದಿಂದ ಬರಲೇಬೇಕಿತ್ತು, ಅದೀಗ ಚನ್ನಯ್ಯ ...ಮೀಜಿ ಮೂಲಕ ಬಂದಿದೆ.

...ಇದೇ 15ರಂದು ಮೈಸೂರಿನ ಬ್ರಾಹ್ಮಣರ ಅಗ್ರಹಾರ ಕೃಷ್ಣಮೂರ್ತಿ...ಪುರದಲ್ಲಿ ಮಾದಾರ ಚನ್ನಯ್ಯಸ್ವಾಮಿ 'ಸಾಮರಸ್ಯ ನಡಿಗೆ' ನಡೆಸಲಿದ್ದಾರೆ. ...ಪೇಜಾವರರೇನೋ ದಲಿತರಿಗೆ ವೈಷ್ಣವ ಧರ್ಮದ ದೀಕ್ಷೆ ತೊಡಿಸಲು ...ಮುಂದಾಗಿದ್ದಾರೆ. ಆದರೆ ಅವರ ಅನುಯಾಯಿಗಳು ಇದಕ್ಕೆ ಸಿದ್ಧರಿದ್ದಾರೆಯೇ? ...ಸಿದ್ಧರಿರುವುದಾದರೆ ಅವರು ನನ್ನನ್ನು ಆದರದಿಂದ ಸ್ವಾಗತಿಸಿ, ನನ್ನೊಡನೆ ...ನಿಂತು ಸಾಮರಸ್ಯ ಪ್ರದರ್ಶಿಸಲಿ" ಎಂದು ಮಾದಾರ ಚನ್ನಯ್ಯಸ್ವಾಮಿ ಹೇಳಿದ್ದಾರೆ.

'ಸಾಮರಸ್ಯ ನಡಿಗೆ' ಕುರಿತು 'ಲಂಕೇಶ್' ಅವರೊಂದಿಗೆ ನಡೆಸಿದ ...ಫೋನ್ ಮಾತುಕತೆಯ ವಿವರ ಇಲ್ಲಿವೆ:

ಪತ್ರಿಕೆ : ದಲಿತ ಕೇರಿಗಳಲ್ಲಿ ಪೇಜಾವರರಿಗೆ ದೊರೆತ ಸ್ವಾಗತ ನೋಡಿ, ನೀವು ಈ ಚಾಲೆಂಜ್ ತೆಗೆದುಕೊಂಡಿರಾ?

ಸ್ವಾಮೀಜಿ : ಚಾಲೆಂಜೇನೂ ಇಲ್ಲ, ಪೇಜಾವರರು ದಲಿತಕೇರಿಗಳಿಗೆ ಹೋಗುತ್ತಿರೋದು ಮೇಲ್ನೋಟಕ್ಕೆ ಸಂತೋಷದ ವಿಷಯವೇ. ಆದರೆ ಅವರು ಬರೀ ಪ್ರಚಾರಕ್ಕಾಗಿ ಇದನ್ನು ಮಾಡುತ್ತಿದ್ದಾರೋ ಅಥವಾ ದಲಿತರನ್ನು ತಮ್ಮ ಜಾತಿಗೆ ಸೇರಿಸಿಕೊಳ್ಳಲು ಮಾನಸಿಕವಾಗಿಯೂ ಸಿದ್ಧರಿದ್ದಾರೋ ಎಂಬುದನ್ನು ತಿಳಿಯಲು ನಾನು ಈ 'ಸಾಮರಸ್ಯ ನಡಿಗೆ' ಹಮ್ಮಿಕೊಂಡಿದ್ದೇನೆ. ಪೇಜಾವರರಂತೆ ಅವರ ಅನುಯಾಯಿಗಳು ಮಾದಿಗರನ್ನು ಮಾಧ್ವ ಸಮಾಜಕ್ಕೆ ಸೇರಿಸಿಕೊಳ್ಳಲು ಸಿದ್ಧರಿದ್ದಾರೋ ಇಲ್ಲವೋ ಎಂಬುದು ಈ ನಡಿಗೆಯಿಂದ ಪ್ರತ್ಯಕ್ಷವಾಗಿ ಸಾಬೀತಾಗಲಿದೆ.

ಪತ್ರಿಕೆ : ಪೇಜಾವರರದು ಗಿಮಿಕ್ ಎಂದು ಬಹಿರಂಗ ಮಾಡುವುದೇ ನಿಮ್ಮ ನಡಿಗೆಯ ಉದ್ದೇಶವಲ್ಲವೇ?

ಸ್ವಾಮೀಜಿ : (ನಗುತ್ತಾ) ಅದು ಗಿಮಿಕ್ ಹೌದೋ ಅಲ್ಲವೋ ಎಂಬುದಂತೂ ನನ್ನ 'ಸಾಮರಸ್ಯ ನಡಿಗೆ'ಯಿಂದ ಬಯಲಾಗಲಿದೆ. ಅದು ಗಿಮಿಕ್ ಆಗಿರದಿದ್ರೆ ಇನ್ನೂ ಹೆಚ್ಚಿನ ಸಂತೋಷ. ಆದರೆ ಆ ಸಾಧ್ಯತೆಗಳು ತೀರಾ ಕಡಿಮೆ.

ಪತ್ರಿಕೆ : ಪೇಜಾವರರು ದಲಿತಕೇರಿಗಳಿಗೆ ಹೋಗಿ ದೀಕ್ಷೆಯ ಗಿಮಿಕ್ ಮಾಡುವುದನ್ನು ವಿರೋಧಿಸಬೇಕಿದ್ದ ನೀವು, ಪೇಜಾವರರು ಅದನ್ನು ಮುಂದುವರೆಸಲಿ ಅನ್ನೋ ಅರ್ಥದಲ್ಲಿ ಹೇಳಿದ್ದೀರಿ ಏಕೆ?

ಸ್ವಾಮೀಜಿ : ಇಲ್ಲ ಇಲ್ಲ, ಮೇಲ್ನೋಟಕ್ಕೆ ಹಾಗೆ ಕಂಡರೂ, ಸೂಕ್ಷ್ಮವಾಗಿ ಪೇಜಾವರರ ಈ ಕ್ರಮವನ್ನು ನಾನು ವಿರೋಧಿಸಿದ್ದೇನೆ. ಪೇಜಾವರರ ಅನುಯಾಯಿಗಳು ಯಾರನ್ನು ಸಂಸ್ಕಾರವಿಲ್ಲದವರು ಎಂದು ಭಾವಿಸಿರುವರೋ, ಅವರೇ ಇವತ್ತು ಪೇಜಾವರ ಸ್ವಾಮಿಗಳನ್ನು ಆದರದಿಂದ ತಮ್ಮ ಕೇರಿಗೆ ಸ್ವಾಗತಿಸಿದ್ದಾರೆ. ಈಗ ಸಂಸ್ಕಾರವಂತ ಬ್ರಾಹ್ಮಣರು ಈ ಮಾದಿಗ ಸ್ವಾಮೀಜಿಯನ್ನು ಹೇಗೆ ಬರಮಾಡಿಕೊಳ್ಳುತ್ತಾರೆ ಎಂಬುದರ ಮೇಲೆ ಅವರ 'ಸಂಸ್ಕಾರ'ದ ಲೆವೆಲ್ ಗೊತ್ತಾಗಲಿದೆ. ಅಲ್ಲಿಯವರೆಗೆ ನಾನು ಪೇಜಾವರರ ಈ ಪಾದಯಾತ್ರೆಯನ್ನು ಸ್ವಾಗತಿಸುತ್ತೇನೆ.

ಪತ್ರಿಕೆ : ಬ್ರಾಹ್ಮಣಕೇರಿಯಲ್ಲಿ ನಿಮಗೆ ಒಬ್ಬರೇ ಒಬ್ಬರು ಸ್ವಾಗತಿಸಲಾರರು ಎಂಬ ಭಾವನೆ ದಟ್ಟವಾಗಿದೆ. ಇಂಥಾದ್ರಲ್ಲೂ ತಾವೇಕೆ ಇದಕ್ಕೆ ಮುಂದಾದಿರಿ?

ಸ್ವಾಮೀಜಿ : ಒಂದು ವೇಳೆ ಅಲ್ಲಿ ಬ್ರಾಹ್ಮಣರಿಂದ ನಕಾರಾತ್ಮಕ ಪ್ರತಿಕ್ರಿಯೆ ಬಂದರೆ, ಅಂದೇ ನಾನು ನಮ್ಮ ದಲಿತರಿಗೆ 'ನಿಮ್ಮ ದಲಿತಕೇರಿಗಳನ್ನು ಪೇಜಾವರರು ದುರುಪಯೋಗಪಡಿಸಿಕೊಳ್ಳುವುದನ್ನು ನಿಲ್ಲಿಸಿ, ಅವರ ಅನುಯಾಯಿಗಳ ನಮ್ಮ ಜೊತೆ ಇಲ್ಲದಾಗ, ಪೇಜಾವರರನ್ನು ನೀವೇಕೆ ಸ್ವಾಗತಿಸುತ್ತೀರಿ? ಇದು ಬರೀ ಗಿಮಿಕ್' ಎಂದು ವಿವರಿಸುತ್ತೇನೆ.



ಪತ್ರಿಕೆ : ನಿಮ್ಮಿಬ್ಬರ ನಡಿಗೆಗಳಿಂದ ಎರಡು ಜಾತಿಗಳ ನಡುವೆ ಸಾಮರಸ್ಯ ಏರ್ಪಡಬಹುದು ಎಂಬರ್ಥದ ಮಾತು ಹೇಳಿದ್ದಿರಿ. ಶತಮಾನಗಳ ಕಂದರವನ್ನು ಇಂತಹ ಬಿಡಿಬಿಡಿ ಘಟನೆಗಳಿಂದ ಮುಚ್ಚಲಾಗುವುದೇ?

ಸ್ವಾಮೀಜಿ: ಸಂಘರ್ಷ, ಚಳವಳಿ ಒಮ್ಮಿಂದೊಮ್ಮೆಲೆ ಸಂಭವಿಸುವುದಿಲ್ಲ, ಒಬ್ಬ ಪೇಜಾವರ ಅಥವಾ ಒಬ್ಬ ಮಾದಾರಸ್ವಾಮಿಯಿಂದ ಇದು ಸಾಧ್ಯವಿಲ್ಲ, ಅವರ ಹಿಂದೆ ಅವರು ಪ್ರತಿನಿಧಿಸುವ ಸಮೂಹಗಳಿದ್ದರೆ ಮಾತ್ರ ಸಾಧ್ಯ, ಸದ್ಯ ಅಂತಹ ಸಾಧ್ಯತೆ ಕಾಣ್ತಾ ಇಲ್ಲ.

ಸೆಪ್ಟೆಂಬರ್ 15ರವರೆಗೆ ತಡೀರಿ. ಆಗ ಜನರಿಗೆ ಸತ್ಯದ ದರ್ಶನವಾಗಲಿದೆ.


• ಪಿ.ಕೆ.ಮಲ್ಲನಗೌಡರ್



ಲಂಕೇಶ್ ವಾರಪತ್ರಿಕೆಯ ದನಿ ಅಡಗಿಸಲು ಯತ್ನಿಸಿದವರ ವಿರುದ್ಧ ಪತ್ರಕರ್ತರು, ಜನಪರ ಸಂಘಟನೆಗಳು ಹಾಗೂ ಓದುಗರು ರಾಜ್ಯದ ನಾನಾ ಭಾಗಗಳಲ್ಲಿ ನಡೆಸಿದ ಪ್ರತಿಭಟನೆಗಳ ಫೋಟೋಗಳು ಮತ್ತು ಪ್ರಮುಖ ದಿನಪತ್ರಿಕೆಗಳಲ್ಲಿ ಪ್ರಕಟಗೊಂಡ ಪತ್ರಿಕಾ ವರದಿಗಳು....


ಕೊಳ್ಳೇಗಾಲ: ಬಿಎಸ್‌ಪಿ ಮುಖಂಡ ಎನ್.ಮಹೇಶ್, ಪತ್ರಕರ್ತ ಚಿಕ್ಕಮಾಳಿಗೆ ಹಾಗೂ ಇತರರು


ಶಿವಮೊಗ್ಗ: ಜಿಲ್ಲಾ ಪತ್ರಕರ್ತರ ಸಂಘ ಹಾಗೂ ಜನಪರ ಸಂಘಟನೆಗಳು


ತುಮಕೂರು: ಪತ್ರಕರ್ತರಾದ ಬ್ರಹ್ಮಾನಂದರೆಡ್ಡಿ, ಗೋಪಾಲ್ ಮತ್ತು ಇತರರು




ಬೆಂಗಳೂರು ಪ್ರತಿಭಟನೆಯಲ್ಲಿ ಬಂಜಗೆರೆ ಜಯಪ್ರಕಾಶ್, ಕೆ.ಮರುಳಸಿದ್ದಪ್ಪ, ರಕ್ಷಣಾ ವೇದಿಕೆ (ಪ್ರವೀಣ್ ಶೆಟ್ಟಿ-ಶಿವರಾಮೇ ಗೌಡ ಬಣ)ಯ ಸದಸ್ಯರು


ಮೈಸೂರು: ಪತ್ರಕರ್ತ ಮೋಹನ್ ಮತ್ತು ಜನಪರ ಸಂಘಟನೆಗಳ ಮುಖಂಡರು

ಬೆಂಗಳೂರು ಪ್ರತಿಭಟನೆಯಲ್ಲಿ ಸುಭಾಷ್‌ಚಂದ್ರ, ಗೌರಿ ಲಂಕೇಶ್, ಹೆಚ್.ಎಲ್.ಕೇಶವಮೂರ್ತಿ, ಶಿವಣ್ಣ, ಲೋಹಿಯಾ ವಿಚಾರವೇದಿಕೆಯ ಶಿವಣ್ಣ, ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ, ದಲಿತ ಸಂಘಟನೆಗಳು, ಜನಪರ ವೇದಿಕೆ, ಕನ್ನಡ ಸಂಘಟನೆಗಳು ಹಾಗೂ ಸಂಗಮ ಕಾರ್ಯಕರ್ತರು



ಜಮಖಂಡಿಯಲ್ಲಿ ಪತ್ರಕರ್ತರು ಹಾಗೂ ಜನಪರ ಸಂಘಟನೆಗಳಿಂದ ಪ್ರತಿಕೃತಿ ದಹನ...


ಅರುಣಾ V/s ಅಜಯ್: ವಿಜಯ ಯಾರಿಗೆ?


ಚುನಾವಣೆಯ ದಿನಾಂಕ ಸಮೀಪಿಸುತ್ತಿರುವಂತೆ ಗುಲ್ಬರ್ಗಾ ದಕ್ಷಿಣ ಮತಕ್ಷೇತ್ರದ ರಂಗು ತಾರಕಕ್ಕೇರುತ್ತಿದೆ. ಮೀಡಿಯಾ ಮರಿಗಳಾದ ಚೆಡ್ಡಿಗಳಂತೂ ಎಲ್ಲರಿಗಿಂತ ಒಂದು ಹೆಜ್ಜೆ ಮುಂದೆ ನಿಂತು ದಿನಪತ್ರಿಕೆಯ ಪುಟಗಳಲ್ಲಿ ...ರಿಯಾಗಿ ಮಿಂಚುತ್ತಿವೆ. ಮುಖ್ಯಮಂತ್ರಿ ಯಡಿಯೂ...ನಂತೂ ಕಾಲಿಗೆ ಚಕ್ರ ಕಟ್ಟಿಕೊಂಡು ಒಂದೇ ಸಮ ...ಬರ್ಗಾ ದಕ್ಷಿಣ ಕ್ಷೇತ್ರ ತುಂಬೆಲ್ಲ ಓಡಾಡಿದ್ದೇ ಓಡಾಡಿದ್ದು. ...ಲ್ಲ ಸಾಲದೆಂಬಂತೆ ಈ ಮತಕ್ಷೇತ್ರದಲ್ಲಿರುವ ಜನಾಂಗ...ರನ್ನು ಗಮನದಲ್ಲಿಟ್ಟುಕೊಂಡು ಆಯಾ ಜಾತಿಯ ಜನ...ಮುಖರನ್ನು ಕರೆಸಿ ಗಲ್ಲಿಗಲ್ಲಿಯಲ್ಲಿ ಭಾಷಣಗಳ ...ಮಳೆಯನ್ನೆ ಸುರಿಸಿದ್ದಾರೆ. ಇಷ್ಟಕ್ಕೂ ಸುಮ್ಮನಾಗದ ...ಗಳು ತಾವು ದಿ.ಚಂದ್ರಶೇಖರ ಪಾಟೀಲ ರೇವೂರಗೆ ...ಟ್ ತಪ್ಪಿಸಿದ್ದನ್ನು ಮುಚ್ಚಿಕೊಳ್ಳಲು ಪಾಟೀಲರ ...ಯಾದ ಶ್ರೀಮತಿ ಸುಮಿತ್ರಾಬಾಯಿ ದತ್ತಾತ್ರೇಯ ...ನೂ ಅವರ ಇಬ್ಬರು ಮಕ್ಕಳಾದ ಡಾ.ಮಂಗಲಾ ...ೀಲ ಮತ್ತು ಶೈಲಜಾ ಚಪ್ಪರಬಂದಿಯವರನ್ನು ತಮ್ಮ ...ಟ್ಟಿಗೆ ಹಾಕಿಕೊಂಡು ಅವರಿಂದ ಪತ್ರಿಕಾಗೋಷ್ಠಿ ...ಸಿದ್ದಾರೆ.

"ನನ್ನ ತಂದೆ ದತ್ತಾತ್ರೇಯ ಪಾಟೀಲ ರೇವೂರ ಸಾಕಷ್ಟು ...ಮಾಡಿದ್ದರು. ಅದನ್ನು ಎಲ್ಲ ಮಕ್ಕಳ ಹೆಸರಿಗೆ ಬರೆದಿದ್ದರು. ...ಕಿ ಎಲ್ಲವನ್ನೂ ಚಂದ್ರಶೇಖರ ಪಾಟೀಲ ಕುಟುಂಬದವರೇ ...ಭವಿಸುತ್ತಿದ್ದಾರೆ. ಅನ್ಯಾಯ, ಅಪರಾಧ ಮಾಡಿರುವ ...ರಿಗೆ ಉಪ ಚುನಾವಣೆಯಲ್ಲಿ ಬಿಜೆಪಿ ಟಿಕೆಟ್ ಕೊಡಲಿಲ್ಲ. ... ಮಗ ನಮ್ಮ ಮೇಲೆ ಮಾಡಿದ ಅನ್ಯಾಯಕ್ಕೆ ...ಯಾಗಿಯೇ ಪಕ್ಷದಿಂದ ಟಿಕೆಟ್ ಸಿಕ್ಕಿಲ್ಲ. ಇದು ಪಕ್ಷದ ...ಯಾದ ನಿರ್ಧಾರವಾಗಿದೆ. ಚಂದ್ರಶೇಖರ ರೇವೂರ ...ೀಲ ಅವರ ಕುಟುಂಬ ಹಾಗೂ ಮಕ್ಕಳು ಬಿಜೆಪಿ ...ರೆದಿರಬಹುದು. ಆದರೆ ಇಡೀ ರೇವೂರ ಪಾಟೀಲ ...ವಾರ ಬಿಜೆಪಿಯೊಂದಿಗೆ ಇದೆ. ಮುಂದೆಯೂ ಇರುತ್ತದೆ" ...ಂ ಮಾತುಗಳನ್ನು ಚಂದ್ರಶೇಖರ ಪಾಟೀಲ ರೇವೂರರ ...ಯ ಬಾಯಿಂದ ಆಡಿಸಿದ್ದಾರೆ.

...ತಮ್ಮ ಪಕ್ಷದ ಅಭ್ಯರ್ಥಿಯ ಗೆಲುವಿಗೆ ...ಟುಂಬಗಳ ಸಣ್ಣ ಸಣ್ಣ ಬಿರುಕುಗಳನ್ನು ಹೀಗೆ ದೊಡ್ಡ ...ಕವನ್ನಾಗಿ ಮಾಡಿ ಅದರ ಲಾಭ ಪಡೆಯಲು


ನಮೋಶಿ


ಅಜಯ್‌ಸಿಂಗ್


ಅರುಣಾ

ಹೊಂಚು ಹಾಕಿರುವ ಬಿಜೆಪಿಯ ಈ ಕೀಳು ರಾಜಕೀಯಕ್ಕೆ ಜನ ಕ್ಯಾಕರಿಸಿ ಉಗುಳುತ್ತಿದ್ದಾರೆ. ಶಶೀಲ ನಮೋಶಿಯ ಈ ಕೀಳು ರಾಜಕೀಯ ಶೋಭೆ ತರುವಂಥದ್ದಲ್ಲ! ಆದರೆ ಯಾರದೋ ಮನೆಗೆ ಬೆಂಕಿ ಹಚ್ಚಿ ತಾವು ಮಾತ್ರ ಬೆಚ್ಚಗಿರಬೇಕೆಂಬ ಪ್ರವೃತ್ತಿಯ ಚೆಡ್ಡಿಗಳಿಗೆ ಇದೆಲ್ಲ ಸರಿಯಾದ ಕ್ರಮವಾಗಿ ಕಂಡುಬಂದಿದೆ. ಸೋಲಿನ ಭೀತಿಯಿಂದ ಥರಗುಟ್ಟುತ್ತಿರುವ ಚೆಡ್ಡಿಗಳು ಚುನಾವಣೆಯ ದಿನಾಂಕ ಇನ್ನೂ ದೂರ ಇರುವಾಗಲೇ ಹೀಗೆಲ್ಲ ಸಣ್ಣತನಕ್ಕೆ ಇಳಿದಿರುವುದನ್ನು ಜನ ಗಮನಿಸದೇ ಇರುವವರಲ್ಲ!

ಮಾಜಿ ಮುಖ್ಯಮಂತ್ರಿ, ಹಾಲಿ ಸಂಸದ ಧರ್ಮಸಿಂಗ್‌ರಂತೂ ರಾಜ್ಯದ ಕಾಂಗ್ರೆಸ್‌ನ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ಕೃಷ್ಣ ಭೈರೇಗೌಡ, ದಿನೇಶ್ ಗುಂಡೂರಾವ್, ಆರ್.ವಿ.ದೇಶಪಾಂಡೆ ಮುಂತಾದವರನ್ನು ಕರೆಸಿ ತಮ್ಮ ಮಗ ಡಾ.ಅಜಯ್ ಸಿಂಗ್ ಪರವಾಗಿ ಭರ್ಜರಿ ಪ್ರಚಾರ ನಡೆಸಿದ ಖುಷಿಯಲ್ಲಿದ್ದಾರೆ. ಕೇಂದ್ರ ಕಾರ್ಮಿಕ ಸಚಿವ ಮಲ್ಲಿಕಾರ್ಜುನ ಖರ್ಗೆಯಂತೂ ತಮ್ಮ ದೋಸ್ತನ ಮಗನಾದ ಡಾ. ಅಜಯ್ ಸಿಂಗ್‌ಗೆ ಪಟ್ಟಾಭಿಷೇಕ ಮಾಡಬೇಕೆಂಬ ತರಾತುರಿಯಲ್ಲಿ ಗುಲಬರ್ಗಾದಲ್ಲಿಯೇ ಬೀಡುಬಿಟ್ಟಿದ್ದಾರೆ. ಉಮಾಶ್ರೀ, ಮೋಟಮ್ಮ ಎಂಬ ಮಹಿಳಾ ಮಣಿಗಳೂ ಕ್ಷೇತ್ರ ತುಂಬೆಲ್ಲ ತಿರುಗಾಡಿ ಮತಭಿಕ್ಷೆಯನ್ನು ಕೇಳುತ್ತಿದ್ದಾರೆ. ಕಾರು ಬಿಟ್ಟು ಎಂದೂ

ಚುನಾವಣೆ ಹಣಾಹಣಿ

ಕೆಳಗಿಳಿಯದ, ಮಣ್ಣಿನ ಮುಖ ನೋಡದ ಡಾ. ಅಜಯ್ ಸಿಂಗ್ ಮಾತ್ರ ಹಳ್ಳಿ-ಹಳ್ಳಿಗಳನ್ನು ತಿರುಗಾಡಿ, ಗಲ್ಲಿಗಲ್ಲಿಯ ಮೋರಿಗಳನ್ನು ದಾಟಿ ಹಳ್ಳಿಯ ಎತ್ತಿನ ಗಾಡಿಯಲ್ಲಿ ಪ್ರಚಾರ ನಡೆಸುವುದು ಇಲ್ಲಿನ ಮತದಾರರಿಗೆ ಮೋಜಿನ ಸಂಗತಿಯಾಗಿ ಕಂಡುಬಂದಿದೆ. ತಾನು ಗೆದ್ದು ಬಂದುದೇ ಆದರೆ ಗುಲ್ಬರ್ಗಾದಲ್ಲಿಯೇ ಇರುವ ಭರವಸೆಯನ್ನು ಧರ್ಮು ಪುತ್ರ ನೀಡಿದ್ದಾನೆ. ಧ್ರುಮ್ ಸಿಂಗ್ ಕುಲಪುತ್ರನ ಈ ಭರವಸೆಯನ್ನು ನಂಬಿ ಜನ ಓಟು ಹಾಕುತ್ತಾರೋ ಎಂಬುದನ್ನು ಮುಂದಿನ ದಿನಗಳೇ ನಿರ್ಧರಿಸಲಿವೆ.


ಚಂದ್ರಶೇಖರ ಪಾಟೀಲ ರೇವೂರ ಅವರ ಪತ್ನಿ ಶ್ರೀಮತಿ ಅರುಣಾ ಪಾಟೀಲರಿಗೆ ಟಿಕೆಟ್ ನೀಡಿದ್ದನ್ನೇ ದೊಡ್ಡ ಸಾಧನೆ ಎಂದು ಬಿಂಬಿಸುತ್ತಿರುವ ಜೆಡಿಎಸ್ ತನ್ನ ಹಿಂದಿನ ವರ್ಚಸ್ಸಿಗೆ ಮತ್ತೆ ಹಿಂದಿರುಗುತ್ತಿದೆ. ಜೆಡಿಎಸ್ ರಾಜ್ಯಾಧ್ಯಕ್ಷ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಗುಲ್ಬರ್ಗಾದಲ್ಲಿ ಠಿಕಾಣಿ ಹೂಡಿ ಪಕ್ಷದ ಕಾರ್ಯಕರ್ತರಲ್ಲಿ ಹುಮ್ಮಸ್ಸು ತುಂಬಿದ್ದಾರೆ. ಎಸ್.ಕೆ. ಕಾಂತಾ ಎಂಬ ಮಾಜಿ ಮಂತ್ರಿ, ಅರುಣ ಕುಮಾರ ಪಾಟೀಲ ಹಾಗೂ ರಾಜು ಕುಳಗೇರಿ ಮುಂತಾದವರನ್ನು ಮುಂದೆ ಇಟ್ಟುಕೊಂಡು ತಿರುಗಾಡಿದ್ದರಿಂದ ಪಕ್ಷಕ್ಕೆ ಗೌರವದ ಕಳೆ ಕಟ್ಟಿದೆ. ತಾರಫೈಲ್ ಬಡಾವಣೆಯ ಜನತೆ ಪೊಲೀಸ್ ದೌರ್ಜನ್ಯಕ್ಕೆ ತುತ್ತಾದ ಸಂದರ್ಭದಲ್ಲಿ ಎಸ್.ಕೆ.ಕಾಂತಾ ಮಾತ್ರ ಕಾಲೋನಿಯ ಜನಗಳೊಂದಿಗೆ ಇಟ್ಟುಕೊಂಡ ಸುಮಧುರವಾದ ಸಂಬಂಧ ಪಕ್ಷದ ಗೆಲುವಿಗೆ ಒಂದಷ್ಟು ಸಹಾಯವಾಗಲಿದೆ.


ಆದರೆ ಶ್ರೀಮತಿ ಅರುಣಾ ಪಾಟೀಲರ ಸುಪುತ್ರ ದತ್ತಾತ್ರೇಯ ಪಾಟೀಲ ಹೇಳಿಕೇಳಿ ರೋಲ್‌ಕಾಲ್ ಮನುಷ್ಯ ತನ್ನ ತಂದೆ ಇದ್ದಾಗಲೇ ತನ್ನ ಗೆಳೆಯರ ಗೂಂಡಾ ಪಡೆ ಇಟ್ಟುಕೊಂಡು ಹಲವಾರು ಕಡೆ ಅಧಿಕಾರಿಗಳನ್ನು ಹೆದರಿಸಿ ದುಡ್ಡು ಮಾಡಿಕೊಂಡಿದ್ದ. ಒಂದು ವೇಳೆ ಶಾಸಕಿಯಾಗಿ ಶ್ರೀಮತಿ ಅರುಣಾ ಪಾಟೀಲ ಗೆದ್ದು ಬಂದರೂ ಕಾರುಬಾರೆಲ್ಲ ಈ ಕುಲಪುತ್ರನದೇ ಎಂಬುದು ಜನತೆಯನ್ನು ಚಿಂತೆಗೀಡು ಮಾಡಿದೆ. ಎಸ್.ಕೆ.ಕಾಂತಾ ಅಂಥವರಿಗೂ ಈ ಉಡಾಳ ಹುಡುಗನನ್ನು ಹೇಗೆ ನಿಭಾಯಿಸಬೇಕು? ಎಂಬುದು ಸಮಸ್ಯೆಯಾಗಲಿದೆ.


ಈ ಎಲ್ಲಾ ಅಭ್ಯರ್ಥಿಗಳ ಗೋಜಲುಗಳು ಹಾಗೂ ಹಲವಾರು ಅಳವಂಡಗಳನ್ನು ಗಮನಿಸಿದ ಮತದಾರ ಸಭ್ಯ ಹಾಗೂ ಯಾರಿಗೂ ಕೇಡು ಬಗೆಯದ (ಆದರೆ ಅದೇ ವೇಳೆಗೆ ಕ್ಷೇತ್ರದ ಅಭಿವೃದ್ಧಿಗಾಗಿ ಯಾವುದೇ ಕೆಲಸ ಮಾಡದ) ಧರ್ಮುವಿನ ಮಗ ಡಾ. ಅಜಯ್ ಸಿಂಗ್ ಕೈಹಿಡಿದು ನಡೆದರೆ ಯಾರೂ ಅಚ್ಚರಿ ಪಡಬೇಕಾಗಿಲ್ಲ, ಅಲ್ಲವೆ?

• ವಿಶ್ವಾರಾಧ್ಯ ಸತ್ಯಂಪೇಟೆ

ಕಡೂರು: ಯಾರು ಹಿತವರು ಈ ಮೂವರೊಳಗೆ


...ಶ್ವನಾಥ್


ಕೆಂಪರಾಜು


ದತ್ತ

ಕಡೂರು ಉಪ ಚುನಾವಣೆಯು ಬಿಸಿಬಿಸಿ ಚರ್ಚೆಯ ...ವೆ ಕಾವೇರತೊಡಗಿದೆ. 1957ರಿಂದ ಸುಮಾರು ...ಮೂರು ಚುನಾವಣೆಗಳನ್ನು ಕಂಡಿರುವ ಕ್ಷೇತ್ರವಿದು. ... ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳ ...ವಿನ ರಾಜಕೀಯ ಕಾಳಗಕ್ಕೆ ಈ ಕ್ಷೇತ್ರ ಆಖಾಡವಾಗಿದೆ. ...ರೆಗೆ ಇಲ್ಲಿ ಚುನಾವಣೆಗೆ ಧುಮುಕಿದ ಎಲ್ಲಾ ಪಕ್ಷಗಳದ್ದೂ ... ಲೆಕ್ಕಾಚಾರ. ಇಲ್ಲಿ ಲಿಂಗಾಯತರ ಪ್ರಾಬಲ್ಯದ ವಿರುದ್ಧ ...ಬ ಸಮುದಾಯವು ತನ್ನ ಅಧಿಪತ್ಯ ಸ್ಥಾಪನೆಗಾಗಿ ...ಗಳು ನಡೆಸಿದ್ದೂ ಇದೆ. ಸದ್ಯಕ್ಕೆ ಎಲ್ಲರ ಕಣ್ಣು ಕಡೂರಿನತ್ತ ...ದೆ. ಆದರೆ ಈ ಬಾರಿಯ ಜಾತಿ ಲೆಕ್ಕಾಚಾರಗಳೇ ... ಆಗುವಂತಿವೆ.

...ಹಾಗೆ ನೋಡಿದರೆ ಲಿಂಗಾಯತರು ಮತ್ತು ...ಬರನ್ನು ಹೊರತುಪಡಿಸಿದರೆ ಇಲ್ಲಿ ಬೇರೆ ...ಗೆ ಪಾರಮ್ಯ ಸಾಧಿಸಲು ಸಾಧ್ಯವಾಗಿಲ್ಲ. ... ಶಾಸಕರಾಗಿದ್ದ ಕೆ.ಎಂ. ಕೃಷ್ಣಮೂರ್ತಿ ...ಗ್ರೆಸ್‌ನಲ್ಲಿ ಸಿದ್ದರಾಮಯ್ಯನವರ ಕಟ್ಟಾ ಬೆಂಬ...ಲಿಗರಾಗಿದ್ದರು. ಸಿದ್ದರಾಮಯ್ಯನವರು ಜೆಡಿಎಸ್ ...ಟು ಕಾಂಗ್ರೆಸ್ ಸೇರಿದಾಗ ಕೆಎಂಕೆ ಕೂಡ ಅವರನ್ನು ...ಅನುಸರಿಸಿದ್ದರು. ಒಂದು ಕಾಲದಲ್ಲಿ ಕಾಂಗ್ರೆಸ್ ಪಕ್ಷದ ...ಕೋಟೆಯಾಗಿದ್ದ ಚಿಕ್ಕಮಗಳೂರನ್ನು ಬಿಜೆಪಿ ಭೇದಿಸುವ ...ಯದಲ್ಲಿ ಕೆಎಂಕೆ ಕಾಂಗ್ರೆಸ್‌ಗೆ ಬೆಂಗಾವಲಾಗಿ ನಿಂತು ...ಕ್ಷದ ಮಾನ ಕಾಪಾಡಿದ್ದರು. ಅವರಿಲ್ಲದಿದ್ದರೆ ಇವತ್ತಿಗೆ ...ರು ಕ್ಷೇತ್ರವನ್ನು ಜೆಡಿಎಸ್ ಪಕ್ಷದ ವೈ.ಎಸ್.ವಿ. ದತ್ತಾ ...ವಾ ಬಿಜೆಪಿಯ ವಿಶ್ವನಾಥ್ ಆಳುತ್ತಿದ್ದರು. ಕೆಎಂಕೆ ...ಜಶತ್ರುವಾಗಿದ್ದ ಮನುಷ್ಯ, ಹೇಳಿಕೊಳ್ಳುವಂತಹ ಕೆಲಸ ... ಮಾಡಲಿಲ್ಲ, ಆದರೆ ಜನರಿಂದ ಉಗಿಸಿಕೊಂಡು ...ಗಲೂ ಇಲ್ಲ.

ಕಳೆದ ಬಾರಿ ನಡೆದ ಚುನಾವಣೆಯಲ್ಲಿ ಕೃಷ್ಣಮೂರ್ತಿಗೆ ಹತ್ತಿರದ ಪೈಪೋಟಿ ನೀಡಿ ಅತ್ಯಂತ ಕಡಿಮೆ ಮತಗಳ ಅಂತರದಿಂದ ಸೋಲು ಕಂಡಿದ್ದ ಜೆಡಿಎಸ್‌ನ ವೈ.ಎಸ್.ವಿ.ದತ್ತಾ ರಾಜಕೀಯವಾಗಿ ಹೆಸರು ಕೆಡಿಸಿಕೊಂಡ ಮನುಷ್ಯನಲ್ಲ. ವಿಧಾನ ಪರಿಷತ್ತಿನಲ್ಲಿ ಸತತವಾಗಿ ಬಿಜೆಪಿ ವಿರುದ್ಧ ಹೋರಾಡಿದ್ದಾರೆ. ಮಾತಿನಲ್ಲಿ ಚಾಣಾಕ್ಷತನವಿದೆ. ಜನರನ್ನು ಸೆಳೆಯುವ ಛಾತಿಯಿದೆ. ರಾಜಕೀಯ ದಾಳ ನಡೆಸುವ ಕಲೆ ಗೊತ್ತಿದೆ. ಮಾಜಿ ಪ್ರಧಾನಿ ದೇವೇಗೌಡರ ಗರಡಿಯಲ್ಲಿ ಪಳಗಿರುವ ಮನುಷ್ಯ ದತ್ತಾ ಎಂದರೆ ಸಾಕಲ್ಲವೇ?

ಈ ಬಾರಿ ಕಾಂಗ್ರೆಸ್ ಪಕ್ಷ ಕೆಎಂಕೆ ಅವರ ಸಹೋದರ

ಚುನಾವಣೆ ಹಣಾಹಣಿ

ಜಿಲ್ಲಾ ಪಂಚಾಯತ್‌ನ ಹಾಲಿ ಅಧ್ಯಕ್ಷ ಕೆ.ಎಂ. ಕೆಂಪರಾಜುರನ್ನು ನಿಲ್ಲಿಸಿದೆ. ಒಂದು ವೇಳೆ ಕೆಎಂಕೆ ಪತ್ನಿ ಸುಜಾತಾ ಅಥವಾ ಅವರ ಪುತ್ರ ಶರತ್‌ಗೆ ಕಾಂಗ್ರೆಸ್ ಮಣೆ ಹಾಕಿದ್ದರೆ ಅದಕ್ಕೆ ಅನುಕಂಪದ ಮತಗಳಾದರೂ ದೊರೆತಿರುತ್ತಿತ್ತು. ಏಕೆಂದರೆ ಕೆಎಂಕೆ ನಿಧನರಾಗಿ ಇನ್ನೂ ಮೂರು ತಿಂಗಳು ಕೂಡ ಕಳೆದಿಲ್ಲ. ಕಾಂಗ್ರೆಸ್ ಪಕ್ಷದ ಶಕ್ತಿ ಮತ್ತು ಸಿದ್ದರಾಮಯ್ಯನವರ ವರ್ಚಸ್ಸಿನಿಂದಾಗಿ ಅಕಸ್ಮಾತ್ ಕೆಂಪರಾಜು ಗೆದ್ದರೆ ಅದೊಂದು ಇತಿಹಾಸವಾಗಲಿದೆ. ಯಾಕೆ ಗೊತ್ತಾ?

ಇತ್ತೀಚೆಗಷ್ಟೇ ಜಿಲ್ಲಾ ಪಂಚಾಯತಿಗೆ ಅಧ್ಯಕ್ಷೆಯಾಗಿದ್ದ ಗಾಯಿತ್ರಿ ಶಾಂತೇಗೌಡ ಎಂಬುವವರು ವಿಧಾನ ಪರಿಷತ್ತಿಗೆ ಸ್ಪರ್ಧಿಸಿ ಗೆದ್ದಿದ್ದರು. ಈಗ ಕೆಂಪರಾಜು ಕೂಡ ಜಿಲ್ಲಾ ಪಂಚಾಯತಿಯ ಅಧ್ಯಕ್ಷರಾಗಿದ್ದಾರೆ. ಅಂದಹಾಗೆ ಇವರಿಬ್ಬರೂ ಜಾತಿಯಲ್ಲಿ ಕುರುಬರು. ಗಾಯತ್ರಿಯವರ ನಂತರ ಈಗ ಕೆಂಪರಾಜು ಕೂಡ ಗೆದ್ದರೆ ಏಕಕಾಲದಲ್ಲಿ ವಿಧಾನಸಭೆ ಮತ್ತು ವಿಧಾನಪರಿಷತ್ತಿನಲ್ಲಿ ಒಂದೇ ಜಾತಿಯ ಇಬ್ಬರು ಕಾರ್ಯನಿರ್ವಹಿಸಿದಂತಾಗುತ್ತದೆ. ಇಂತಹದೊಂದು ಇತಿಹಾಸ ಬಹುಶಃ ಬೇರೆ ಎಲ್ಲೂ ನಡೆದಿಲ್ಲ.

ಇನ್ನು ಬಿಜೆಪಿ ರಾಜಕಾರಣಿಯಲ್ಲದ ವೈದ್ಯ ಡಾ. ವಿಶ್ವನಾಥ್‌ರನ್ನು ಚುನಾವಣಾ ಕಣಕ್ಕೆ ಇಳಿಸಿದೆ. ಈ ಮನುಷ್ಯ ಗೆದ್ದರೆ ಇಡೀ ಜಿಲ್ಲೆಯ ಮೇಲೆ ಬಿಜೆಪಿ ಅಧಿಪತ್ಯ ಸಾಧಿಸಿದಂತಾಗುತ್ತದೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಜಿಲ್ಲೆಯ ಇತರೆ ಐದು ವಿಧಾನಸಭಾ ಕ್ಷೇತ್ರಗಳೆಲ್ಲ ಬಿಜೆಪಿ ಪಾಲಾಗಿದ್ದರೆ ಕಡೂರು ಮಾತ್ರ ಬಿಜೆಪಿ ಕೈಯಿಂದ ತಪ್ಪಿಸಿಕೊಂಡಿತ್ತು. ಆದ್ದರಿಂದ ಈ ಬಾರಿ ಈ ಕ್ಷೇತ್ರವನ್ನು ಬಿಡದೇ ತನ್ನ ವಶಮಾಡಿಕೊಳ್ಳಲು ಬಿಜೆಪಿ ಗಾಳ ಹಾಕಿದೆ.

ಆದರೆ ಬಿಜೆಪಿಯ ದುರದೃಷ್ಟ, ಅದರ ಅಭ್ಯರ್ಥಿ ವಿಶ್ವನಾಥ್ ಸಾದರ ಲಿಂಗಾಯತ ಸಮುದಾಯಕ್ಕೆ ಸೇರಿದ್ದರೂ ಆತ ಆ ಸಮುದಾಯದ ನಾಯಕರಲ್ಲ. ಆದ್ದರಿಂದ ಆತ ಇಲ್ಲಿ ಸುಲಭವಾಗಿ ಗೆಲ್ಲಲು ಸಾಧ್ಯವಿಲ್ಲ. ಆದರೆ ತನ್ನ ಇಂತಹ ದೌರ್ಬಲ್ಯವನ್ನು ಅರಿತಿರುವ ಬಿಜೆಪಿ ಸುಮ್ಮನೆ ಕೂತಿಲ್ಲ. ಜಾತಿ ಲೆಕ್ಕಾಚಾರ ಹಾಕಿರುವ ಆ ಪಕ್ಷ ಈಗ ದೊಡ್ಡ ಷಡ್ಯಂತ್ರವನ್ನೇ ಹೂಡಿದೆ. ಆ ನಿಟ್ಟಿನಲ್ಲಿ ಮೊನ್ನೆ ತಾನೆ ಇಲ್ಲಿ ಚುನಾವಣಾ ಪ್ರಚಾರ ನಡೆಸಲು ಬಂದಿದ್ದ ಮುಖ್ಯಮಂತ್ರಿ ಯಡಿಯೂರಪ್ಪ ಕಡೂರನ್ನು ದತ್ತು ತೆಗೆದುಕೊಳ್ಳುವ ಬಗ್ಗೆ ಮಾತಾಡಿದರು. ಮಾತ್ರವಲ್ಲ ತಿಂಗಳಿಗೊಮ್ಮೆ ಇಲ್ಲಿ ಭೇಟಿ ನೀಡುವುದಾಗಿಯೂ ಭರವಸೆ ನೀಡಿದರು. ಜೊತೆಜೊತೆಗೆ ಕಡೂರನ್ನು ಅಭಿವೃದ್ಧಿ ಮಾದರಿ ಕ್ಷೇತ್ರವನ್ನಾಗಿ ಮಾಡುವುದಾಗಿಯೂ ಭರವಸೆ ನೀಡಿದರು.

ಇದೇ ಯಡಿಯೂರಪ್ಪ ಎರಡು ವರ್ಷವಾದರೂ ನೆರೆಪೀಡಿತ ಉತ್ತರ ಕರ್ನಾಟಕದ ಸಂತ್ರಸ್ತರಿಗೆ ಪರಿಹಾರವನ್ನು ತಲುಪಿಸಿಲ್ಲ. ಅಲ್ಲಿನ ಜನರ ಸಮಸ್ಯೆಗಳನ್ನೂ ಆಲಿಸಿಲ್ಲ. ಮಲೆನಾಡಿನ ಗುಡ್ಡಗಾಡು ಜನರ ನೆರವಿಗೂ ಪ್ರಯತ್ನಿಸಿಲ್ಲ. ಭದ್ರಾ ಮೇಲ್ದಂಡೆ ಯೋಜನೆಯಿಂದ ರೈತರಿಗೆ ಅನ್ಯಾಯವಾಗುತ್ತಿರುವುದನ್ನು ತಪ್ಪಿಸುವ ಬಗ್ಗೆಯೂ ತಲೆಕೆಡಿಸಿಕೊಂಡಿಲ್ಲ. ಬಳ್ಳಾರಿಯಲ್ಲಿ ರೈತರ ಫಲವತ್ತಾದ ಭೂಮಿಯನ್ನು ತಮ್ಮ ಐಷಾರಾಮಿ ವಿಮಾನ ನಿಲ್ದಾಣಕ್ಕೆಂದು ರೆಡ್ಡಿ ಗ್ಯಾಂಗ್ ವಶಪಡಿಸಿಕೊಂಡಿದ್ದರೂ ಯಡ್ಡಿ ತುಟಿಪಿಟಿಕ್ ಅಂದಿಲ್ಲ. ಯಡ್ಡಿ ಕೈಲಿ ಇಲ್ಲಿಯತನಕ ಸಾಧ್ಯವಾಗಿರುವುದು ವಿದೇಶಿ ಬಂಡವಾಳಶಾಹಿಗಳಿಗೆ ರಾಜ್ಯವನ್ನು ತುಂಡುತುಂಡಾಗಿ ಮಾರಾಟ ಮಾಡುವುದು ಮಾತ್ರ. ಇಂತಹ ಮುಖ್ಯಮಂತ್ರಿ ಕಡೂರನ್ನು ದತ್ತು ತೆಗೆದುಕೊಂಡು ಅದನ್ನು ಅಭಿವೃದ್ಧಿ ಮಾಡುತ್ತೇನೆಂದು ಹೇಳಿದರೆ ಅದನ್ನು ನಂಬಲು ಕಡೂರಿನ ಜನರೇನು ಕಿವಿಯ ಮೇಲೆ ಹೂವಿಟ್ಟುಕೊಂಡಿದ್ದಾರಾ?

ಇವತ್ತಿಗೆ ರಾಜ್ಯ ರಾಜಕಾರಣದ ಇಡಿಯಾಗಿ ಈ ಉಪ ಚುನಾವಣೆಯ ಫಲಿತಾಂಶವನ್ನು ಎದುರುನೋಡುತ್ತಿದೆ. ಬಿಜೆಪಿ ಸರಕಾರ ಅಧಿಕಾರಕ್ಕೆ ಬಂದ ಬಳಿಕ ಆ ಪಕ್ಷ ಎದುರಿಸಿದ ಬಹುತೇಕ ಎಲ್ಲಾ ಚುನಾವಣೆಗಳನ್ನು ಅದು ಗೆದ್ದುಕೊಂಡಿದೆ. ಅದಕ್ಕೆಂದು ಪ್ರತಿ ಚುನಾವಣೆಯನ್ನು ಜಾತಿ ಲೆಕ್ಕಾಚಾರದ ಮೇಲೆಯೇ ನಡೆಸಿದೆ. ಆದರೆ ಯಾವುದೇ ರಾಜಕೀಯ ಲೆಕ್ಕಾಚಾರ ಈವರೆಗೆ ತಲೆಕೆಳಗಾಗಿಲ್ಲ. ಇಷ್ಟೆಲ್ಲ ಗೆಲುವುಗಳ ಮಧ್ಯೆಯೇ ಯಡಿಯೂರಪ್ಪ ಮುಖ್ಯಮಂತ್ರಿಯಂತಲ್ಲದೆ ಓರ್ವ ಯಡವಟ್ಟು ಮನುಷ್ಯನಂತೆ ಕಾಣಿಸುತ್ತಿದ್ದಾರೆ.


ಆದರೆ ಕಾಲ ಬದಲಾಗುತ್ತಿದೆ. ಜನ ಬುದ್ಧಿವಂತರಿದ್ದಾರೆ. ಬಿಜೆಪಿಯ ಜಾತಿ ಲೆಕ್ಕಾಚಾರ, ಕೋಮುವಾದಿ ನಿಲುವುಗಳು, ರೈತ ವಿರೋಧಿ ಕಾನೂನುಗಳು, ಜನದ್ರೋಹಿ ತಂತ್ರಗಳು, ಮಿತಿಮೀರಿದ ಭ್ರಷ್ಟಾಚಾರ ಮತ್ತು ಹಗರಣಗಳನ್ನೆಲ್ಲ ಜನ ಗಮನಿಸಿದ್ದಾರೆ.

ಇವೆಲ್ಲ ಜೊತೆಗೂಡಿ, ಕಡೂರಿನ ಸ್ಥಳೀಯ ಸಮಸ್ಯೆಗಳು ಹಾಗು ಸ್ಥಳೀಯ ಒಳವುಗಳು ಬೆರೆತರೆ ಈ ಬಾರಿ ಜೆಡಿಎಸ್ ಪಕ್ಷದ ವೈ.ಎಸ್.ವಿ.ದತ್ತ ಅವರಿಗೆ ಗೆಲುವು ಲಭಿಸುವ ಕುರುಹುಗಳು ಕಾಣಿಸುತ್ತಿವೆ.

• ಅಜೀಜ್ ಕಿರುಗುಂದ


ಬೇಲೇಕೇರಿ ಬಂದರು ಭಾನಗಡಿ

ಯಡ್ಡಿಯ ಸಿಐಡಿ ನಾಟಕವೂ, ಪಾಕ್‌ಗೆ ಪಂಗನಾಮ ಹಾಕಿದ ಹರಾಮಿಗಳೂ!



ಸ್ವಸ್ತಿಕ್ ನಾಗರಾಜ್

ಬೇಲೇಕೇರಿ ಬಂದರಿನಿಂದ ಕಳೆದಾರು ತಿಂಗಳಿಂದ ಬೀಸುತ್ತಿರುವ ಅಕ್ರಮ ಕಬ್ಬಿಣದ ಅದಿರಿನ ಚಂಡಮಾರುತ ಈಗ ಯಾರ್‍ಯಾರದೋ ಕಣ್ಣು-ಮೂಗಿಗೆಲ್ಲ ನುಗ್ಗಿ 'ತುರಿಕೆ' ಹತ್ತಿಸುತ್ತಿದೆ! ಲೋಕಾಯುಕ್ತದವರು ಜಪ್ತಿ ಮಾಡಿದ್ದ ಅದಿರನ್ನೇ ಕೇರ್ ಮಾಡದೆ ಕದ್ದು ವಿದೇಶಕ್ಕೆ ರಫ್ತು ಮಾಡಿದ ಹಗರಣ ಕ್ಷಣಕ್ಕೊಂದು-ದಿನಕ್ಕೊಂದು ಬಣ್ಣ-ವಾಸನೆ-ರೂಪ ಪಡೆದು ಕೊಳ್ಳುತ್ತಿದೆ. ಒಂದು ಕಡೆಯಲ್ಲಿ ಲೋಕಾಯುಕ್ತ ತಂಡ, ಇನ್ನೊಂದೆಡೆಯಲ್ಲಿ ಬಿಜೆಪಿ ಸರ್ಕಾರದ ಸಿಐಡಿ ಪಡೆ, ಮತ್ತೊಂದು ಕಡೆಯಲ್ಲಿ ಕೇಂದ್ರದ ಅಪರಾಧ ಪತ್ತೆದಳ ನಿಂತು ಈ ಅದಿರು ದರೋಡೆ ತನಿಖೆ ನಡೆಸುತ್ತಿದೆ.....




ಖಾರಪುಡಿ ಮಹೇಶ್

ಒಂದು ಮಾತ್ರ ದಿಟ. ಅದೆಂದರೆ, ಎತ್ತಲಿಂದ ನೋಡಿ ದರೂ ಈ 250 ಕೋಟಿ ರೂಪಾಯಿಗಳ ಅದಿರು ಲೂಟ್‌ಮಾರ್‌ನ ಕಿಂಗ್‌ಪಿನ್‌ಗಳು ಯಡ್ಡಿ ಸರ್ಕಾರದ ಮೂಗುದಾರ ಹಿಡಿದು ಕುಂತಿರುವ ರೆಡ್ಡಿ ಬಂಧುಗಳೆಂಬ ಗಣಿ ಮಾಫಿಯಾದ ಗುರುಗಳೆಂಬುದು ಎಂಥ ಪೆದ್ದನಿಗೂ ಗೊತ್ತಾಗುತ್ತಿದೆ. ಇದು ಸಿಎಂ ಯಡ್ಡಿಗೂ ಗೊತ್ತಿರುವ 'ಬೆತ್ತಲೆ' ಸತ್ಯ! ಹಾಗೊಮ್ಮೆ ರೆಡ್ಡೀಸ್ ಅದಿರು ಕಳ್ಳರೆಂಬುದು ಸಾಬೀತಾದರೆ ಯಡ್ಡಿಯ ಬಣ್ಣವೂ ಬಯಲಾಗುತ್ತದೆ. ಹಾಗಾಗಿ ನಿಷ್ಠುರ ಲೋಕಾ ಯುಕ್ತ ಸಂತೋಷ್ ಹೆಗ್ಡೆಯ ತಂಡದ ತನಿಖೆಗೆ ಸಮಾನಾಂತರವಾಗಿ ತನ್ನ ಅಧೀನದಲ್ಲಿರುವ ಸಿಐಡಿ ತನಿಖೆ ನಡೆಸಿ ಗೊಂದಲ-ಗೌಜಿ ಎಬ್ಬಿಸುವ ಷಡ್ಯಂತ್ರ ಯಡ್ಡಿ ಹೆಣೆದಿದ್ದಾರೆ. ಒಟ್ಟಿನಲ್ಲಿ ಅಸಲಿ ಕಳ್ಳರ ಕೊರಳಿಗೆ ಉರುಳು ಬೀಳದಂತೆ ಬಚಾಯಿಸುವ ಬದ್ಮಾಶ್‌ಗಿರಿ ಇದು.

ಕುತೂಹಲಕರ ಸಂಗತಿಯೆಂದರೆ, ಯಡ್ಡಿ ಸಿಐಡಿ ತಂಡದ ಪ್ರಹಸನ ಶುರುವಾಗುವ ಹೊತ್ತಿಗೇ ಕೇಂದ್ರ ಅಪರಾಧ ಪತ್ತೆದಳ ಬೇಲೇಕೇರಿ ಬಂದರಿಗೆ ಬಂದಿಳಿದಿದೆ. ಬೇಲೇಕೇರಿ ಬಂದರಿನಿಂದ ಪಾಕಿಸ್ತಾನಕ್ಕೆ ಕಳಪೆ ಅದಿರು ಕಳಿಸಿ ಬರೋಬ್ಬರಿ 35 ಕೋಟಿ ರೂ. ಗಣಿ ಮಾಫಿಯಾದ ದೊರೆ ಜನಾರ್ದನ ರೆಡ್ಡಿ ಸಹಚರರು ವಂಚಿಸಿರುವ 'ಇಂಟರ್‌ನ್ಯಾಷನಲ್ ಕ್ರಿಮಿ ನಲ್ ಕೇಸ್' ಕೈಗೆತ್ತಿಕೊಂಡು ಕೇಂದ್ರ ತನಿಖಾ ತಂಡ ಬಂದಿದೆ. ಸಿಐಡಿ ಪೊಲೀಸರು ಕುಂತಲ್ಲೇ ಕೋಟ್ಯಂತರ ರೂ. ಕಳ್ಳತನಕ್ಕೆ ಕುಮ್ಮಕ್ಕು ಕೊಟ್ಟ ಖದೀಮರಿಗೆ ಕ್ಲೀನ್ ಚಿಟ್ ಕೊಡಬಹುದು. ಹಾಗಂತ ಈ ಅಂತರರಾಷ್ಟ್ರೀಯ ಮೋಸದ ಕೇಸ್‌ನಿಂದ '24 ಕ್ಯಾರೆಟ್ ಚಿನ್ನದ' ತುಂಡುಗಳು ತಪ್ಪಿಸಿಕೊಳ್ಳುವುದು ಅಷ್ಟು ಸುಲಭವೇನಲ್ಲ. ಇತ್ತ ಬೇಲೇಕೇರಿ- ಗೋವಾದ ಬಂದರುಗಳಲ್ಲಿ ಕೇಂದ್ರ ತನಿಖಾ ತಂಡದ ತಿರುಗಾಟ ಜೋರಾಗುತ್ತಿದ್ದಂತೆ ಅತ್ತ ಬಳ್ಳಾರಿ-ಬೆಂಗಳೂರಿನ ಅದಿರು ಮಾಫಿಯಾದಲ್ಲಿ ಸಣ್ಣದೊಂದು ನಡುಕವೂ ಶುರು ವಾಗಿದೆ.

ಯಡ್ಡಿಯ ನಿರ್ದೇಶನದ ಸಿಐಡಿ ತಂಡದ ತನಿಖಾ ತಮಾಷೆ ಪ್ರಹಸನ ಕುತೂಹಲಕರವಾಗಿದೆ. ಈ ಸಿಐಡಿ ಶೂರರು ಮೊನ್ನೆ ಅಂಕೋಲಾ ನ್ಯಾಯಾಲ ಯದಲ್ಲಿ ಪ್ರಾಥಮಿಕ ಆರೋಪ ಪಟ್ಟಿಯೊಂದನ್ನು ಸಲ್ಲಿಸಿದ್ದಾರೆ. ಈ 15 ಪುಟಗಳ ಆರೋಪ ಪಟ್ಟಿಯಲ್ಲಿ ಬೇಲೇಕೇರಿ ಬಂದರಿನ ಸೀಜ್ಡ್ ಅದಿರು ಕಳ್ಳತನದಲ್ಲಿ ಬರೋಬ್ಬರಿ 45 ಹ್ಯಾಂಡ್ಲಿಂಗ್ ಕಂಪನಿಗಳು ಶಾಮೀಲಾತಿ ಇದೆಯೆಂದು ಹೇಳಲಾಗಿದೆ. ಈ ಹ್ಯಾಂಡ್ಲಿಂಗ್ ಕಂಪನಿ(ರಫ್ತುದಾರರಿಗೆ ಅದಿರು ಸರಬರಾಜು ಮಾಡುವ ಗ್ಯಾಂಗ್)ಗಳು ಅದಾನಿ, ಮಲ್ಲಿಕಾರ್ಜುನಾ, ಸಾಪಾಲಗಾಂವಕರ್ ಮತ್ತು ರಾಜಮಹಲ್ ಸಿಲ್ಕ್ ಎಂಬ ನಾಲ್ಕು ಎಕ್ಸ್‌ಪೋರ್ಟ್ಸ್ ಕಂಪನಿಗಳೊಂದಿಗೆ ಶಾಮೀಲಾಗಿ ಕಳ್ಳ ದಂಧೆ ನಡೆಸಿವೆ.

ಸಿಐಡಿ ಆರೋಪಕ್ಕೆ ತುತ್ತಾಗಿರುವ 45 ಕಂಪನಿಗಳಲ್ಲಿ ಗಣಿ ದಂಧೆಕೋರ ಯಡ್ಡಿಯ ಮಂತ್ರಿಗಳ, ಬಿಜೆಪಿ ಶಾಸಕರ ನೇರ ಒಡೆತನದ ಅಥವಾ ಕೃಪಾಶೀರ್ವಾದದ ಹ್ಯಾಂಡ್ಲಿಂಗ್ ಟೋಳಿಗಳಿವೆ; ವಿರೋಧ ಪಕ್ಷದ ಘಟಾನುಘಟಿಗಳ ಹಿಡಿತದ ಕಂಪನಿಗಳೂ ಇವೆ. ತನಿಖೆ ವೇಳೆ ಬೇಲೇಕೇರಿಯಲ್ಲಿ ಕಣ್ಣಿಗೆ ಕಂಡಿರುವ ಕಂಪನಿಗಳನ್ನೆಲ್ಲ ಕಳ್ಳರ ಸಾಲಿಗೆ ಸೇರಿಸಿಬಿಟ್ಟದೆ ಸಿಐಡಿ! ಇದರಲ್ಲಿ ಕೆಲವು ನಿಷ್ಪಾಪಿ ಕಂಪನಿಗಳ ಹೆಸರೂ ಇದೆ. ಒಟ್ಟಿನಲ್ಲಿ ಅವರೂ (ಆಡಳಿತ ಪಕ್ಷದವರು) ಕಳ್ಳರು; ಇವರೂ (ವಿರೋಧ ಪಕ್ಷದವರು) ಕಳ್ಳರೆಂದು ಬಿಂಬಿಸಿ ಅವ್ಯವಹಾರಗಳಲ್ಲಿ "ನೈಚ್ಯಾನುಸಂಧಾನ"ದ ಅನಿವಾರ್ಯತೆಗೆ ದೂಡುವ ಹಿಕಮತ್ತಿದಷ್ಟೇ. "ರಾಜಿ" ಮೂಲಕ ಇಡೀ 250 ಕೋಟಿ ರೂಪಾಯಿಗಳ ಪ್ರಪಂಚದ ಅತಿದೊಡ್ಡ ಸರ್ಕಾರಿ ಸಂಪತ್ತು ದರೋಡೆ ಕರ್ಮಕಾಂಡದ ತನಿಖೆ ಹಳ್ಳ ಹಿಡಿಸಲು ಯಡ್ಡಿಗೆ ಅನುಕೂಲ ಕಲ್ಪಿಸುವ ಹಿಡನ್ ಅಜೆಂಡಾ ಸಿಐಡಿ ಇಟ್ಟುಕೊಂಡಿರುವುದು ಅದರ ಪ್ರಾಥಮಿಕ ಆರೋಪ ಪಟ್ಟಿಯೇ ಸಾಬೀತು ಪಡಿಸುವಂತಿದೆ!!








ಸಿಐಡಿಯ ಸತ್ಯಶೋಧನೆಯೇ ಸಂಶಯಾಸ್ಪದ. ಈಗ ಸಿಐಡಿಗಳು ಐದು ಕಂಪನಿಯ ಕೆಲಸದಾಳುಗಳನ್ನು ಬಂಧಿಸಿದ್ದಾರೆ. ಜೊತೆಗೆ ಸಾಹೇಬರ ಮೌಖಿಕ ಆದೇಶ ಪಾಲಿಸಿ ಸಣ್ಣ ಸೈಜಿನ ಕಾಸಿನ ಗಂಟು ಕಟ್ಟಿದ 'ಅಮಾಯಕ' ಪೋರ್ಟ್ ಕನ್‌ಸರ್ವೇಟರ್ ಮಹೇಶ್ ಬಿಲಿಯೆ ಎಂಬ ಇಲಿಯನ್ನೂ ಬೋನಿಗೆ ಹಾಕಲಾಗಿದೆ. ಇವರ್‍ಯಾರೂ ಅದಿರು ಕಳ್ಳತನದ ಪ್ರಮುಖ ಗ್ಯಾಂಗ್‌ಸ್ಟರ್‌ಗಳಲ್ಲ, ಅದಿರು ಕಳ್ಳತನದಲ್ಲಿ ಕೈಯಾಡಿಸಿವೆ ಎನ್ನುವ ಕಂಪನಿಗಳ ಮಾಲೀಕರ ಹೆಸರನ್ನೇ ಮುಚ್ಚಿಟ್ಟು ಆ ಕಂಪನಿಗಳ ಬಡ ನೌಕರರನ್ನು ಟಾರ್ಗೆಟ್ ಮಾಡಿಕೊಂಡಿರುವ ಸಿಐಡಿಗಳ ನಡೆ-ನುಡಿ ಅನುಮಾನಾಸ್ಪದವಾಗಿದೆ. ಧಣಿ ಗಳ ಮಾತು ಕೇಳಿದ ಕೆಲಸಗಾರರು, ಸಾಹೇ ಬರ ಆಜ್ಞೆ ಪಾಲಿಸಿದ ಬಲಿಯೆಥರದವರನ್ನು ಬಲಿ ಹಾಕುತ್ತಿರುವ ಸಿಐಡಿ 45 ಕಂಪನಿಗಳಲ್ಲಿ ಯಡ್ಡಿ-ರೆಡ್ಡಿ ಹೇಳಿದವರ ಮೇಲೆ 'ಬಿ ರಿಪೋರ್ಟ್' ಹಾಕುವ ಸ್ಕೆಚ್ ತಯಾರಿಸಿ ಕೊಂಡಿದೆ ಎಂಬ ಗುಸುಗುಸು ಗಣಿ ಉದ್ಯಮ ವಲಯದಲ್ಲಿ ಹಾರಾಡುತ್ತಿದೆ. ರಾಜ್ಯದ ಜನತೆಯ ದಾರಿ ತಪ್ಪಿಸಲು ಬೇಕಂತಲೇ 45 ಕಂಪನಿಗಳ ಮೇಲೆ ಸಾರಾಸಗಟಾಗಿ ಸಿಐಡಿ ಎಫ್‌ಐಆರ್ ಹಾಕಿದೆ. ಮುಂದೆ ಬಿ-ರಿಪೋರ್ಟ್‌ಗೆ ಅವಕಾಶವಿದೆಯಲ್ಲವೆ?

ಲೋಕಾಯುಕ್ತ ತನಿಖಾ ತಂಡ ತುಂಬ ದಕ್ಷತೆ-ನಿಷ್ಠುರತೆಯಿಂದ ತನಿಖೆ ಮಾಡಿ 11 ಅದ... ಅವ್ಯವಹಾರಿ ಕಂಪನಿಗಳು ಮತ್ತು ಪೋರ್ಟ್ ತನ್ನ ... ಕೊಟ್ಟಿದ್ದ ಸೀಜ್ಡ್ ಅದಿರು ರಕ್ಷಿಸಲಾಗದ ಕರ್ತವ್ಯ ... ಬಂದರು ಸಂರಕ್ಷಣಾಧಿಕಾರಿ ಬಿಲಿಯೆ ಮೇಲೆ ಕಳ್ಳ... ಕೇಸು ಜಡಿದಿತ್ತು. ಜಪ್ತಿ ಮಾಡಲಾಗಿದ್ದ 8.5 ... ಮೆಟ್ರಿಕ್ ಟನ್ ಅದಿರಲ್ಲಿ 5 ಲಕ್ಷ ಮೆಟ್ರಿಕ್ ಟನ್ ಅದಿ... ನಾಪತ್ತೆಯಾಗಿದೆ ಎಂದು ನ್ಯಾಯಾಲಯಕ್ಕೂ ಹೇಳಿ... ಬೇಲೇಕೇರಿ ಬಂದರನ್ನು ಅಂತರರಾಷ್ಟ್ರೀಯ ಗೋಲ್‌ಮಾ... ಅಡ್ಡೆಯಾಗಿ ಮಾಡಿ ಕೋಟಿ-ಕೋಟಿ ಬಾಚುತ್ತಿರುವ ನಾ... ರಫ್ತುದಾರ ಕಂಪನಿಗಳನ್ನು ಲೋಕಾಯುಕ್ತದವರು ಪ್ರಮು... ಆರೋಪಿಗಳಾಗಿ ಮಾಡಿದ್ದರು. ಆದರೆ ಸಿಐಡಿ ತಿಮಿಂ... ಗಳನ್ನು ಬಿಟ್ಟು ಸಣ್ಣ-ಪುಟ್ಟ ಮೀನುಗ... ಯಡ್ಡಿ ಸರ್ಕಾರ ಬಲೆ ಬೀಸಿ ಬೀಗುತ್ತಿದ...

ಸಿಐಡಿ ಪ್ರಕಾರ ಕಳುವಾಗಿರುವ ಅದಿ... 5 ಲಕ್ಷ ಮೆಟ್ರಿಕ್ ಟನ್ ಅಲ್ಲ; 4,05,0... ಮೆಟ್ರಿಕ್ ಟನ್ ಅಷ್ಟೇ! ಮಾಪನದ... ಸಿಐಡಿ ಎಡವಟ್ಟು ಮಾಡಿ ಎಡವಿಬಿ... ಸಿಐಡಿ ಮಾಡುತ್ತಿರುವ ಎಲ್ಲಕ್ಕಿಂತ ದ... ಅನ್ಯಾಯ-ಅನಾಚಾರವೆಂದರೆ, ಯಾವ... ಕಂಪನಿಯ ಬಾಸ್ ಗಳ ಮೇಲೆ ಕೇ... ಅರೆಸ್ಟ್ ಮಾಡು ತ್ತೇವೆಂದು ನ್ಯಾಯಾಲಯ... ತಿಳಿಸದೆ, ಕಂಪನಿಯ ಬಡಪಾಯಿ ನೌ... ನಿದ್ದೆಗೆಡಿಸು ತ್ತಿದೆ. ಸಿಐಡಿ ಹೆಸರಿಸಿರುವ ... ಕಂಪನಿಗಳಲ್ಲಿ ಹೆಚ್ಚಿನ ಕಂಪನಿ ಖಳರು ವಿದ... ಓಡಿಹೋಗಿದ್ದಾರೆ. ಗಣಿ ಮಾಫಿಯಾದ ದ... ಜನಾರ್ದನ ರೆಡ್ಡಿ ಕೃಪಾಕಟಾಕ್ಷ ಇರುವ ವ... ಟೂರಿಸಮ್ ವೀಸಾದಲ್ಲಿ ಫಾರಿ... ಹೋಗಲು ಅವಕಾಶ ಕಲ್ಪಿಸಲಾಗಿದೆ. ಕೆಲ... ಸಿಐಡಿ ಎಫ್‌ಐಆರ್ ಬೀಳುವ ಮೊ... ಸುದ್ದಿ ತಿಳಿದು ಪಲಾಯನ ಮಾಡಿ ... ಇನ್ನೂ ಕೆಲವರು ಎಫ್‌ಐಆರ್ ನಂತರ ವಿದ... ಹಾರಿದ್ದಾರೆ!

ಗಣಿ ಪಾತಕ ಪ್ರಪಂಚದ ಸ್ವ... ಘೋಷಿತ ಚಕ್ರವರ್ತಿ ಜನಾರ್ದನ ರೆ... ಆಸ್ಥಾನದ ಆಯಕಟ್ಟಿನ ರೌಡಿಗಳಾದ ಸ್ವ... ನಾಗರಾಜ್ ಮತ್ತು ಖಾರಪುಡಿ ಮಹ... ಸಿಐಡಿ, ಲೋಕಾಯುಕ್ತ, ಕೇಂದ್ರ ಅಪ... ಪತ್ತೆ ದಳ ಮತ್ತು ಕಾರವಾರದ ಪೊಲೀಸರಿಗೆ ಮೋ... ವಾಂಟೆಂಡ್ ಕ್ರಿಮಿನಲ್‌ಗಳು. ಈ ಜೋಡಿ ರೆಡ್ಡೀಸ್ ವಿ... ಮಾತಾಡುವವರ ಅಥವಾ ಉದ್ಯಮದಲ್ಲಿ ಪೈಪೋಟಿ ಕೊ... ವವರ ಸಾಮ-ಭೇದ-ದಂಡದಿಂದ ಹೈರಾ ಣಾಗಿ... 'ವ್ಯಕ್ತಿವಂತರು'. ರೆಡ್ಡಿಯ ಎದುರಾಳಿ ಟಪಾಲ್ ಗಣ... ಮೇಲೆ ಮಾರಣಾಂತಿಕ ಹಲ್ಲೆ ಮಾಡಿ ಕೆ... ಎಳೆದುಕೊಂಡಿರುವ ಸ್ವಸ್ತಿಕ್-ಖಾರಪುಡಿ ಆತನ ಕೊ... ಸ್ಕೆಚ್ ಹಾಕಿಕೊಂಡಿದ್ದರು. ತಮ್ಮ ದಗಲುಬಾಜಿ ... ಕಂಡುಹಿಡಿದ ಕಾರವಾರದ ಅರಣ್ಯಾಧಿ ಕಾರಿ ಗೋ... ಅವರ ಕಾರನ್ನು ಸರಿ ರಾತ್ರಿ ಛೇಸ್ ಮಾಡಿ ಬೆದ... ಕೇಸೂ ಈ ಪಾತಕಿಗಳ ಮೇಲಿದೆ. ಸಿಐಡಿಗ...

▶▶ 1...



ಅಂತರರಾಷ್ಟ್ರೀಯ ಅದಿರು ಅವ್ಯವಹಾರ!!

ಕರ್ನಾಟಕಕ್ಕೆ ಶಾಪದಂತಾಗಿರುವ ಮೈನ್ಸ್ ಮಾಫಿಯಾದ ಮೋಸ-ವಂಚನೆ-ದಗಾ-ದಗಲುಬಾಜಿತನದ ಅದಿರು ದಂಧೆಯ ಕಬಂಧ ಬಾಹುಗಳೀಗ ದೇಶದಾಚೆಗೂ ಚಾಚಿಕೊಂಡುಬಿಟ್ಟಿದೆ! 24 ಕ್ಯಾರೆಟ್ ಅಪರಂಜಿ ತುಂಡುಗಳ ಗಣಿ ಗಂಡಾಗುಂಡಿ ಕರ್ನಾಟಕದ ಮಾನ-ಮರ್ಯಾದೆಯನ್ನು ವಿದೇಶದಲ್ಲೂ ಹರಾಜಾಕುತ್ತಿರುವುದು ದುರಂತ. ಇದು ದೇಶಭಕ್ತರ ಬಿಜೆಪಿ ಸರ್ಕಾರದ ಸಾಧನೆಯೇ ಸರಿ!!

ಪಾಕಿಸ್ತಾನ್ ಸರ್ಕಾರದ ಸ್ವಾಮ್ಯದ 'ಪಾಕಿಸ್ತಾನ್ ಸ್ಟೀಲ್ ಕಂಪನಿ'ಗೆ ಭಾರತದಿಂದ ಕಬ್ಬಿಣದ ಅದಿರು ಪೂರೈಸುವ ಒಪ್ಪಂದದಲ್ಲಿ ಬರೋಬ್ಬರಿ 35 ಕೋಟಿ ರೂ. ವಂಚನೆಯಾಗಿದೆ ಎಂಬ ಗುಲ್ಲು ಅಂತರರಾಷ್ಟ್ರೀಯ ಮಟ್ಟದಲ್ಲಿ ಎದ್ದಿದೆ. ಇದರಲ್ಲಿ ಒಂದು ಶಿಪ್‌ಮೆಂಟ್‌ನಲ್ಲಿ 39,240 ಟನ್ ಅದಿರು ಕರ್ನಾಟಕದಿಂದ ಹೋಗಿದ್ದರೆ, ಇನ್ನೊಂದು ಶಿಪ್‌ಮೆಂಟ್‌ನಲ್ಲಿ ಸುಮಾರು 40 ಸಾವಿರ ಟನ್ ಅದಿರು ಗೋವಾದಿಂದ ಹೋಗಿದೆಯಂತೆ. ಎರಡೂ ಶಿಪ್‌ಮೆಂಟ್ ಬೇಲೇಕೇರಿಯಿಂದಲೇ ಹೋಗಿದೆ ಎಂಬ ವಾದವೂ ಇದೆ. ತನಗೆ ಬಂದಿರುವುದು ಕಬ್ಬಿಣದ ಅದಿರಲ್ಲ; ಪಕ್ಕಾ ಮಣ್ಣು ಎಂದು ಪಾಕಿಸ್ತಾನ್ ಸರ್ಕಾರ ಅಂತರರಾಷ್ಟ್ರೀಯ ವಿನಿಮಯ ಕಾಯ್ದೆಯಂತೆ ಸರಬರಾಜುದಾರರ ಮೇಲೆ ಕೇಸು ಹಾಕಿದೆ. ಬೋಹ್ರಾ ಎಂಬಾತನ ಮುಂಬೈ ಮೂಲದ 'ಟ್ವೆಂಟಿಫಸ್ಟ್ ಸೆಂಚುರಿ ವೈರ್ ರಾಡ್ಸ್ ಲಿ. ಕಂಪನಿ'ಯ ಬ್ರ್ಯಾಂಚ್ ಆಫೀಸೊಂದು ಬೆಂಗಳೂರಿನ ಸದಾಶಿವ ನಗರದಲ್ಲಿದೆ. ಈ ಕಂಪನಿ ಖನಿಜ, ಪೆಟ್ರೋಲ್ ಪಾಕಿಸ್ತಾನ್, ಅರಬ್ ದೇಶಗಳಿಗೆ, ಅಫಘಾನಿಸ್ತಾನಕ್ಕೆ ಸಾಗಿಸುವ ದಂಧೆ ಮಾಡುತ್ತಿದೆ. ಬೆಂಗಳೂರು ಆಫೀಸ್ ನಿಭಾಯಿಸುವುದು ಗೌರವ್ ಗೋಯಲ್, ದರ್ಶನ್ ಚೂರಿವಾಲಾ ಮತ್ತು ನಿಖಿಲ್ ಎಂಬುವರು. ಇವರು ಬೇಲೇಕೇರಿ ಮತ್ತು ಗೋವಾದಿಂದ ಪಾಕಿಸ್ತಾನ್ ಸರ್ಕಾರಕ್ಕೆ ಒಟ್ಟು 78,710 ಟನ್ ಕಬ್ಬಿಣದ ಅದಿರು ಕಳಿಸುವ ಒಪ್ಪಂದ ಮಾಡಿಕೊಂಡಿದ್ದರು. ಈ ವ್ಯವಹಾರದಲ್ಲಿ ಮೈನ್ಸ್ ದೊರೆ ಜನಾರ್ದನ ರೆಡ್ಡಿ ಎಂಬ ಸಿಎಂ ಯಡ್ಡಿಯ ದಗಾಕೋರ ಮಂತ್ರಿಯ ಕೆನೆರಳಿದೆ ಎಂಬುದು ಓಪನ್ ಸೀಕ್ರೆಟ್!


ಒಪ್ಪಂದದಂತೆ ಟ್ವೆಂಟಿ ಫಸ್ಟ್ ಸೆಂಚುರಿ ಕಂಪನಿ ಚಿಕ್ಕನಾಯಕನಹಳ್ಳಿಯ ಗಣಿಯಿಂದ ತೆಗೆದ 58 ಗ್ರೇಡ್‌ನ ಉತ್ತಮ ಅದಿರು ಪಾಕ್‌ಗೆ ಕಳಿಸಬೇಕಿತ್ತು. ಇದಕ್ಕಾಗಿ ಟ್ವೆಂಟಿ ಫಸ್ಟ್ ಸೆಂಚುರಿ ಕಂಪನಿ ಕರಾಚಿ ಸ್ಟೀಲ್ ಕಂಪನಿಯಿಂದ 45 ಕೋಟಿ ರೂ. ಮುಂಗಡವೂ ಪಡೆದಿತ್ತು. ಈ ಕರಾರಿನಂತೆ 7.12.2009 ರಂದು ಬೇಲೇಕೇರಿ ಬಂದರಿಂದ 39,240 ಟನ್ ಅದಿರು ಹೊತ್ತ ಹಡಗು ಕರಾಚಿಗೆ ಹೊರಟಿತ್ತು. ಹಾಗೆಯೇ 9.1.2010 ರಂದು 39,470 ಟನ್ ಅದಿರು ಹೇರಿಕೊಂಡ ಹಡಗು ಕರಾಚಿಯತ್ತ ಸಾಗಿದೆ. ಆದರಿದು ಗೋವಾದಿಂದ ಹೋಗಿದೆಯೋ, ಬೇಲೇಕೇರಿಯಿಂದಲೇ ಹೋಗಿದೆಯೋ ಎಂಬುದು ಗೊತ್ತಾಗುತ್ತಿಲ್ಲ. ಏಕೆಂದರೆ ಬೇಲೇಕೇರಿ ಬಂದರಿನಲ್ಲಿ ಕರಾಚಿಗೆ ಅದಿರು ಹೋಗಿರುವ ಬಗ್ಗೆ ಯಾವ ದಾಖಲೆಯೂ ಇಲ್ಲ. ದಾಖಲೆಗಳು ಇರದಂತೆ ಮೈನ್ಸ್ ಮಾಫಿಯಾ, ಬಂದರು ಇಲಾಖೆ ಮತ್ತು ಕಸ್ಟಮ್ಸ್‌ನ ಗೋಲ್‌ಮಾಲ್ ಅಧಿಕಾರಿಗಳು ವ್ಯವಸ್ಥಿತವಾಗಿ ನೋಡಿಕೊಂಡಿದ್ದಾರೆ.

ಟ್ವೆಂಟಿ ಫಸ್ಟ್ ಕಂಪನಿ ಖದೀಮರು ಕರಾಚಿಯತ್ತ ಹಡಗು ಹೊರಟಿದ್ದೇ ತಡ ಇತ್ತ ಒಂದಿಷ್ಟು ನಕಲಿ ಕಾಗದಪತ್ರ ತಯಾರಿಸಿ ಬೆಂಗಳೂರಿನ ಬ್ಯಾಂಕ್ ಒಂದಕ್ಕೆ ಕೊಟ್ಟು 10 ಕೋಟಿ ಸಾಲ ಎತ್ತಿದೆ. ಆದರೆ ಈ ಕಂಪನಿ ಕರಾಚಿಗೆ ಕಳಿಸಿದ್ದು ಅಪ್ಪಟ ಮಣ್ಣು! ಈ ಮಣ್ಣು ಪಕ್ಕಾ 58 ಗ್ರೇಡಿನ ಕಬ್ಬಿಣದ ಅದಿರೆಂದು ಎಸ್‌ಜಿಎಸ್ ಪ್ರೈವೇಟ್ ಇಂಡಿಯಾ ಎಂಬ ಅದಿರು ಗುಣಮಟ್ಟ ನಿರ್ಧರಿಸುವ ಸಂಸ್ಥೆಯ ಹೆಸರಲ್ಲಿ ಖೋಟಾ ಪ್ರಮಾಣಪತ್ರ ತಯಾರಿಸಿಕೊಂಡರು ಮಧ್ಯವರ್ತಿ ಕಂಪನಿಯ ವಂಚಕ ಗೋಯಲ್ ಮತ್ತು ನಿಖಿಲ್ ಚೂರಿವಾಲಾಗಳು. ಖೋಟಾ ಸರ್ಟಿಫಿಕೇಟ್ ತೋರಿಸಿ ಕಸ್ಟಮ್ಸ್‌ನವರಿಂದ ಕರಾಚಿಗೆ ಕಳಿಸಿದ ಒಟ್ಟು ಅದಿರಿನ ಪ್ರಮಾಣಪತ್ರ ಪಡೆದು 10 ಕೋ... ಹೊಡೆದುಕೊಂಡರು.


ಇದೇ ಹೊತ್ತಿಗೆ ಭಾರತದಿಂದ ಬಂದ ಅದಿರು ಕಳಪೆ ಎಂಬ ಕೂ... ಪಾಕ್‌ನಲ್ಲೆದ್ದಿತು. ಅಲ್ಲಿಯ ಪಾರ್ಲಿಮೆಂಟಿನಲ್ಲೂ ಚರ್ಚೆಯಾಯ್ತು. ಎರ... ಹಡಗಿನಲ್ಲಿ ಬಂದ ಸರಕಿನ ಮೊತ್ತ ತಡೆಹಿಡಿಯಲು ನಿರ್ಧರಿಸಲಾ... ಅಲ್ಲಿಗೆ ಭಾರತದ ಮಾನ ಕರ್ನಾಟಕದ ಕೊಳಕು ಚೆಡ್ಡಿ ಚತು... ಹಪಾಹಪಿ-ವಂಚನೆಯಿಂದಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಮಣ್ಣು ಪಾ... ಹೋಯ್ತು! ಪಾಕ್‌ನ ದೂರಿನಂತೆ ಭಾರತ ಸರ್ಕಾರವೀಗ ಈ ವಂ... ಪ್ರಕರಣದ ತನಿಖೆಯನ್ನು ಕೇಂದ್ರ ಅಪರಾಧ ಪತ್ತೆದಳದ ಸಹಾಯಕ ಆಯ... ನ್ಯಾಮಗೌಡರಿಗೆ ವಹಿಸಿದೆ. ನ್ಯಾಮಗೌಡರ ತಂಡ ಬೇಲೇಕೇರಿಯಲ್ಲಿ ಅ... ಕಳ್ಳಸಾಗಾಣಿಕೆದಾರರ ಜಾತಕ ಜಾಲಾಡುತ್ತಿದೆ.

ಈ ಟ್ವೆಂಟಿ ಫಸ್ಟ್ ಕಂಪನಿಯಂತೆಯೇ ಪಾಕ್, ಇರಾಕ್ ಮುಂ... ದೇಶಗಳಿಗೆ ಪೆಟ್ರೋಲ್, ಖನಿಜ ಪದಾರ್ಥ ಸಾಗಿಸುವ ಮಧ್ಯ... ಕಂಪನಿಯೊಂದು ದುಬೈನಲ್ಲಿದೆ. ಈ 'ಅಲ್ವಾ ಪೆಟ್ರೋಲಿಯಂ ಅ... ಶಿಪ್ಪಿಂಗ್ ಕಂಪನಿ'ಯ ಬಾಸ್ ಇಮ್ರಾನ್ ಅಸ್ಗರ್ ಮತ್ತು ಟ್ವೆಂಟಿ ... ಕಂಪನಿಯ ಬೋಹ್ರಾ ಜೊತೆ ಈ ಗಣಿ ಗೋಲ್‌ಮಾಲ್ ವೀರ ಜನಾ... ರೆಡ್ಡಿಗೆ ಅದೆಂಥದೋ ಸಂಬಂಧಗಳಿವೆ ಎಂಬ ಗುಲ್ಲೆದ್ದಿದೆ. ಈ 'ಅ... ಮೂಲಕವೇ ರೆಡ್ಡಿ-ಯಡ್ಡಿ ಬಳಗ ವಿದೇಶಕ್ಕೆ ಬೇಲೇಕೇರಿ ಎಂಬ ರಿಮೋ... ಬಂದರಿನ ಮೂಲಕ ಕರ್ನಾಟಕದ ಅದಿರು ಸಂಪತ್ತನ್ನು ಕಳ್ಳ ಸಾಗ... ಮಾಡಿರುವ ಸಾಧ್ಯತೆಗಳಿವೆ ಎಂಬ ಅನುಮಾನ ಮೂಡಿದೆ.

ಬೇಲೇಕೇರಿಯಿಂದ ಟ್ವೆಂಟಿ ಫಸ್ಟ್ ಮತ್ತು ಅಲ್ವಾ ಕಂಪನಿಗಳ ಮಧ್ಯಸ್ಥಿಕೆ... ಅವ್ಯಾಹತವಾಗಿ ಅದಿರು ರಫ್ತಾಗಿರುವ ಸಂಶಯ ಲೋಕಾಯುಕ್ತ ನ್ಯಾ. ಸಂತೋ... ಹೆಗ್ಡೆಯವರಿಗೂ ಇದೆ. ಕೇಂದ್ರ ಅಪರಾಧ ಪತ್ತೆದಳಕ್ಕಂತೂ ಇದೇ ತನಿ... ಮಸ್ತಾಗಿದೆ. ಈ ತನಿಖೆಯಿಂದಾದರೂ ಚೆಡ್ಡಿ ಚೋರರ... ಕರ್ನಾಟಕಕ್ಕೆ ಮುಕ್ತಿ ಸಿಕ್ಕೀತೆ? ರಾಜ್ಯದ ಸಂಪತ್ತು ಕೊ... ಹೊಡೆದು ಅಹಂಕಾರದಿಂದ ಹಾರಾಡುತ್ತಿರ... ಸಂಸ್ಕೃತಿಹೀನರಿಗೆ ಅಂಕುಶ ಬಿದ್ದೀತೆ? ಹಾಗಂತ ಕರ್ನಾ... ಮಂದಿ ಕಾತರದಿಂದ ಕಾಯುತ್ತಿದ್ದಾರೆ.



ಸಮಾಜ ಕಲ್ಯಾಣ ಮಂತ್ರಿಯ ಹಗಲು ದರೋಡೆ!


ಸಚಿವ ಸುಧಾಕರ್

ನಕಲಿ ಸಂಬಳದ ರಸೀದಿ ಸೃಷ್ಟಿಸಿ, ಅದಕ್ಕೆ ಯಾರ್ಯಾ ರ ಫೋಟೋ ಅಂಟಿಸಿ, ಅವರೆಲ್ಲರಿಗೂ ತನ್ನದೇ ಸೊಸೈಟಿಯ ಮೂಲಕ ಸೈಟು ಕೊಡುತ್ತೇನೆಂದು ಬ್ಯಾಂಕ್ ಆಫ್ ಮೈಸೂರಿಗೆ 7 ಕೋಟಿ ರೂಪಾಯಿ ಕನ್ನ ಹಾಕಿದವನ ಕೈಗೆ ಸಮಾಜ ಕಲ್ಯಾಣ ಖಾತೆಯನ್ನು ಕೊಟ್ಟರೆ ಏನಾದೀತು?

ಸಾಲು ಸಾಲು ಸತ್ತ ಭಿಕ್ಷುಕರ ದುರಂತ ಮತ್ತು ಕಾಂಡವಾಗಿ ರೂಪುಗೊಂಡ ಬೆಗ್ಗರ್ಸ್ ಕಾಲೋನಿಯ ಕರ್ಮಕಾಂಡ ಎಂಬುದನ್ನೇ ಸಿ ಸಮಾಜ ಕಲ್ಯಾಣ ಮಂತ್ರಿ ಸುಧಾ ಸಾಹೇಬರ ಯೋಗ್ಯತೆಯನ್ನು ಅಳೆದರೆ ಗುತ್ತದೆ. ಬೇಡಿ ಬದುಕುವ ಭಿಕ್ಷುಕರನ್ನೇ ತಿಂದವನು ಇನ್ನು ದಲಿತರನ್ನೂ, ಉಳಿದ ಕಡುಬಡವರನ್ನೂ, ಮೊರಾರ್ಜಿ ಸಾಯಿ ವಸತಿ ಶಾಲೆಯ ನಿರ್ಗತಿಕ ರನ್ನೂ, ಆದಿವಾಸಿ ಗಿರಿಜನರನ್ನೂ ಬಿಡದೇ ಇರುತ್ತಾನಾ?


ಪತ್ನಿ ಹರ್ಷಿಣಿ

ಸದ್ಯ ಬೆಗ್ಗರ್ಸ್ ಕಾಲೋನಿಯ ಮೃತ್ಯು ದದ ಕಾರಣಪುರುಷನೆಂಬ ಆರೋಪ ಹೊತ್ತು ಮುಖ್ಯಮಂತ್ರಿ ಯಡ್ಡಿಯಿಂದ ತಪರಾಕಿ ತಿಂದು ಮುಜರಾಯಿ ಗೆ ಎತ್ತಂಗಡಿಯಾಗಿರುವ ಡಿ. ಸುಧಾಕರ್ ಕರ್ನಾಟಕ ಮಹಾಭ್ರಷ್ಟ ಮತ್ತು ಅತ್ಯಂತ ಲಜ್ಜೆಗೆಟ್ಟ ಸಮಾಜ



ಣ ಮಂತ್ರಿ ಎಂಬುದಕ್ಕೆ ಇಲ್ಲಿ ಒಂದೆರಡು ಉದಾಹರಣೆ ವೆ. ತನ್ನದೇ ಇಲಾಖೆಯನ್ನು ದೋಚುವುದರಲ್ಲಿ ಸುಧಾಕರ್ ಅಂಥಾ ಹೀನ ಕೆಲಸಕ್ಕೂ ಹೇಸಲಾರ ಎಂಬುದಕ್ಕೆ ಇವು ಸ್ಯಾಂಪಲ್ಲುಗಳಷ್ಟೆ. ಮಂತ್ರಿಯಾದ ಕೇವಲ ಎರಡೇ ವರ್ಷದಲ್ಲಿ ಸುಧಾಕರ್ ಇಡೀ ಇಲಾಖೆಯನ್ನು ಯಾಪಾಟಿ ದೋಚಿದ್ದಾನೆಂಬುದಕ್ಕೆ 2009 ರ ಗಿರಿಜನ ಉಪಯೋಜನೆಯೊಂದೇ ಸಾಕು.

ಇಡೀ ರಾಜ್ಯಕ್ಕೆಂದು ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಗಿರಿಜನ ಉಪಯೋಜನೆಯ ಅನುದಾನದ ಒಟ್ಟು ಮೊತ್ತ 14.96 ಕೋಟಿ ರೂಪಾಯಿಗಳಾದರೆ, ಈ ಪೈಕಿ 5 ಕೋಟಿಯನ್ನು ತನ್ನ ಸ್ವಂತ ಚಿತ್ರದುರ್ಗ ಜಿಲ್ಲೆಗೆಂದು ಸುಧಾಕರ್ ಮಂಜೂರು ಮಾಡುತ್ತಾನೆ. ಹೀಗೆ ಬಂದ ದುಡ್ಡು ಪ್ರಾಮಾಣಿಕವಾಗಿ ಬಳಕೆಯಾಗಿದ್ದರೆ ಚಿತ್ರದುರ್ಗದ ಜನ ಸುಧಾಕರ್ ಬಗ್ಗೆ ಹೆಮ್ಮೆ ಪಡುತ್ತಿದ್ದರು. ಕನಿಷ್ಠ ತನ್ನನ್ನು ಗೆಲ್ಲಿಸಿ ಕಳಿಸಿದ ಹಿರಿಯೂರಿಗಾದರೂ ನಯಾಪೈಸೆಯ ನೆರವಾಗಬಹುದಿತ್ತು. ಆದರೆ ಸುಧಾಕರ್ ತನ್ನ ಸ್ವಕ್ಷೇತ್ರ ಹಿರಿಯೂರಿಗೆಂದೇ ಈ ಐದು ಕೋಟಿಯಲ್ಲಿ ಎರಡೂವರೆ ಕೋಟಿ ರೂಪಾಯಿಗಳಷ್ಟನ್ನು ಹರಿಸುತ್ತಾನೆ.

ವಿಚಿತ್ರವೆಂದರೆ ಹಿರಿಯೂರಿನಲ್ಲಿ ಗಿರಿಜನರೇ ಅಪರೂಪ. ದಲಿತರ ಸಂಖ್ಯೆ ಕೂಡ ಕಮ್ಮಿಯೇ. ಬೇಡ ನಾಯಕರಿದ್ದರೂ ಅವರ ಸಂಖ್ಯೆ 25 ಸಾವಿರವನ್ನು ದಾಟುವುದಿಲ್ಲ. ಹಾಗಂತ ಮಂಜೂರು ಮಾಡಿದ ಎರಡೂವರೆ ಕೋಟಿಗೊಂದು ಗತಿ ಕಾಣಿಸಬೇಕಲ್ಲ, ಗಿರಿಜನಕ್ಕೂ ಪರಿಶಿಷ್ಟರಿಗೂ ಸಂಬಂಧವೇ ಇಲ್ಲದ ವಿಚಿತ್ರ ಉದ್ದೇಶವೊಂದನ್ನು ಸುಧಾಕರ್ ಹುಟ್ಟು ಹಾಕುತ್ತಾನೆ. ಅದು ಮಹಿಳಾ ಭವನಗಳ ನಿರ್ಮಾಣ!

ಹಿರಿಯೂರಿನ ಸೊಂಡೆಕೆರೆ, ಪಾಲವ್ವನಹಳ್ಳಿ, ಎಂ.ಡಿ. ಕೋಟೆ, ಕಂಡಿಕೆರೆ, ಭರಮಪುರ, ವಡ್ಡಿಕೆರೆ, ಯರವಳ್ಳಿ ಇತ್ಯಾದಿ ಒಟ್ಟು 43 ಗ್ರಾಮಗಳಲ್ಲಿ ಗಿರಿಜನರ ದುಡ್ಡು ಬಳಸಿ ಮಹಿಳಾ ಭವನಗಳನ್ನು ನಿರ್ಮಿಸುವುದಂತೆ. ತಲಾ ಮಹಿಳಾ ಭವನಕ್ಕೊಂದು ಎರಡೂವರೆ ಲಕ್ಷದಿಂದ ನಾಲ್ಕು ಲಕ್ಷಗಳ ತನಕ ಒಟ್ಟು 1.34 ಕೋಟಿಗಳಷ್ಟು ದುಡ್ಡೂ ಬಿಡುಗಡೆಯಾಗುತ್ತದೆ. ಆದರೆ ಒಂದೇ ಒಂದು ಮಹಿಳಾ ಭವನವೂ ಈತನಕ ತಲೆ ಎತ್ತಿಲ್ಲ. ಯಾವುದೇ ಗ್ರಾಮದಲ್ಲಿ ಕನಿಷ್ಠ ಪಾಯ ಹಾಕಿದ ಅವಶೇಷ ಕೂಡ ಕಾಣದೇ ಹೋದರೂ ಸಮಾಜ ಕಲ್ಯಾಣ ಇಲಾಖೆಯ ದಾಖಲೆಗಳಲ್ಲಿ ಮಾತ್ರ ಇಂಥ 43 ಮಹಿಳಾ ಭವನಗಳನ್ನು ನಿರ್ಮಿಸಿದ ಬಗ್ಗೆ, ಅದಕ್ಕೆ ಸಿಮೆಂಟು, ಇಟ್ಟಿಗೆ, ಮರಮಟ್ಟು ಖರೀದಿಸಿದ ಬಗ್ಗೆ ಬೇಕಾಬಿಟ್ಟಿ ಬೋಗಸ್ ಬಿಲ್ಲುಗಳಿವೆ.



ಇದು ಸುಧಾಕರನ ಸಮಾಜ ಕಲ್ಯಾಣದ ಒಂದು ಶೈಲಿಯಷ್ಟೇ. ಇಡೀ ರಾಜ್ಯದ ನೂರಾರು ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ ಶಿಕ್ಷಕರು, ಅಡುಗೆಯವರು, ಪೀವನ್‌ಗಳು ಮತ್ತು ಸಂಗೀತ, ಕಂಪ್ಯೂಟರ್ ಇತ್ಯಾದಿ ತರಬೇತುದಾರರನ್ನು ನೇಮಿಸಿಕೊಳ್ಳುವ ಹೊಣೆ ಕೂಡ ಮಂತ್ರಿಯದೇ ಆಗಿತ್ತಲ್ಲ.

ಇದೊಂದೇ ಬಾಬತ್ತಿನಿಂದ ತಿಂಗಳಿಗೆ ಮೂರ್ನಾಲ್ಕು ಕೋಟಿ ದೋಚುವ ಕಳ್ಳತಂತ್ರ ಹೆಣೆದದ್ದು ಸುಧಾಕರ್‌ನ ಮತ್ತೊಂದು ಕಲೆಗಾರಿಕೆಯಾಗಿತ್ತು. ರಾಜ್ಯಾದ್ಯಂತದ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ ಅಗತ್ಯವಿದ್ದ ಸಿಬ್ಬಂದಿ ಸಂಖ್ಯೆಯೇ ಮೂರು ಸಾವಿರಕ್ಕೂ ಅಧಿಕ. ನಿಯಮಾನುಸಾರ ನೇಮಕಾತಿಯಾದರೆ ರಾಬರಿಗೆ ಅವಕಾಶವಾಗುವುದಿಲ್ಲ, ಅದಕ್ಕೆ ಅಷ್ಟೂ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳುವುದೆಂದೂ ಅದನ್ನು ತನ್ನದೇ ಒಡೆತನದ ಚಳ್ಳಕೆರೆಯ ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆಯನ್ನು ಆಯುಧವಾಗಿ ಬಳಸಿ ಪೂರೈಸುವುದೆಂದೂ ಸುಧಾಕರ್ ತಂತ್ರ ರೂಪಿಸುತ್ತಾನೆ.


ಡಿ.ಎಸ್.ಕುಮಾರ್

ಪದ್ಮಶ್ರೀ


ಅದರಂತೆ ಸ್ವಾಮಿ ವಿವೇಕಾನಂದ ವಿದ್ಯಾ ಸಂಸ್ಥೆಯೇ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಮೂರು ಸಾವಿರದಷ್ಟು ಹುದ್ದೆಗಳಿಗೆ ನೇಮಕಾತಿ ಸಂದರ್ಶನ ನಡೆಸುತ್ತದೆ. ಅದರರ್ಥ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ನೇಮಕಗೊಂಡವರೆಲ್ಲರಿಗೂ ಸಂಬಳ ಬಟವಾಡೆಯಾಗುವುದು ಚಳ್ಳಕೆರೆಯ ಸ್ವಾಮಿ ವಿವೇಕಾನಂದ ವಿದ್ಯಾ ಸಂಸ್ಥೆಯಿಂದ!

ಇಲ್ಲಿ ಗುತ್ತಿಗೆ ನೇಮಕಾತಿ ಮಾಡುವ ಕಾಂಟ್ರಾಕ್ಟ್ ಸಂಸ್ಥೆಗಾಗಿ ಯಾವುದೇ ಟೆಂಡರ್ ಕರೆದಿಲ್ಲ, ಪಾರದರ್ಶಕ ಕಾಯ್ದೆಯ ಯಾವ ನಿಯಮಾವಳಿಯನ್ನೂ ಪಾಲಿಸಿಲ್ಲ. ಹೀಗೆ ನೇಮಕಗೊಂಡ ಪ್ರತಿ ಸಿಬ್ಬಂದಿಯ ಸಂಬಳದಲ್ಲೂ ಕನಿಷ್ಠ 20 ಪರ್ಸೆಂಟಿನಷ್ಟು ಕಾನೂನುಬದ್ಧವಾಗೇ ಸಚಿವರ ಒಡೆತನದ ವಿದ್ಯಾ ಸಂಸ್ಥೆಯ ಪಾಲಾಗುತ್ತದೆ.

ಮೊರಾರ್ಜಿ ವಸತಿ ಶಾಲೆಗೆಂದು ನೇಮಕಗೊಂಡ ಪ್ರತಿ ಶಿಕ್ಷಕ, ಅಡುಗೆಯವ, ವಾರ್ಡನ್; ಇತ್ಯಾದಿಗಳಿಗೆಲ್ಲ ಸಚಿವರ ಸಂಸ್ಥೆಯ ಮೂಲಕವೇ ಸಂಬಳ ಬಟವಾಡೆಯಾಗುತ್ತದೆಯಾದ್ದರಿಂದ ಕೊಟ್ಟಿದ್ದೇ ಸಂಬಳ, ಮಾಡಿದ್ದೇ ಕೆಲಸ. ಚೆಕ್ಕುಗಳಲ್ಲಿ ನಮೂದಾಗುವ ಮೊತ್ತವೇ ಒಂದಾದರೆ ಶಿಕ್ಷಕನ ಕೈ ಸೇರುವ ಮೊತ್ತ ಇನ್ನೊಂದು. ಪ್ರತಿ ಸಿಬ್ಬಂದಿಯ ಸಂಬಳದಲ್ಲಿ ತಿಂಗಳಿಗೆ ಕನಿಷ್ಠ ಸಾವಿರ ರೂಪಾಯಿ ಸಂಬಳ ಮುರಕೊಂಡರೂ ತಿಂಗಳೊಂದಕ್ಕೆ ಕಮ್ಮಿಯೆಂದರೂ ಮೂರರಿಂದ ನಾಲ್ಕು ಕೋಟಿಯಷ್ಟು ಶಿಕ್ಷಕರ ಬೆವರಿನ ರೊಕ್ಕ ಮಂತ್ರಿಯ ಜೇಬಿಗೆ ಬಂದು ಬೀಳುತ್ತದೆ.

ತನ್ನದೇ ಇಲಾಖೆಗೆ ತಾನೇ ಕಮಿಷನ್ ಪಡೆದು ಗುತ್ತಿಗೆಯ ಶಿಕ್ಷಕರ ಸಂಬಳದಲ್ಲೂ ಮತ್ತೆ ಕಮಿಷನ್ ದೋಚುವ ಮಂತ್ರಿಯನ್ನು ಬಹುಶಃ ಸಮಾಜ ಕಲ್ಯಾಣ ಇಲಾಖೆ ತನ್ನ ಇತಿಹಾಸದಲ್ಲೇ ಕಂಡಿರ


►► 9

7 ಕೋಟಿ ವಂಚನೆ ಮತ್ತು ತೆಪ್ಪಗಾದ ಸಿಬಿಐ?

ಸಿಬಿಐ ಕುಣಿಕೆಯಲ್ಲಿರುವ ಯಡ್ಡಿ ಸಂಪುಟದ ಇಬ್ಬರು ಮಂತ್ರಿಗಳ ಪೈಕಿ ಒಬ್ಬ ಕೃಷ್ಣಯ್ಯ ಶೆಟ್ಟಿಯಾದರೆ ಮತ್ತೊಬ್ಬ ಸುಧಾಕರ್. ಅದು ಕೋರ್ಟುಗಳ ವಿಧಿ ವಿಪರೀತವೋ ಅಥವಾ ಸಿಬಿಐ ಅಧಿಕಾರಿಗಳಿಗೇ ಸುಧಾಕರ್ ಗಾಳ ಹಾಕಿದ್ದನೋ ಗೊತ್ತಿಲ್ಲ.

ಶ್ರೀಪೂಲ್ ಎಂಟರ್‌ಪ್ರೈಸಸ್ ಎಂಬ ತನ್ನದೇ ರಿಯಲ್ ಎಸ್ಟೇಟ್ ಕಂಪೆನಿಯ ಮೂಲಕ ಸುಧಾಕರ್ ಗಾಂಧಿನಗರದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾಕ್ಕೆ ವಂಚಿಸಿದ್ದು ಒಟ್ಟು ಏಳು ಕೋಟಿ ರೂಪಾಯಿಗಳು. 7 ಕೋಟಿ ರೂ. ಸಣ್ಣ ಮೊತ್ತವೇನಲ್ಲ, ಅದಕ್ಕೆ ಸುಧಾಕರ್ ಆಡಿದ ಆಟ ಕೂಡ ಯಾವ ವಂಚಕನಿಗೂ ಕಮ್ಮಿಯದೇನಲ್ಲ. ಗಡದಿಯಲ್ಲಿ ಮತ್ತು ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಅಬ್ಬಿಗೆರೆಯಲ್ಲಿ ಒಂದಷ್ಟು ಜಮೀನು ಖರೀದಿಸಿದ ಸುಧಾಕರ್, ಅದಕ್ಕೆ ತನ್ನ ಪತ್ನಿ ಹರ್ಷಿಣಿ, ತಮ್ಮ ಡಿ.ಎಸ್. ಕುಮಾರ್, ಪತ್ನಿಯ ತಮ್ಮ ಅಜಿತ್ ಪ್ರಸಾದ್ ಜೈನ್, ಚಿಕ್ಕಪ್ಪನ ಮಗ ಬಾಹುಬಲಿ ಮತ್ತು ಸೈಟ್ ಬ್ರೋಕರ್ ಹನುಮಪ್ಪ ರೆಡ್ಡಿಯನ್ನು ಪಾಲುದಾರರನ್ನಾಗಿ ಮಾಡಿಕೊಳ್ಳುತ್ತಾನೆ.

ಅಲ್ಲಿ ಸೈಟುಗಳನ್ನು ವಿಂಗಡಿಸಿದಂತೆ ಮಾಡಿ ಇಂಥ ಸೈಟಿಗೂ ರೈಲ್ವೇ, ಎಚ್‌ಎಎಲ್, ಬಿಇಎಲ್, ..., ಬಿಎಂಟಿಸಿ, ಬಿಎಸ್‌ಎನ್‌ಎಲ್; ಇತ್ಯಾದಿ ರಾಜ್ಯ ಮತ್ತು ಕೇಂದ್ರದ ಸಂಸ್ಥೆಗಳ ನೌಕರರನ್ನು ಗಿರಾಕಿಗಳಂತೆ ಬೋಗಸ್ ದಾಖಲೆ ಸೃಷ್ಟಿಸುತ್ತಾನೆ. ಜಮೀನಿದೆ-ಗಿರಾಕಿಗಳೂ ಇದ್ದಾರೆ ಎಂದ ಮೇಲೆ ಅದಕ್ಕೆ ಗಾಂಧಿನಗರದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಮ್ಯಾನೇಜರ್ ಎಂ.ಟಿ.ವಿ.ರೆಡ್ಡಿ 7ಕೋಟಿ ರೂಪಾಯಿಗಳಷ್ಟು ಸಾಲ ಮಂಜೂರು ಮಾಡಲೇಬೇಕಲ್ಲ?


ಸಿಬಿಐ ಆರೋಪ ಪಟ್ಟಿ

ಆದರೆ ಇದೊಂದು ಪಕ್ಕಾ ಗೋಲ್‌ಮಾಲ್ ಡೀಲೆಂದು ಬಯಲಾಗಿದ್ದು 2007 ರಲ್ಲಿ. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ 7 ಕೋಟಿ ದೋಚಲು ಮಂತ್ರಿ ಸುಧಾಕರ್ ಮತ್ತು ಬ್ಯಾಂಕ್ ಮ್ಯಾನೇಜರ್ ಎಂ.ಟಿ.ವಿ. ರೆಡ್ಡಿ ಸೇರಿಕೊಂಡೇ ಇಂಥದ್ದೊಂದು ಷಡ್ಯಂತ್ರ ರಚಿಸಿರುತ್ತಾರೆ. ಜಮೀನಿಗೂ ಬೋಗಸ್ ದಾಖಲೆ, ಸೈಟುಗಳೇ ಇಲ್ಲ ಮತ್ತು ಸೈಟು ಖರೀದಿಸಿದವರ್‍ಯಾರೂ ರೈಲ್ವೇ, ಎಚ್‌ಎಎಲ್ ಇತ್ಯಾದಿ ಕಂಪನಿಗಳ ಉದ್ಯೋಗಿಗಳೇ ಅಲ್ಲ. ನಕಲಿ ಆಸಾಮಿಗಳ ಫೋಟೋ ಲಗತ್ತಿಸಿದ ಸುಧಾಕರ್ ಅವರ ಸಂಬಳದ ರಸೀದಿಗಳನ್ನೂ ಫೋರ್ಜರಿ ಮಾಡಿದ್ದ. ಇದು ಗೊತ್ತಾಗಿದ್ದೇ ಬ್ಯಾಂಕು ಸುಧಾಕರ್, ಆತನ ಪತ್ನಿ ಹರ್ಷಿಣಿ, ಬಾಮೈದ ಅಜಿತ್ ಪ್ರಸಾದ್ ಜೈನ್, ಚಿಕ್ಕಪ್ಪನ ಮಗ ಬಾಹುಬಲಿ ಮತ್ತು ಬ್ಯಾಂಕ್ ಮ್ಯಾನೇಜರ್ ಎಂ.ಟಿ.ವಿ.ರೆಡ್ಡಿಯ ವಿರುದ್ಧ ಸಿಬಿಐಗೆ ದೂರು ನೀಡಿತು.

ಇನ್ನೇನು ಸಿಬಿಐ ಮಂತ್ರಿ ಸುಧಾಕರ್‌ನನ್ನು ಆತನ ಪತ್ನಿ ಸಮೇತ ಬಂಧಿಸಬೇಕಿತ್ತು, ಆದರೆ ಸುಧಾಕರ್ ಸಿಬಿಐ ವಿರುದ್ಧ ಹೈಕೋರ್ಟಿನಿಂದ ತಡೆಯಾಜ್ಞೆ ತಂದುಬಿಟ್ಟ. 2010 ರ ಫೆಬ್ರವರಿ 3 ರಂದು ರಾಜ್ಯ ಹೈಕೋರ್ಟಿನ ಏಕಪೀಠ ಅರ್ಜಿದಾರನಾದ ಮಂತ್ರಿ ಸುಧಾಕರ್‌ನನ್ನು 1 ವಾರದ ಮಟ್ಟಿಗಷ್ಟೇ ಬಂಧಿಸಬಾರದೆಂದು ಸಿಬಿಐ ವಿರುದ್ಧ ತಡೆ ನೀಡಿದ್ದುಬಿಟ್ಟರೆ ಅನಂತರ ಬಂಧಿಸಬಾರದೆಂದಾಗಲಿ, ವಿಚಾರಣೆ ನಡೆಸಬಾರದೆಂದಾಗಲಿ ಹೇಳೇ ಇರಲಿಲ್ಲ.


ಹೀಗೇ 1 ವಾರದ ಮಟ್ಟಿಗೆ ಹೈಕೋರ್ಟ್ ನೀಡಿದ ತಡೆ 2010 ರ ಫೆಬ್ರವರಿ 11 ಕ್ಕೆ ಮುಗಿದಿತ್ತು. ಸಿಬಿಐ ನಿರಾಯಾಸವಾಗಿ ಸುಧಾಕರ್‌ನನ್ನು ಬಂಧಿಸಿ ಜೈಲಿಗೆ ದಬ್ಬಬಹುದಿತ್ತು. ಅಷ್ಟಕ್ಕೂ ಆರೋಪಿಯೊಬ್ಬನನ್ನು ಬಂಧಿಸದಂತೆ ಸಿಬಿಐಗೆ ಆದೇಶಿಸುವ ಅಧಿಕಾರವೇ ಕೋರ್ಟಿಗಿರಲಿಲ್ಲ. ಇದರ ವಿರುದ್ಧ ಸಿಬಿಐ ಸುಪ್ರೀಂಕೋರ್ಟಿಗೆ ಹೋಗಬಹುದಿತ್ತು ಅಥವಾ ಸಹಜವಾಗೇ ಸುಧಾಕರ್‌ನನ್ನು ಬಂಧಿಸಿ ವಿಚಾರಣೆ ಮುಂದುವರಿಸಬಹುದಿತ್ತು. ವಿಚಿತ್ರವೆಂದರೆ ಸಿಬಿಐ ಮಂತ್ರಿಯನ್ನು ಬಂಧಿಸಲೂ ಇಲ್ಲ, ಹೈಕೋರ್ಟ್ ಆದೇಶದ ವಿರುದ್ಧ ಸುಪ್ರೀಂಕೋರ್ಟಿಗೆ ಅಪೀಲೂ ಹಾಕಲಿಲ್ಲ!

ಏನಿದರ ಅರ್ಥ? ಸುಧಾಕರ್ ಸಿಬಿಐ ಅಧಿಕಾರಿಗಳಿಗೇ ಪ್ರಸಾದ ತಿನ್ನಿಸಿದನೆ? ಅಥವಾ ಹೈಕೋರ್ಟನ್ನೇ ಯಾಮಾರಿಸಿದನೆ? ಯಃಕಶ್ಚಿತ್ ಬೈಕು ಕದ್ದವನನ್ನು ಅಟ್ಟಾಡಿಸಿ ಜೈಲಿಗೆ ದಬ್ಬುವ ಕೋರ್ಟು, ಪೊಲೀಸರು, ಸಿಬಿಐಗಳೆಲ್ಲ ಏಳು ಕೋಟಿ ದೋಚಿದ ಮಂತ್ರಿಯ ವಿರುದ್ಧ ತೆಪ್ಪಗಾಗಿದ್ದೇಕೆ? ಹೋಗಲಿ, 7 ಕೋಟಿಯ ಬ್ಯಾಂಕ್ ವಂಚನೆ ಕೇಸಾದರೂ ಮುಂದುವರಿಯಬೇಕಿತ್ತಲ್ಲವೆ? ಏಕೆ ವಿಚಾರಣೆಯೇ ಸ್ಥಗಿತಗೊಂಡಿದೆ?

ಮಂತ್ರಿ ಸುಧಾಕರ್ ಅದೆಂಥಾ ವಂಚಕನೆಂಬುದಕ್ಕೆ ಇದು ಲೇಟೆಸ್ಟ್ ಉದಾಹರಣೆಯಷ್ಟೇ. ಕೋರ್ಟು, ಸಿಬಿಐ ಕಣ್ಣಿಗೇ ಮಣ್ಣೆರಚಿದವನು ಇಲಾಖೆಯನ್ನು ಬಿಟ್ಟಾನಾ, ಭಿಕ್ಷುಕರನ್ನು ಬಿಟ್ಟಾನಾ? ಇನ್ಯಾವ ಪುರುಷಾರ್ಥಕ್ಕೆ ಸಿಬಿಐ ಇರಬೇಕು? ●

ಅಣ್ಣಿಗೇರಿ ಬುರುಡೆ ರಹಸ್ಯ

ಬುರುಡೇ, ಬುರುಡೆ!



ಬರೀ ಅಂತೆಕಂತೆಗಳ ಪುರಾಣ!

ಅಬ್ಬಾ..!

ಮೊದಲು ಶಿರಚ್ಛೇದನ.. ಒಂದು ದಿನ ಪ್ಲೇಗು, ಮತ್ತೊಂದು ದಿನ ಕಾಲರಾ ರೋಗ.. ಮಗದೊಂದು ದಿನ ವಾಮಾಚಾರ.. ಮುಂದೆ ನರಮೇಧ.. ರಾಜಕೀಯ ಹತ್ಯಾಕಾಂಡ.. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬ್ರಿಟಿಷರು ನಡೆಸಿದ ಕೊಲೆಗಳು.. ರಾಜದ್ರೋಹಿ ಕಗ್ಗೊಲೆ.. ಮತಾಂತರಕ್ಕೆ ನಿರಾಕರಿಸಿದವರ ಸಾಮೂಹಿಕ ಹತ್ಯೆ.. ಇಲ್ಲಾ, ಇಲ್ಲಾ, ಕಳ್ಳಸಾಗಾಣಿಕೆಯ ಬುರುಡೆಗಳು ಇವಾಗಿರಬಹುದಲ್ಲವೇ?!

ಹೀಗೆ ದಿನಕ್ಕೆ ಒಬ್ಬರೋ ಇಬ್ಬರೋ ತಜ್ಞರೆನಿಸಿಕೊಂಡವರು ಅಣ್ಣಿಗೇರಿಗೆ ಬಂದು ಒಂದು ಬುರುಡೆಯನ್ನು ಕೈಯಲ್ಲಿ ಹಿಡಿದುಕೊಂಡು ಫೋಟೋಕ್ಕೆ ಪೋಜು ಕೊಟ್ಟು ಒಂದು ಕಾಲ್ಪನಿಕ ಕಥೆ ಹೇಳಿ, ಅದಕ್ಕೊಂದು ಹೆಡ್ಡಿಂಗ್ ನೀಡಿ ಅಲ್ಲಿಂದ ಎಸ್ಕೇಪ್ ಆಗುತ್ತಿದ್ದಾರೆ.

ಅಸಲಿಗೆ ಸ್ಥಳೀಯ ಹಿರಿಯ ನಾಗರಿಕರಿಗೂ ಈ ಬುರುಡೆಗಳ ಬಗ್ಗೆ ಸ್ಪಷ್ಟ ಚಿತ್ರಣ ಇಲ್ಲ. ಪುರಸಭೆಯಲ್ಲಾಗಲಿ, ಸ್ಥಳೀಯ ಕಂದಾಯ ಆಡಳಿತ ಇಲಾಖೆಯಲ್ಲಾಗಲಿ ಈ ಬುರುಡೆಗಳ ಬಗ್ಗೆ ಹಾಗೂ ಅಣ್ಣಿಗೇರಿಯ ಹಿಂದಿನ ಇತಿಹಾಸದ ಬಗ್ಗೆ ತಿಳಿಸಬಲ್ಲ ಯಾವೊಂದೂ ದಾಖಲೆಗಳೂ ದೊರೆತಿಲ್ಲ. ಹೀಗಿದ್ದರೂ ಇತಿಹಾಸ ತಜ್ಞರು, ಪ್ರಾಚ್ಯವಸ್ತು ತಜ್ಞರು, ವಿಧಿವಿಜ್ಞಾನ ಪ್ರಯೋಗಾಲಯದ ತಜ್ಞರು, ಮೂಳೆ ತಜ್ಞರು, ಭೂವಿಜ್ಞಾನಿಗಳು ಎಂತೆಲ್ಲಾ ಹೇಳಿಕೊಂಡು ಇಲ್ಲಿಗೆ ಬಂದ ನೂರಾರು ಶ್ಯಾಣ್ಯಾ ತಲೆಬುರುಡೆಗಳೇ ಇಂತಹ ಅಂತೆಕಂತೆಗಳನ್ನೋ, ಅಡಗೂಲಜ್ಜಿ ಕಥೆಗಳನ್ನೋ ಹೇಳಿ ತಮಗೆ ತೋರಿದಂತೆ ಇತಿಹಾಸವನ್ನು ಬರೆಯಲು ಯತ್ನಿಸಿ ಹೋಗಿದ್ದಾರೆ!

ಆದರೆ ಈ ಬುರುಡೆಗಳನ್ನು ಇಷ್ಟೇ ವರ್ಷದ ಹಿಂದೆ ಹೂಳಲಾಗಿತ್ತು, ಸತ್ತ ಶವಗಳಿಗೆ ಇಷ್ಟೇ ವಯಸ್ಸಾಗಿತ್ತು ಅವು ಹೆಣ್ಣೋ, ಗಂಡೋ ಅಥವಾ ಮಕ್ಕಳದ್ದಾಗಿವೆಯೋ ಎಂದೆಲ್ಲ ಸ್ಪಷ್ಟ ಚಿತ್ರಣ ಸಿಗುವುದು ಅವುಗಳನ್ನು ವೈಜ್ಞಾನಿಕ ಪ್ರಯೋಗಕ್ಕೆ ಒಡ್ಡಿದ ನಂತರವೇ. ಮಾತ್ರವಲ್ಲ ಅಲ್ಲಿ ಹೂಳಲಾಗಿದ್ದ ಜನರ ಸಾವು ಕೂಡಾ ಇಂತಹ ಕಾರಣದಿಂದಲೇ ಆಗಿರಬಹುದು ಎಂದೂ ವೈಜ್ಞಾನಿಕವಾಗಿ ಅಂದಾಜಿಸಬಹುದು. ಹೀಗಿರುವಾಗ ಕೆಲವರು ಅಡ್ಡಾನ್ಸಾಗಿ ತಮ್ಮದೇ ತರ್ಕಗಳಿಂದ ಸ್ವಂತ ಅಥವಾ ರಿಮೇಕ್ ಸ್ಟೋರಿಗಳನ್ನು ಈ ಬುರುಡೆಗಳ ಸುತ್ತ ಹೆಣೆಯುತ್ತಿರುವುದು ಎಷ್ಟು ಸರಿ?

ಆಗಿದ್ದಿಷ್ಟು

ಹಲವಾರು ವರ್ಷಗಳಿಂದ ಮಣ್ಣು ತುಂಬಿಕೊಂಡು ಪಾಳು ಬಿದ್ದಂತಾಗಿದ್ದ ಊರಿನ ಕಾಲುವೆಗಳನ್ನು ಸ್ವಚ್ಛಗೊಳಿಸುವ ಮತ್ತು ತುಂಬಿದ್ದ ಹೂಳನ್ನು ಮೇಲಕ್ಕೆತ್ತುವ ಕೆಲಸಕ್ಕೆ ಅಣ್ಣಿಗೇರಿ ಪುರಸಭೆ ಕೈಹಾಕಿತ್ತು. ಪಟ್ಟಣದ ಅಗಸಿ ಓಣಿಯಿಂದ ಹುಬ್ಬಳ್ಳಿ ಬೈಪಾಸ್ ರಸ್ತೆಗೆ ಸೇರುವ ರಸ್ತೆಯ ಎರಡೂ ಬದಿಯ ಗಟಾರಗಳನ್ನು ಜೆಸಿಬಿ ಯಂತ್ರ ಬಳಸಿ ಹೂಳನ್ನು ತೆಗೆಯಲಾಗುತ್ತಿತ್ತು. ಇತ್ತೀಚೆಗೆ ಸುರಿದ ಭಾರೀ ಮಳೆಗೆ ಕಾಲುವೆಯ ಎರಡು ದಂಡೆಗಳು ಸಡಿಲಗೊಂಡಿದ್ದವು. ಜೆಸಿಬಿ ಯಂತ್ರ ತನ್ನ ಕೊಕ್ಕೆಯಿಂದ ರಭಸವಾಗಿ ಮಣ್ಣೆಳೆದಾಗ ಬುರುಡೆಗಳು ಹೊರಬಿದ್ದಿವೆ. ಅವು ಮನುಷ್ಯರ ಬುರುಡೆಗಳು ಎಂದು ಗೊತ್ತಾಗಿದ್ದೇ ತಡ, ಮುಂದೇನಿರಬಹುದು ಎಂಬ ಕುತೂಹಲದಿಂದ ಮತ್ತಷ್ಟು ಆಳ ಹಾಗು ಅಗಲವಾಗಿ ಮಣ್ಣನ್ನು ಬಗೆದಾಗ ತಲೆ ಬುರುಡೆಗಳನ್ನು ಸಾಲುಸಾಲಾಗಿ ಜೋಡಿಸಿಟ್ಟಿರುವುದು ಕಂಡಿದೆ. ಇದರಿಂದ ಆಶ್ಚರ್ಯಗೊಂಡ ಪುರಸಭೆ ಸಿಬ್ಬಂದಿ ಅಧಿಕಾರಿಗಳಿಗೆ ತಿಳಿಸಿದ್ದಾರೆ.

ಅವತ್ತಿನಿಂದ ಶುರುವಾದ 'ಬುರುಡೆ ರಹಸ್ಯ ಬಯಲು ಕಾರ್ಯಕ್ರಮ' ಇಂದಿಗೂ ಮುಂದುವರೆದಿದೆ. ಸುದ್ದಿ ಹೊರಬಿದ್ದಿದ್ದೆ ತಡ ಬುರುಡೆಗಳ ಸಾಲನ್ನು ನೋಡಲು ಜನಸಾಗರ ಹರಿದುಬರುತ್ತಿದೆ. 'ಹಿಂಗೂ ಉಂಟೋ' ಎಂದು ತಮ್ಮನ್ನು ತಾವೇ ಪ್ರಶ್ನಿಸಿಕೊಳ್ಳುತ್ತಿದ್ದಾರೆ.

ಪರೀಕ್ಷೆ? ಪರಿಣಾಮ


ತೀವ್ರ ಕುತೂಹಲಕ್ಕೆ ಕಾರಣವಾಗಿರುವ ಈ ಬುರುಡೆ ರಹಸ್ಯವನ್ನು ಬೇಧಿಸಲು ಅನೇಕ ತಜ್ಞರು ಹರಸಾಹಸ ಪಡುತ್ತಿದ್ದಾರೆ. ಕಾಲುವೆ ಅಗೆಯುವ ಜಾಗದಲ್ಲಿ ಈಗ ಸಿಕ್ಕಿರುವ 150 ಕ್ಕೂ ಹೆಚ್ಚು ತಲೆ ಬುರುಡೆಗಳಲ್ಲಿ ಸುಮಾರು 50 ಬುರುಡೆಗಳನ್ನು ಪ್ರಯೋಗ ಪರೀಕ್ಷೆಗೆ ಎಂದು ಹೈದ್ರಾಬಾದ್, ಬೆಂಗಳೂರು, ಮುಂಬೈ, ಹುಬ್ಬಳ್ಳಿಯ ಕಿಮ್ಸ್ ವಿಧಿ ವಿಜ್ಞಾನ ಪ್ರಯೋಗಾಲಯಗಳಿಗೆ ಕಳುಹಿಸಲಾಗಿದೆ. ಆದರೆ ಬುರುಡೆ ಪರೀಕ್ಷೆಗೆ ಕನಿಷ್ಠವೆಂದರೂ 4 ತಿಂಗಳು ಬೇಕಾಗುತ್ತೆ ಎಂಬುದು ತಜ್ಞರ ಅಭಿಪ್ರಾಯ. ಹೈದ್ರಾಬಾದ್ ಹಾಗೂ ಮುಂಬೈನ ವಿಧಿ ವಿಜ್ಞಾನ ಪ್ರಯೋಗಾಲಯದ ತಜ್ಞರ ತಂಡ ಬುರುಡೆ ಸಿಕ್ಕ ಜಾಗೆಗೆ ಭೇಟಿ ಕೊಟ್ಟು ಸುಮಾರು 30 ಬುರುಡೆಗಳನ್ನು ಹೊತ್ತೊಯ್ದಿದೆ. "ಬುರುಡೆಗಳು ಮಳೆಗೆ ಸಿಕ್ಕು, ನೀರಿನಿಂದ ತನ್ನ ಮೂಲ ರೂಪ ಕಳೆದುಕೊಂಡಿವೆ. ಇದರಿಂದಾಗಿ ಪರೀಕ್ಷೆ ಅಷ್ಟು ಸುಲಭವಲ್ಲ" ಎಂದು ಆ ತಂಡ ಹೇಳಿ ಹೋಗಿದೆ.

ಇದೆಲ್ಲದರ ಮಧ್ಯೆ ಹುಬ್ಬಳ್ಳಿ ಕಿಮ್ಸ್‌ನ ಡಾ. ಸುರೇಶ ಬಿರಾದಾರ ಮತ್ತು ಡಾ. ಗಣೇಶ ನಾಯ್ಕ ಎಂಬುವವರು ಕೇವಲ ನಾಲ್ಕು ದಿನಗಳಲ್ಲಿ ಈ ಬುರುಡೆಗಳನ್ನು ಕುರಿತು ಒಂದು ರಿಪೋರ್ಟ್‌ನ್ನು ಹೊರಬಿಟ್ಟಿದ್ದಾರೆ. ತಾವು ತೆಗೆದುಕೊಂಡು ಹೋಗಿದ್ದ 3 ಬುರುಡೆಗಳಲ್ಲಿ ಒಂದು ಹೆಣ್ಣು 2 ಗಂಡಿನ ತಲೆ ಬುರುಡೆಗಳಾಗಿವೆ, ಅವರು ಮೃತಪಟ್ಟಾಗ 30 ರಿಂದ 40 ವಯಸ್ಸಿನವರಾಗಿದ್ದರು, ಬುರುಡೆಗಳ ಮೇಲೆ ಯಾವುದೇ ಗಾಯದ ಗುರುತುಗಳಿಲ್ಲ ಎಂದು ತಮ್ಮ ಪ್ರಾಥಮಿಕ ವರದಿಯನ್ನು ಜಿಲ್ಲಾಧಿಕಾರಿಗೆ ಇವರಿಬ್ಬರು ನೀಡಿಬಿಟ್ಟಿದ್ದಾರೆ!

ರುಂಡ ಇವೆ, ಆದರೆ ಮುಂಡಗಳೆಲ್ಲಿ?

ಅಣ್ಣಿಗೇರಿಯಲ್ಲಿ ರುಂಡಗಳೇನೋ ಸಿಕ್ಕಿವೆ. ಆದರೆ ಅವುಗಳ ಮುಂಡಗಳೆಲ್ಲಿ? ಈ ಪ್ರಶ್ನೆ ಈ ಬುರುಡೆ ಪ್ರಕರಣಕ್ಕೆ ಹೊಸ ತಿರುವನ್ನು ಕೊಟ್ಟಿದೆ. ತಲೆ ಬುರುಡೆಗಳಿಗಾಗಿ ನಡೆಸಿದ ಉತ್ಖನನದಲ್ಲಿ 5 ಸಾಲುಗಳಲ್ಲಿ ರುಂಡಗಳು ಮಾತ್ರ ಸಿಕ್ಕಿವೆ. ಸುಮಾರು 30-40 ಅಡಿಗಳಷ್ಟು ಉದ್ದ ಹೂಳನ್ನು ತೆಗೆಯಲಾಗಿದ್ದೂ ಆ ರುಂಡಗಳ ಉಳಿದ ದೇಹದ ಅವಶೇಷಗಳು ದೊರೆತಿಲ್ಲ. ಕೆಲವೊಂದು ಕಡೆ ಕೈ ಕಾಲಿನ ಮೂಳೆಗಳು ಮಾತ್ರ ದೊರೆತಿವೆ. ಆದರೂ ಇವು ಯಾವ ಬುರುಡೆಗೆ ಸಂಬಂಧಿಸಿದ್ದು ಎಂದು ಗೊತ್ತಾಗಿಲ್ಲ. ಆದರೆ ಇದೇ ವಿಷಯವನ್ನೇ ಬಂಡವಾಳವನ್ನಾಗಿಸಿಕೊಂಡು 'ಇತಿಹಾಸ ತಜ್ಞ'ರು ಬುರುಡೆ ಕಥೆ ಹೇಳುತ್ತಿರುವುದಂತೂ ಸತ್ಯ.

ಇಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವೆಂದರೆ: ಈಗ ಪತ್ತೆಯಾಗಿರುವ ಬುರುಡೆ ಹಾಗೂ ಮೂಳೆಗಳು ಇಷ್ಟು ವರ್ಷಗಳ ಕಾಲ ಹೇಗೆ ಕಾಣಿಸಿಕೊಂಡಿರಲಿಲ್ಲ? ಕೇವಲ 15-20 ವರ್ಷಗಳ ಹಿಂದೆಯಷ್ಟೆ ಇದೇ ಜಾಗದಲ್ಲಿ ಕಚ್ಚಾ ಗಟಾರ ಅಗೆಯಲಾಗಿತ್ತಾದರೂ ಅದಕ್ಕೂ ಮುನ್ನ ಈ ಭೂಮಿಯಲ್ಲೇ ಕೃಷಿ ಚಟುವಟಿಕೆಗಳನ್ನು ನಡೆಸಲಾಗುತ್ತಿತ್ತು, ಆ ಸಂದರ್ಭದಲ್ಲಿ ಕಂಡುಬಾರದಿದ್ದ ಈ ಬುರುಡೆಗಳು ಈಗ ಇದ್ದಕ್ಕಿದ್ದಂತೆ ಗೋಚರಿಸುತ್ತಿರುವುದರ ಹಿಂದಿನ



ರಹಸ್ಯವಾದರೂ ಏನು? ಅಷ್ಟೇ ಮುಖ್ಯವಾಗಿ ಈ ಬುರುಡೆಗಳು ಕೇವಲ 4-5 ಅಡಿ ಆಳದಲ್ಲಿ ಕಂಡುಬಂದಿರುವುದೂ ಅನೇಕ ಅನುಮಾನಗಳಿಗೆ ಎಡೆ ಮಾಡಿಕೊಟ್ಟಿದೆ.

ಇದೆಲ್ಲದರ ಮಧ್ಯೆ ಕೆಲವು ತಜ್ಞರ ಪ್ರಕಾರ ಈ ತಲೆ ಬುರುಡೆಗಳು 12 ವಯಸ್ಸಿನವರಿಂದ ಹಿಡಿದು 80 ವರ್ಷದ ವ್ಯಕ್ತಿಗಳದ್ದಾಗಿರಬಹುದು. ಆದರೆ ಆಶ್ಚರ್ಯಕರ ಸಂಗತಿ ಎಂದರೆ ಕೆಲ ಬುರುಡೆಗಳ ಮೇಲೆ ಹೊಲಿಗೆ ಗುರುತು ಕಂಡುಬಂದಿರುವುದು. ಆ ತಜ್ಞರೇ ಹೇಳಿದ ಪ್ರಕಾರ 300 ರಿಂದ 400 ವರ್ಷಗಳ ಹಿಂದೆ ಈ ಬುರುಡೆಗಳನ್ನು ಹೂಳಲಾಗಿತ್ತು, ಆದರೆ ಆ ಕಾಲದಲ್ಲೇ ಬುರುಡೆಗಳಿಗೇ ಹೊಲಿಗೆ ಹಾಕುವ ಸರ್ಜನಗಳೂ ಇದ್ದರೆ?!

ಇತಿಹಾಸದಲ್ಲಿ ಅಣ್ಣಿಗೇರಿ

ಧಾರವಾಡ ಜಿಲೆಯ ನವಲಗುಂದ ತಾಲೂಕಿನಲ್ಲಿರುವ ಅಣ್ಣಿಗೇರಿ ಖ್ಯಾತ ಕವಿ ಪಂಪ ಹುಟ್ಟಿದ ಊರು. ಅದರಷ್ಟೆ ಮುಖ್ಯವಾದ ಅಂಶ ಯಾವುದೆಂದರೆ ಈ ಅಣ್ಣಿಗೇರಿಯು ಹಿಂದಿನ ಕಾಲದಲ್ಲಿ ರಾಜಕೀಯವಾಗಿಯೂ ಸಾಂಸ್ಕೃತಿಕವಾಗಿಯೂ ಪ್ರಮುಖವಾಗಿದ್ದ ನಗರ. 1157ರಲ್ಲಿ ಕಾಲಾಚುರಿ ವಂಶದ ಎರಡನೆ ಬಿಜ್ಜಲ ಕಲ್ಯಾಣದಿಂದ ಚಾಲುಕ್ಯರನ್ನು ಒದ್ದೋಡಿಸಿದಾಗ ಚಾಲುಕ್ಯರು ಅಣ್ಣಿಗೇರಿಯನ್ನೇ ತಮ್ಮ ರಾಜಧಾನಿಯನ್ನಾಗಿಸಿಕೊಂಡಿದ್ದರು. ಚಾಲುಕ್ಯರ ನಾಲ್ಕನೇ ಸೋಮೇಶ್ವರ ರಾಜನ ಕಾಲದ (1184-89) ತನಕ ಅಣ್ಣಿಗೇರಿ ಆ ರಾಜವಂಶದ ರಾಜಧಾನಿಯಾಗಿತ್ತು, ಕಲ್ಯಾಣಿ ಚಾಲುಕ್ಯರೇ ಅಣ್ಣಿಗೇರಿಯಲ್ಲಿರುವ ಐತಿಹಾಸಿಕ ಅಮೃತೇಶ್ವರ ದೇಗುಲವನ್ನು ನಿರ್ಮಿಸಿದ್ದು.

ಇದೆಲ್ಲದರ ಅರ್ಥ, ಅಣ್ಣಿಗೇರಿಯು ವಿವಿಧ ರಾಜವಂಶಗಳ ಆಡಳಿತದಡಿ ಬಂದಿತ್ತಲ್ಲದೆ, ಅದು ವಿವಿಧ ರಾಜರ ನಡುವಿನ ಯುದ್ಧಗಳ ಕೇಂದ್ರ ಬಿಂದುವೂ ಆಗಿತ್ತು. ಆದರೀಗ ಈ ಐತಿಹಾಸಿಕ ಸಂಗತಿಗಳೇ ವಿವಿಧ ತರ್ಕಗಳಿಗೆ ದಾರಿ ಮಾಡಿಕೊಟ್ಟಿದೆ.

ಹಲವಾರು ತರ್ಕಗಳು

ಅಣ್ಣಿಗೇರಿಯ ಹಿರಿಯರದ್ದೇ ಒಂದು ತರ್ಕವಿದೆ. ಅವರ ಪ್ರಕಾರ ಸದ್ಯ ದೊರೆಯುತ್ತಿರುವ ತಲೆ ಬುರುಡೆಗಳು ಯಾವುದೋ ರೋಗದಿಂದ ಬಳಲಿ ಸತ್ತವರದಲ್ಲ, ಅಣ್ಣಿಗೇರಿಯಲ್ಲಿ ಈವರೆಗೂ ಭಯಾನಕ ಪ್ಲೇಗು ಅಥವಾ ಕಾಲರಾದಿಂದ ನೂರಾರು ಸಂಖ್ಯೆಯಲ್ಲಿ ಜನರು ಸತ್ತಿರುವ ಬಗ್ಗೆ ಪುರಾವೆಗಳಿಲ್ಲ, 1550 ರಲ್ಲಿ ನಡೆದ ಕೋಮುಗಲಭೆಯಲ್ಲಿ ಅಗಸಿ ಬಳಿ ಸೆರೆ ಸಿಕ್ಕವರ ರುಂಡ ಮುಂಡಗಳನ್ನು ಬೇರ್ಪಡಿಸಿ ಹುದುಗಿಸಿಟ್ಟಿರಬಹುದು ಅಥವಾ 1750 ರಲ್ಲಿ ಭಾರತೀಯರು ಬ್ರಿಟಿಷರ ವಿರುದ್ಧ ನಡೆಸಿದ ಯುದ್ಧದಲ್ಲಿ ಸಿಕ್ಕಿ ಬಿದ್ದ ಸೈನಿಕರ ರುಂಡ ಮುಂಡಗಳನ್ನು ಬೇರೆ ಬೇರೆಯಾಗಿ ಹುದುಗಿಸಿಟ್ಟಿರಬಹುದು.

ಇನ್ನೊಂದು ತರ್ಕ ಹೀಗಿದೆ: ಈಗಿನ ಅಣ್ಣಿಗೇರಿ ಪಟ್ಟಣ 12 ನೇ ಶತಮಾನದಲ್ಲಿ ಬಿಜ್ಜಳನ ರಾಜಧಾನಿಯಾಗಿತ್ತು. ಈ ಪ್ರದೇಶದ ಪೂರ್ವಕ್ಕೆ ಬೃಹದಾಕಾರದ ಅಗಸಿಯೊಂದನ್ನು ಆತ ನಿರ್ಮಿಸಿದ್ದ. ಇದಕ್ಕಿಂತಲೂ ಹೆಚ್ಚಾಗಿ ಆಗಿನ ಕಾಲದಲ್ಲಿ ಫಲವತ್ತಾದ ಭೂಮಿಯನ್ನು ಈ ಪ್ರದೇಶ ಹೊಂದಿತ್ತಲ್ಲದೇ ಹತ್ತಿ ಬೆಳೆಗೆ ಸಾಕಷ್ಟು ಅನುಕೂಲಕರವಾಗಿತ್ತು. ಇದರಿಂದಾಗಿಯೇ ಆಗಿನ ವೈರಿಗಳು ಬಿಜ್ಜಳನ ಆಸ್ಥಾನದ ಮೇಲೆ ದಾಳಿ ನಡೆಸುತ್ತಿದ್ದರು. ಅಗಸಿ ಬಳಿಯಲ್ಲೇ ಈ ದಾಳಿ ನಡೆದಿತ್ತಂತೆ. ದಾಳಿಯಲ್ಲಿ ಸೆರೆ ಸಿಕ್ಕ ಸೈನಿಕರ ರುಂಡ ಮುಂಡಗಳನ್ನು ಬೇರ್ಪಡಿಸಿ ಅಗಸಿಯ ದಕ್ಷಿಣ ದಿಕ್ಕಿನಲ್ಲಿ ಹೂತು ಹಾಕುವಂತೆ ರಾಜನು ಆಜ್ಞೆ ಮಾಡಿದ್ದರಿಂದ ನೂರಾರು ಸೈನಿಕರನ್ನು ಸಾಮೂಹಿಕ ಹತ್ಯೆಗೈದು ಇಲ್ಲಿ ಹುದುಗಿಸಿ ಇಟ್ಟಿದ್ದರಂತೆ.

ಇದೆಲ್ಲ ಬರೀ ಅಂತೆಕಂತೆಯಂತೆ ಕೇಳಿಸುವುದಿಲ್ಲವೇ?

ಸಿಕ್ಕೇ ದೇಸಾಯಿ ಸಂಸ್ಥಾನದ ಕ್ರೌರ್ಯವೇ?

ಈಗ ಸಿಕ್ಕಿರುವ ತಲೆ ಬುರುಡೆಗಳೆಲ್ಲಾ ಸಿಕ್ಕೇ ದೇಸಾಯಿ ಎಂಬುವವನಿಗೆ ಸೇರಿದ ಜಾಗೆಯಲ್ಲಿವೆ. 400 ವರ್ಷಗಳ ಹಿಂದೆ "ಬೆಳವಲ ಮುನ್ನೂರು" (ಬೆಳವಲ ನಾಡಿನ 300 ಹಳ್ಳಿಗಳ ದೇಸ್ಗತಿ ಸಂಸ್ಥಾನ) ಒಡೆಯರಾಗಿದ್ದ ಸಿಕ್ಕೇ ದೇಸಾಯಿ ಮನೆಯವರ ಇತಿಹಾಸದತ್ತ ಹಲವರು ಸಂಶಯದ ಕಣ್ಣುಗಳನ್ನು ಬಿಡುತ್ತಿದ್ದಾರೆ.

ಸಿಕ್ಕೇ ದೇಸಾಯಿ ಹೊಲದ ಅಂಚಿನಲ್ಲಿ ಬುರುಡೆಗಳು ಸಿಕ್ಕಿವೆ. ಈ ಹಿಂದೆ ಇಲ್ಲಿ ಅಗಸಿ



ಬಾಗಿಲಿತ್ತಂತೆ. ಆದರಾಚೆ ಬದಿಯೇ ಸಿಕ್ಕೇ ದೇಸಾಯಿಯವರ ಹೊಸ ಮನೆ ಇದೆ. ರೋಗಿ ಬರದ ವೇಳೆ ಊರೊಳಗಿನ ವಾಡೆ ಬಿಟ್ಟು ದೇಸಾಯಿ ಕುಟುಂಬ ಇಲ್ಲಿಗೆ ಸ್ಥಳಾಂತರವಾಗಿದೆ. ಸಿಕ್ಕೇ ದೇಸಾಯಿ ಮನೆತನದ 82 ರ ಅಜ್ಜಿ ಲೀಲಾಬಾಯಿ ಬಾಬಾಸಾಹೇಬ ಸಿಕ್ಕೇ ದೇಸಾಯಿ (ಕಲ್ಯಾಣದ ಬಿಜ್ಜಳ ದೊರೆಯ ರುಂಡ ಚೆಂಡಾಡಿದ ಜಗದೇವಪ್ಪನ ವಂಶಸ್ಥೆ ಈಕೆ) ತಲೆ ಬುರುಡೆಗಳ ಇತಿಹಾಸ ಅರಿಯಲು ಈಗ ಮುಂದೆ ಬಂದಿದ್ದಾರೆ. ಅವರಿಗೂ ಕೂಡಾ ಈ ಬುರುಡೆ ರಹಸ್ಯದ ಬಗ್ಗೆ ಸ್ಪಷ್ಟ ಚಿತ್ರಣ ಗೊತ್ತಿಲ್ಲಾ.

ಅಣ್ಣಿಗೇರಿಯವರೇ ಆದ ಇತಿಹಾಸ ತಜ್ಞ ಪ್ರೊಫೆಸರ್ ಎಸ್.ಎಸ್. ಕೌಜಗೇರಿ ಅವರೂ ಕೂಡ ಈ ಬುರುಡೆಗಳ ಸುತ್ತ ತಮ್ಮದೇ ಆದ ತರ್ಕವನ್ನು ಬಿಚ್ಚಿಟ್ಟಿದ್ದಾರೆ. 17ನೇ ಶತಮಾನದ ಈಚೆಗೆ ಸೇಡಿನಿಂದ ಮಾಡಿದ ಮಾರಣ ಹೋಮವಿದು ಎನ್ನುತ್ತಾರೆ ಅವರು. ದೇಸ್ಗತಿ ಸಂಸ್ಥಾನವನ್ನು ಉಳಿಸಿಕೊಳ್ಳಲು ಸಿಕ್ಕೇ ದೇಸಾಯಿ ವಂಶ ಮತ್ತು ಅದನ್ನು ಕಸಿದುಕೊಳ್ಳಲು ಬ್ರಿಟಿಷರು ಮಾಡಿದ ಯುದ್ಧದ ಫಲವೇ ಈ ಬುರುಡೆಗಳಂತೆ. ನರಗುಂದದ ಬಾಬಾ ಸಾಹೇಬ ಬ್ರಿಟಿಷ್ ಸೈನಿಕರ ಶಿರಚ್ಛೇದನ ಮಾಡಿ ಅವರ ರುಂಡಗಳನ್ನು ಅಗಸಿ ಬಾಗಿಲಿಗೆ ಕಟ್ಟಿದ ದಾಖಲೆಗಳು ಇವೆ ಅಂತಾ ಕೌಜಗೇರಿ ಹೇಳುತ್ತಿದ್ದಾರೆ.

ಒಬ್ಬೊಬ್ಬರದು ಒಂದೊಂದು ಬುರುಡೆ ಕಥೆ

"ಕಲ್ಯಾಣ ಚಾಲುಕ್ಯರ ಮೊದಲನೇ ಸೋಮೇಶ್ವರ ಮತ್ತು ಚೋಳರ ರಾಜಾಧಿಕಾರಿ (ಇದೇ ಭಾಗದವ) ಹಾಗೂ ರಾಜೇಂದ್ರ ಅವರ ನಡುವೆ ನಡೆದ 11ನೇ ಶತಮಾನದ ಕೊಪ್ಪಳದ ಯುದ್ಧದ ಪರಿಣಾಮ ಇದಾಗಿರಬಹುದು. ಇಲ್ಲವೇ ಆಗಿನ ಕಾಲದ ವಾಮಾಚಾರದ ದುಷ್ಕೃತ್ಯ ಆಗಿರಬಹುದು" ಎಂದು ಧೌಟನಲ್ಲೇ ಕರ್ನಾಟಕ ವಿವಿಯ ಸಂಶೋಧನಾ ಸಂಸ್ಥೆ ತಜ್ಞ ಡಾ.ರು.ಮ.ಷಡಕ್ಷರಯ್ಯ ಹೇಳಿದ್ದಾರೆ.

"ಇಲ್ಲಿ ದೊರೆತಿರುವ ತಲೆ ಬುರುಡೆಗಳು ಯಾವುದೇ ರೋಗಕ್ಕೆ ತುತ್ತಾದವರದ್ದಲ್ಲ, ಯುದ್ಧದಲ್ಲಿ ಹತರಾದವರದ್ದೂ ಅಲ್ಲ, ವಾಮಾಚಾರಕ್ಕೆ ಇಷ್ಟೊಂದು ಬುರುಡೆ ಕೂಡಿಸುವುದು ಕಷ್ಟ. ಯಾವುದೋ ಒಂದು ಬಲವಾದ ಸೇಡಿನಿಂದ ಸಾಮೂಹಿಕವಾಗಿ ಶಿರಚ್ಛೇದನ ಮಾಡಿರಬಹುದೇನೋ ಘಟನೆಯ ಕಾಲಮಾನ, ಕಾರಣ ತಿಳಿಯಲು ಪ್ರಯೋಗಾಲಯದ ವರದಿ, ಶಾಸ್ತ್ರಬದ್ಧ ಉತ್ಖನನ ಆಗಬೇಕಷ್ಟೆ" ಎಂದವರು ರಾಜ್ಯ ಪ್ರಾಚ್ಯ ವಸ್ತು ಸಂಗ್ರಹಾಲಯ ಮತ್ತು ಪುರಾತತ್ವ ಇಲಾಖೆಯ ಪ್ರೊ. ಕೃಷ್ಣ ಮೂರ್ತಿ.

ಈಗ ಬುರುಡೆಗಳು ಸಿಕ್ಕಿರುವ ಜಾಗದ ಪಕ್ಕದ ಇರುವ ರಸ್ತೆಯನ್ನು "ದಂಡಿನ ದಾರಿ" ಎಂದು ಕರೆಯಲಾಗುತ್ತದೆ. "ಬ್ರಿಟಿಷ್ ಸಾಮ್ರಾಜ್ಯಶಾಹಿ ವಿರುದ್ಧ ಸಿಡಿದು ನಿಂತ ಬಂಡುಕೋರರು ಮುಂಡರಗಿಯಿಂದ ನರಗುಂದಕ್ಕೆ ಇದೇ ಮಾರ್ಗದಲ್ಲಿ ಹೋಗಿದ್ದಿರಬಹುದು. ಆ ಸಮಯದಲ್ಲಿ ಬ್ರಿಟಿಷರು ಹೊಂಚು ಹಾಕಿ ಇವರನ್ನು ಸಾಮೂಹಿಕ ಹ[illegible] ಮಾಡಿದ್ದಾರೆ" ಎನ್ನುವ ವಾದ ಒಂದಾದರೆ, "ಬದಾ[illegible] ಚಾಲುಕ್ಯರ 2ನೇ ರಾಜಧಾನಿಯಾದ ಅಣ್ಣಿಗೇರಿಯಲ್ಲಿ ಯು[illegible] ಸಂದರ್ಭದಲ್ಲಿ ಸೆರೆ ಸಿಕ್ಕ ಸೈನಿಕರನ್ನು ಸಾಮೂಹಿಕ ಹ[illegible] ಮಾಡಿರಬಹುದು" ಎಂಬುದೂ ಇನ್ನೊಂದು ವಾದ!

ಇವು ಕಳ್ಳ ಸಾಗಾಣಿಕೆಯ ಬುರುಡೆಗಳೇ?

ಅಸ್ಥಿಪಂಜರ ಹಾಗೂ ಬುರುಡೆಗಳನ್ನು ಕಳ್ಳ ಸಾಗಾಣಿ[illegible] ಮಾಡುವ ಜಾಲದ ಖದೀಮರು ಇಲ್ಲಿ ಬುರುಡೆಗಳನ್ನು ಹೂತಿಟ್ಟಿರಬಹುದೇ ಎಂಬ ಶಂಕೆ ಕೂಡಾ ಹೊರಬಿದ್ದಿ[illegible] ಇದಕ್ಕೆ ಪುಷ್ಟಿ ನೀಡುವಂತಹ ಪ್ರಕರಣವೊಂದು 2008ರ[illegible] ಗದಗ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಜರುಗಿತ್ತು[illegible] ಗದಗ ಹೊರವಲಯದ ಗಂಗಿಮಡಿಯ ಆಶ್ರಯ[illegible] ಕಾಲೋನಿಯಲ್ಲಿ ಹುಬ್ಬಳ್ಳಿಯ ಇಲಿಯಾಸ್ ಅಹ್ಮದ ಖಾ[illegible] ಎಂಬಾತ ಅಸ್ಥಿಪಂಜರ ಸೇರಿದಂತೆ ಬುರುಡೆಗಳನ್ನು ಬಚ್ಚಿ[illegible] ಮುಂದೆ ಅಕ್ರಮವಾಗಿ ಸಾಗಾಟ ಮಾಡಲು ಯತ್ನಿಸಿ[illegible] ಆಗ ಆತನ ಮೇಲೆ ಪೊಲೀಸರ ದಾಳಿ ಕೂಡಾ ನಡೆದಿತ್ತು[illegible] ಆಗ ಇಲಿಯಾಸ್ ಅಹ್ಮದ ಪರಾರಿಯಾಗಿದ್ದ, ಇಲ್ಲಿಯವರೆಗೂ ಅವನು ಸಿಕ್ಕಿಲ್ಲ, ಈಗ ಸಿಕ್ಕಿರುವ ಬುರುಡೆಗಳನ್ನು ಇಲಿಯಾ[illegible] ಅಹ್ಮದ ಹೂತಿಟ್ಟಿರಬಹುದೇ ಎಂಬ ಗುಮಾನಿ ಕೂ[illegible] ಕಾಡುತ್ತಿದೆ. ಇದಕ್ಕೆ ಆತ ಸೆರೆ ಸಿಕ್ಕಾಗ ಉತ್ತರ ಸಿಗಬ[illegible] ದೇನೋ....

ಲಗಾನ್ ಪಂಚ್....!

ಇವೆಲ್ಲಾ ನರಮೇಧದಿಂದ ಆದ ಸಾವುಗಳೇ. ಹಿಂದೆ ಅಣ್ಣಿಗೇರಿ ಸಂಸ್ಥಾನವನ್ನು ಆಳುತ್ತಿದ್ದ ದೊರೆಗ[illegible] ಒಮ್ಮಿಂದೊಮ್ಮೆಲೇ ಜನರ ಮೇಲೆ ಇದ್ದ ತೆರಿಗೆಯ[illegible] 3-4 ಪಟ್ಟು ಹೆಚ್ಚಿಸಿದ್ದರು. ಆದರೆ ಸಾರ್ವಜನಿಕರು ದುಬ[illegible] ತೆರಿಗೆ ಕೊಡಲಾಗುವುದಿಲ್ಲ ಎಂದು ದೊರೆಯ ವಿರು[illegible] ತಿರುಗಿ ಬಿದ್ದು ತೀವ್ರ ದೊಂಬಿ ನಡೆಸಿದ್ದರು. ಆ ಸಂದರ್ಭದ[illegible] ಸಾರ್ವಜನಿಕರ ರುಂಡವನ್ನು ಕತ್ತರಿಸಿ ಈ ಪ್ರದೇಶದ[illegible] ದೊರೆ ಹೂಳಿಸಿದ್ದನೆಂಬ ಇನ್ನೊಂದು ಲಗಾನ್ ಪುರಾ[illegible] ಕೂಡ ಈಗ ರಿಲೀಸ್ ಆಗಿದೆ. ಇದಕ್ಕೆ ಅಣ್ಣಿಗೇರಿಯ [illegible] ಹಿರಿ ತಲೆಗಳು ಗೋಣು ಅಲ್ಲಾಡಿಸುತ್ತಿದ್ದಾರೆ. ಯಾಕೆಂದ[illegible] ಈ ಕುರಿತಂತೆ ಅಣ್ಣಿಗೇರಿಯಲ್ಲಿ ಲಾವಣಿ ಪದವೊಂ[illegible] ಕೂಡಾ ಚಾಲ್ತಿಯಲ್ಲಿದೆ. ಅದನ್ನು ಈ ಹಿರಿಯರ ಬಾಯ[illegible] ಈಗಲೂ ಕೇಳಬಹುದು.

ಒಟ್ಟಾರೆಯಾಗಿ ಅಣ್ಣಿಗೇರಿಯ ಬುರುಡೆ ಪುರಾ[illegible] ಕುತೂಹಲಕಾರಿಯಾಗಿ ಸಾಗಿದೆ. ಇವು ಸವಣೂರ ನವಾ[illegible] ಕಾಲದಲ್ಲಿ ನಡೆದ ಹತ್ಯೆಗಳೋ, ಕಾಪಾಲಿಕರ ಕೃತ್ಯವೋ[illegible] ನರಮೇಧವೋ, ಸೈನಿಕರ ಹತ್ಯೆಯೋ... ಅದೇನೇ ಇರ[illegible] ಒಟ್ಟಿನಲ್ಲಿ ಬುರುಡೆ ರಹಸ್ಯವನ್ನು ಅರಿಯುವ ಕುತೂಹ[illegible] ಪ್ರತಿಯೊಬ್ಬರಲ್ಲೂ ಇದೆ.

ಆದ್ದರಿಂದ ತಜ್ಞರೆನಿಸಿಕೊಂಡವರು ಅತಿಯಾಗಿ ತ[illegible] ಬುರುಡೆಗೂ ಕೆಲಸ ಕೊಟ್ಟು ಈ ಬುರುಡೆಗಳ ರಹಸ್ಯವ[illegible] ಆದಷ್ಟು ಬೇಗ ಬೇಧಿಸಬೇಕಿದೆ.....

– ಹುರುಳಿಕುಪ್ಪಿ ವಿನ[illegible]

vinaylankesh@gmail.c[illegible]


ಹುಬ್ಬಳ್ಳಿ: ಕಾಂಗ್ರೆಸ್ V/s ಬಿಜೆಪಿ

ಗಾಂಧಿವಾಡೆಯಲ್ಲಿ ಗೂಂಡಾಗಿರಿ!



ಹಳೇ ರಾಜಕೀಯ ದ್ವೇಷದ ರಖಮುಗಳು ಹಿಂಸಾ ರೂಪ ಪಡೆದು ...ದೆಯುತ್ತಿವೆ. ಇದರಿಂದಾಗಿ ಹುಬ್ಬಳ್ಳಿಯ ವಲಸಿಗರ ಏರಿಯಾದ ...ಧಿವಾಡೆ ಗೂಂಡಾಗಿರಿಯೊಂದಕ್ಕೆ ಮತ್ತೆ ಸಾಕ್ಷಿಯಾಗಿದೆ. ಕಾಂಗ್ರೆಸ್-ಬಿಜೆಪಿ ...ಡುವಿನ ಕಲಹ ಕೊಲೆ ಸ್ಕೆಚ್ಚಿನ ಹಂತ ತಲುಪಿ ಲಾಂಗು-ಮಚ್ಚುಗಳ ...ಾರಾಮಾರಿಯೇ ನಡೆದುಹೋಗಿದೆ.

ಕಳೆದ ಪಾಲಿಕೆ ಚುನಾವಣೆಯ ಸಂದರ್ಭದಲ್ಲಿ ಹೊತ್ತಿಕೊಂಡ ದ್ವೇಷ ...ಥಾ ರೂಪು ಪಡೆದುಕೊಳ್ಳಲಿದೆಯೆಂದು ಬಹುಶಃ ಯಾರೂ ...ದುಕೊಂಡಿರಲಿಕ್ಕಿಲ್ಲ. ಚುನಾವಣೆಯಲ್ಲಿ ವಾರ್ಡ್ ನಂ. ನಲವತ್ತೆಂಟರಿಂದ ...ಗ್ರೆಸ್ ಪಕ್ಷದ ಸುವರ್ಣಾ ಕಲ್ಲಿಕುಂಟ್ಲೆ ವಿರುದ್ಧ ಅದೇ ಪಕ್ಷದ ಬಂಡಾಯ ...ಸ್ಪರ್ಧಿ ಆರ್‌ಜೆಎಸ್ ಪ್ರಕಾಶ್ ಹಾಗೂ ಬಿಜೆಪಿಯಿಂದ ಪ್ರಭಾಕರ ...ರಪಾಟಿ ಸ್ಪರ್ಧಿಸಿದ್ದರು. ಈ ಸಂದರ್ಭದಲ್ಲಿ ಸುವರ್ಣಾಳ ಸಹೋದರ ...ಬಂಧಿ ಜಯರಾಜ ಮುನಿಗೇಡ್ ಕೂಡಾ ಆಕೆಯ ವಿರುದ್ಧ ಓಡಾಟ ...ಸಿದ್ದ. ಇದೆಲ್ಲದರ ನಡುವೆಯೇ ಸುವರ್ಣಾ ಗೆದ್ದು ಕಾರ್ಪೊರೇಟರ್ ...ಳಾದರೂ ಚುನಾವಣಾ ಸಂದರ್ಭದಲ್ಲಿ ಹಲವಾರು ...ಜಕೀಯ ಘರ್ಷಣೆಗಳು ನಡೆದುಹೋದವು. ಇವು ...ಯರಾಜ ಮುನಿಗೇಡ್ ಮತ್ತು ಸುವರ್ಣಾ ಕಲ್ಲಿಕುಂಟ್ಲೆ ...ನ್ನು ಬದ್ಧವೈರಿಗಳನ್ನಾಗಿಸಿದವು. ಇವರ ಮನೆಗಳ ...ಡುವಿನ ಬಾಂಧವ್ಯವೂ ಕೊನೆಗೊಂಡಿತ್ತು.



ಮೇಲ್ಕಂಡ ಘಟನಾವಳಿಗಳೇ ಗಾಂಧಿವಾಡಾದಲ್ಲಿ ...ಚ್ಚು-ಲಾಂಗುಗಳ ಆರ್ಭಟ ನಡೆಯಲು ಕಾರಣವಾಗಿ ...ೋಗಿದೆ. ಕಳೆದ ತಿಂಗಳು 21ನೇ ತಾರೀಖಿನ ಶನಿವಾರ ವಾರ್ಡ್‌ನ ಕಾರ್ಪೊರೇಟರ್ ಸುವರ್ಣಾ ಕ್ಲೀನಿಂಗ್ ಬಗೆಗೆ ಗಮನ ...ರಿಸುವ ಸಂಬಂಧ ಗಾಂಧಿವಾಡೆಯಲ್ಲಿ ಸಂಚರಿಸುತ್ತಿದ್ದಳು. ಈ ಸಂದರ್ಭದಲ್ಲಿ ...ಯರಾಜ ಮುನಿಗೇಡನ ಮನೆಯ ಕೆಲ ಮಹಿಳೆಯರು ಕಿರಿಕ್ಕು ಮಾಡಿದ್ದಾರೆ. ...ಸ್ವಚ್ಛತೆ ಸಂಬಂಧ ವಿಚಾರಿಸಿಕೊಳ್ಳುತ್ತಿದ್ದ ಸುವರ್ಣಾಳಿಗೆ ಅಟಕಾಯಿಸಿಕೊಂಡ ...ುನಿಗೇಡ ಕುಟುಂಬದ ಮಹಿಳೆಯರಾದ ಖುತುದಮ್ಮ, ದೇವಕುಮಾರಿ, ...ನಾ, ಜಾಸ್ಮಿನ್ ಎಂಬವರೆಲ್ಲ ಕುಂಟು ನೆಪದೊಂದಿಗೆ ಜಗಳ ತೆಗೆದು ...ವರ್ಣಾಳನ್ನು ಅಶ್ಲೀಲ ಪದಗಳಿಂದ ನಿಂದಿಸಿದ್ದಾರೆ.

ತೀರಾ ಒಂದೇ ಕುಟುಂಬದವರಾದುದರಿಂದ ಅದೇನೇ ದ್ವೇಷವಿದ್ದರೂ ...ಾತುಕತೆಯ ಮೂಲಕವೇ ಬಗೆಹರಿಸಿಕೊಳ್ಳಬಹುದಿತ್ತೇನೋ. ಆದರೆ ...ಳೆಯ ಘಟನೆಗಳನ್ನು ರಿವೈಂಡ್ ಮಾಡಿಕೊಂಡ ಸುವರ್ಣಾ ತನ್ನ ...ಹೋದರರಾದ ಲಾಜರೀಸ್, ದೇವಿಡ್ ಹಾಗೂ ಕ್ಲೆಮೆಂಟ್‌ಗೆ ಫೋನಾಯಿಸಿ ...ಷಯ ತಿಳಿಸಿದ್ದಾಳೆ. ಲಾಜರೀಸ್ ಅಂದು ಮೀರಜ್‌ನಲ್ಲಿರುವ ತನ್ನ ...ಬಂಧಿಗಳ ಮನೆಗೆ ತೆರಳಿದ್ದ. ರಾತ್ರಿಯೇ ಮರುಳುವುದಾಗಿ ತಿಳಿಸಿದ ...ತ ಊರಲ್ಲಿದ್ದ ತನ್ನ ಸಹೋದರರಿಗೆ ನಿರ್ದೇಶನ ನೀಡಿ ಮುನಿಗೇಡ ...ಟುಂಬಿಕರ ಮೇಲೆ ಹಲ್ಲೆ ನಡೆಸುವ-ಕೊಲೆ ಮಾಡುವ ಸ್ಕೆಚ್ಚು ರೂಪಿಸಿಬಿಟ್ಟ.

ಇದರನ್ವಯ ಶನಿವಾರ ರಾತ್ರಿ ಹೊತ್ತು ಲಾಜರೀಸ್ ಸಹೋದರರಾದ ದೇವಿಡ್ ಹಾಗೂ ಕ್ಲೆಮೆಂಟ್ ಜೊತೆಗೂಡಿ ಅಬ್ರಹಾಂ, ಶಶಿಧರ, ಶ್ರೀಧರ, ರಾಜ ಕೊಂಡಯ್ಯ ಮುಂತಾದವರಿದ್ದ ತಂಡದೊಂದಿಗೆ ಮುನಿಗೇಡನ ಮನೆ ಮೇಲೆ ದಾಳಿ ನಡೆಸಿದರು. ಆದರೆ ಜಯರಾಜ ಮುನಿಗೇಡ ಮನೆಯಲ್ಲಿರಲಿಲ್ಲ. ಆತ ಹೊಸದಾಗಿ ಕಟ್ಟಿಸುತ್ತಿರುವ ಮನೆಯಲ್ಲೇ ಮಲಗಿದ್ದ. ಮನೆಗೆ ನುಗ್ಗಿದ ಈ ಗ್ಯಾಂಗು ಮುನಿಗೇಡನ ಮನೆಯ ಹಸೀ ಬಾಣಂತಿ ದೇವಕಿ ಸೇರಿದಂತೆ ಖುತುದಮ್ಮ, ದೇವಕುಮಾರಿ, ರೀನಾ, ಜಾಸ್ಮಿನ್ ಮುಂತಾದವರ ಮೇಲೆ ಮಚ್ಚು-ಲಾಂಗುಗಳಿಂದ ಹಿಗ್ಗಾಮುಗ್ಗಾ ಹಲ್ಲೆ ನಡೆಸಿತು. ಈ ಬಗ್ಗೆ ಕೇಶ್ವಾಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಯಿತು. ಇಷ್ಟಾಗುತ್ತಲೇ ಲಾಜರಿಸ್ ಹಾಗೂ ಸುವರ್ಣಾ ಕಲ್ಲಿಕುಂಟ್ಲೆ ಪೇರಿ ಕಿತ್ತರು. ಆದರೆ ನಿಗೂಢ ಸ್ಥಳದಿಂದಲೇ ಬಲೆಯೊಂದನ್ನು ವ್ಯವಸ್ಥಿತವಾಗಿ ಹೆಣೆದು ಬೀಸಿದರು. ಈ ಜಯರಾಜ್ ಮುನಿಗೇಡ ಹಳೇ ರೇಲ್ವೆ ಕ್ವಾಟ್ರರ್ಸ್‌ನ್ನು ಕೆಡವಿದ ಮನೆಗಳ ಬಾಗಿಲು, ಚೌಕಟ್ಟು ಹಾಗೂ ಕಟ್ಟಿಗೆಗಳನ್ನು ಕಳವು ಮಾಡುವ ಕೆಲಸ ಮಾಡುತ್ತಿದ್ದ. ಇವುಗಳನ್ನು ತಾನು ಗಾಂಧಿವಾಡೆಯಲ್ಲಿ ಹೊಸದಾಗಿ ಕಟ್ಟಿಸುತ್ತಿರುವ ಮನೆಯಲ್ಲಿ ಸಂಗ್ರಹಿಸಿಡುತ್ತಿದ್ದ. ಈ ವಿಚಾರವನ್ನು ಲಾಜರಿಸ್ ತನ್ನ ಶಿಷ್ಯರ ಮೂಲಕ ರೈಲ್ವೆ ಪೊಲೀಸರಿಗೆ ಮುಟ್ಟಿಸಿ ಜಯರಾಜ್ ಮುನಿಗೇಡನ ಸಹೋದರ ರಾಮುಲು ಹಾಗೂ ಚನ್ನಯ್ಯ ಎಸ್. ಬಿಲ್ಲಾನನ್ನು ಮಾಲುಸಹಿತ ಬಂಧಿಸುವಂತೆ ಮಾಡಿದ.

ಇದರಿಂದೆಲ್ಲ ಕುದ್ದು ಹೋದ ಜಯರಾಜ ಬಿಜೆಪಿ ನಾಯಕರುಗಳ ಮೊರೆಹೋದ. ತಲೆಮರೆಸಿಕೊಂಡಿರುವ ಪಾಲಿಕೆ ಸದಸ್ಯೆ ಸುವರ್ಣಾ, ಲಾಜರಿಸ್ ಅಬ್ರಾಹಂ ಮತ್ತು ಗ್ಯಾಂಗ್‌ನ ವಿರುದ್ಧ ಕೇಶ್ವಾಪುರ ಠಾಣೆಯಲ್ಲಿ ದೂರು ಬಲಗೊಳ್ಳುವಂತೆ ನೋಡಿಕೊಂಡ. ಜೊತೆಗೆ ಸುವರ್ಣಾಳ ಮನೆ ಶೋಧಕ್ಕಾಗಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ಅನುಮತಿ ಯನ್ನೂ ಪಡೆದ. ಇದರನ್ವಯ ಕಳೆದ ತಿಂಗಳು 31ರಂದು ಪಾಲಿಕೆ ಸದಸ್ಯೆ ಸುವರ್ಣಾ ವಾಸಿಸುತ್ತಿದ್ದಳೆನ್ನಲಾದ ರೈಲ್ವೆ ಇಲಾಖೆಯ ಮನೆಯನ್ನು ಪೊಲೀಸರು ಶೋಧಿಸಿದರು. ಆಗ ಬೆಚ್ಚಿ ಬೀಳುವಂತೆ ಏರ್‌ಗನ್, ಮಚ್ಚು ಕೊಡಲಿ, ಮಂಕಿ ಕ್ಯಾಪ್‌ಗಳೆಲ್ಲ ಸಿಕ್ಕವು. ಜೊತೆಗೆ 50ಕ್ಕೂ ಹೆಚ್ಚು ಪಡಿತರ ಚೀಟಿಗಳು ದೊರೆತವು. ಇದು ಕೂಡಾ ಚುನಾವಣಾ ಸಂದರ್ಭದಲ್ಲಿ ಈ ಗ್ಯಾಂಗ್ ನಡೆಸುವ ದಂಧೆಗಳಿಗೆ ಸಾಕ್ಷಿಯಾಗಿವೆ.

ಇನ್ನು ಗದಗ ರಸ್ತೆಯ ಸಿಮೆಂಟ್ ಚಾಳದಲ್ಲಿರುವ ಲಾಜರಿಸ್‌ಗೆ ಸೇರಿದ ಮನೆಯಲ್ಲೂ ಮಾರಕಾಸ್ತ್ರಗಳು ಲಭಿಸಿವೆ. ಇವುಗಳು ಗದಗ ರಸ್ತೆಯಲ್ಲಿ ಸಂಚರಿಸುವ ಲಾರಿಗಳನ್ನು ತಡೆದು ದರೋಡೆ ನಡೆಸಲು ಬಳಕೆಯಾಗುತ್ತಿದ್ದವು. ಎರಡು ಗ್ಯಾಂಗ್‌ಗಳ ಇಂಥ ದಂಧೆಗಳ ಹಿಂದೆ ಬಿಜೆಪಿ-ಕಾಂಗ್ರೆಸ್ ಪಕ್ಷಗಳ ಕೈವಾಡವಿರುವುದೂ ಸಹ ಈಗ ಗುಟ್ಟಿನ ವಿಚಾರವಲ್ಲ. ಈ ದ್ವೇಷಗಳ ಸರಣಿ ಮುಂದುವರೆದು ಹೆಣ ಬೀಳುವ ಮುನ್ನ ಎಚ್ಚೆತ್ತುಕೊಂಡು ವ್ಯಾಜ್ಯ ಪರಿಹರಿಸುವ ಜವಾಬ್ದಾರಿ ಕಾಂಗ್ರೆಸ್-ಬಿಜೆಪಿ ಪಕ್ಷಗಳ ಮುಖಂಡರುಗಳ ಮೇಲಿದೆ.

-ಹುಬ್ಬಳ್ಳಿಯಾಂವ

➤➤ 7

...ಕ್ಕಿಲ್ಲ, ಸಫಾಯಿ ಕರ್ಮಚಾರಿಗಳ ಅಭಿವೃದ್ಧಿ ಯೋಜನೆಯ ಪುಡಿ ...ಡ್ಡನ್ನೂ ಸುಧಾಕರ್ ನುಂಗದೇ ಬಿಟ್ಟಿಲ್ಲ. 2008-09ನೇ ಸಾಲಿಗೆಂದು ...ರಿಯೂರು-ಚಳ್ಳಕೆರೆಯ ನೂರಾರು ಸಫಾಯಿ ಕರ್ಮಚಾರಿಗಳನ್ನು ...ಂಬೇಡ್ಕರ್ ಅಭಿವೃದ್ಧಿ ನಿಗಮ ಗುರುತಿಸಿತ್ತು, ಫಲಾನುಭವಿಗಳ ನ್ಯಾಯಬದ್ಧ ...ಟ್ಟಿಯನ್ನೂ ಮಾಡಿತ್ತು, ಅದಕ್ಕೆಂದು 62.75 ಲಕ್ಷ ರೂಪಾಯಿಗಳನ್ನು ...ಡುಗಡೆ ಮಾಡಿತ್ತು.

ಈ ರೀತಿ ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಬಿಡುಗಡೆಯಾದ ...ಡ್ಡನ್ನು ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಠೇವಣಿ ಇಡಬೇಕೆಂಬುದು ...ಾನೂನು. ಆದರೆ ಸುಧಾಕರ್ ಈ ಅಷ್ಟೂ ದುಡ್ಡನ್ನು ತಾನೇ ಅಧ್ಯಕ್ಷನಾಗಿರುವ ...ಹೊಯ್ಸಳ ಕ್ರೆಡಿಟ್ ಸೌಹಾರ್ದ ಕೋ-ಆಪರೇಟಿವ್ ಲಿಮಿಟೆಡ್ ಎಂಬ ...ಸೊಸೈಟಿಯೊಂದಕ್ಕೆ ಹಾಕಿಸುತ್ತಾನೆ. ಹಿರಿಯೂರಿನ 84 ಮತ್ತು ಚಳ್ಳಕೆರೆಯ ...27 ಮಂದಿ ಸಫಾಯಿ ಕರ್ಮಚಾರಿಗಳಿಗೆ ಸ್ವಯಂ ಉದ್ಯೋಗಕ್ಕೆಂದು ...ಮಂಜೂರಾಗಿದ್ದ ಅಷ್ಟೂ ದುಡ್ಡನ್ನು ಸುಧಾಕರ್ ನುಂಗಿಬಿಟ್ಟ. ನಕಲಿ ...ಂಬಳ ರಸೀದಿ ಸೃಷ್ಟಿಸಿ ಸೈಟು ಕೊಡುತ್ತೇನೆಂದು ಬ್ಯಾಂಕಿಗೆ ವಂಚಿಸಿದಂತೆ, ...ಮೂಲ ಸಫಾಯಿ ಕರ್ಮಚಾರಿಗಳ ಪಟ್ಟಿಯನ್ನೇ ಕಿತ್ತೆಸೆದ. ಯಾರ್ಯಾರೋ ...ಕಲಿಗಳನ್ನು ಹುಟ್ಟುಹಾಕಿ ಅವರೇ ಸಫಾಯಿಗಳೆಂದು ಬೋಗಸ್ ದಾಖಲೆ ...ಸೃಷ್ಟಿಸಿದ. ಮೊದಲೇ ಖಾಲಿ ಕಾಗದಪತ್ರಗಳಿಗೆ ಸಹಿ ಪಡೆದಿದ್ದು ತಾನೇ ...ಅಧ್ಯಕ್ಷನಾಗಿರುವ ಸೊಸೈಟಿಯ ಮೂಲಕ ಅಷ್ಟೂ 62.75 ಲಕ್ಷ ರೂ.ಗಳನ್ನು ...ಸುಂಡಾಮೋಚಿಬಿಟ್ಟಿದ್ದ.

ಮಂತ್ರಿಯೇ ವಂಚಕನಾದರೆ ಏನಾಗುತ್ತದೆ ಎಂಬುದಕ್ಕೆ ಇದು ಸಣ್ಣ ...ಸ್ಯಾಂಪಲ್ಲಷ್ಟೇ. ಒಂದೆಡೆ ಭಂಗಿಗಳು ಹೊಟ್ಟೆಗಿಲ್ಲದೇ ಮಲಸ್ನಾನ ಮಾಡುತ್ತಾರೆ. ...ಅದರ ಜವಾಬ್ದಾರಿ ವಹಿಸಬೇಕಿದ್ದ ಸಮಾಜ ಕಲ್ಯಾಣ ಮಂತ್ರಿ ತಾನೇ ...ನಿಂತು ಭಂಗಿಗಳ ದುಡ್ಡು ದೋಚುತ್ತಾನೆ!

ಹಿಂದುಳಿದ ವರ್ಗಗಳ ದುಡ್ಡನ್ನೂ ಮಂತ್ರಿ ಸುಧಾಕರ್ ನುಂಗದೇ ...ಬಿಟ್ಟಿಲ್ಲ. ಹಿಂದುಳಿದ ಜಾತಿಗಳ ಬಡವರು, ನಿರುದ್ಯೋಗಿಗಳ ಉದ್ಯೋಗ ...ಯೋಜನೆಗೆಂದೇ ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ...ನಿಗಮವಿದೆ. ಅದು ಹಿಂದುಳಿದವರೇ ನಿರ್ವಹಿಸುವ ಸಾವಿರದಷ್ಟು ಸ್ವಸಹಾಯ ...ಗುಂಪುಗಳನ್ನು ಗುರುತಿಸಿ ಪ್ರತಿಯೊಂದಕ್ಕೂ ತಲಾ 40 ಸಾವಿರ ರೂ.ಗಳಂತೆ ...ಟ್ಟು 4 ಕೋಟಿ ರೂಪಾಯಿಗಳ ಅನುದಾನ ಮಂಜೂರು ಮಾಡಿತ್ತು. ...ಈ ನಾಲ್ಕು ಕೋಟಿ ರೂಪಾಯಿಗಳನ್ನೂ ಸುಧಾಕರ್ ಚಿತ್ರದುರ್ಗದ ಡಿಸಿಸಿ ...ಬ್ಯಾಂಕಿಗೆ ಹಾಕಿಸಿಕೊಂಡ. ಏಕೆಂದರೆ ಇದು ಕೂಡ ಆತನೇ ಅಧ್ಯಕ್ಷನಾಗಿರುವ ...ಬ್ಯಾಂಕು.

...ಕಸ್ಸದೇ ಇಲಾಖೆ ಪಟ್ಟಿ ಮಾಡಿದ್ದ ಸ್ವಸಹಾಯ ಗುಂಪುಗಳ ಪಟ್ಟಿಯನ್ನು ...ಕಿತ್ತೆಸೆದಿದ್ದೇ ತನ್ನ ಮರ್ಜಿಗೆ ತಕ್ಕಂತೆ ಬೋಗಸ್ ಪಟ್ಟಿಯೊಂದನ್ನು ಸೃಷ್ಟಿಸಿದ ಸುಧಾಕರ್ ಇಡೀ ನಾಲ್ಕು ಕೋಟಿಯನ್ನು ಜೇಬಿಗಿಳಿಸಿದ್ದು ಆತನ ಹೀನ ಚಾಳಿಗೆ ಮಗದೊಂದು ನಿದರ್ಶನವಷ್ಟೆ. ಗಂಗಾ ಕಲ್ಯಾಣ ಯೋಜನೆಯ ಗಿರಿಜನ ಅಭಿವೃದ್ಧಿ ನಿಗಮದ ದುಡ್ಡನ್ನೂ ಸುಧಾಕರ್ ಹುಡಿಹಾರಿಸಿದ. ಇದು ಹಿರಿಯೂರು-ಚಳ್ಳಕೆರೆಯ ವಿಷಯದಲ್ಲಿ ಮಂತ್ರಿ ಸುಧಾಕರ್ ಮಾಡಿದ ಸಮಾಜ ಕಲ್ಯಾಣದ ವೈಖರಿಯಾದರೆ ರಾಜ್ಯಾದ್ಯಂತ ಮಾಡಿದ ಅನಾಹುತ ಊಹೆಗೂ ನಿಲುಕದಷ್ಟು. ಈತನಕ ದಲಿತರು ಮತ್ತು ಹಿಂದುಳಿದ ವರ್ಗಗಳ ಸಹಸ್ರಾರು ವಿದ್ಯಾರ್ಥಿಗಳಿಗೆ ಮಂಜೂರಾಗಬೇಕಿದ್ದ ಸ್ಕಾಲರ್‌ಶಿಪ್ಪನ್ನೇ ಬಿಡುಗಡೆ ಮಾಡಿಲ್ಲ. ಒಂದೇ ಒಂದು ಹೊಸ ದಲಿತರ ಹಾಸ್ಟೆಲು ಕಟ್ಟಿಸುವುದಿರಲಿ; ದಲಿತರು-ಹಿಂದುಳಿದವರ ಹಾಸ್ಟೆಲುಗಳಿಗೆಂದು ಮಂಜೂರಾದ 40 ಕೋಟಿಗೂ ಅಧಿಕ ಮೊತ್ತದ ದುಡ್ಡು ಏನಾಯಿತೆಂದು ಯಾರಿಗೂ ಗೊತ್ತಿಲ್ಲ.

ದಲಿತ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ತರಬೇತಿ ಹೆಸರಲ್ಲಿ ದರೋಡೆ, ಗಿರಿಜನರ ಉದ್ಯೋಗ ಯೋಜನೆಯ ಹೆಸರಲ್ಲಿ ರಾಬರಿ, ಪರಿಶಿಷ್ಟರು-ಸಫಾಯಿ ಕರ್ಮಚಾರಿಗಳ ಉದ್ಧಾರದ ನೆಪದಲ್ಲಿ ಹಗಲು ದರೋಡೆ; ಇತ್ಯಾದಿ ಅಸಂಖ್ಯಾತ ಕರ್ಮಕಾಂಡಗಳ ದೊಡ್ಡ ಪಟ್ಟಿಯನ್ನೇ ಮಾಡಿದ ವಾಲ್ಮೀಕಿ ನಾಯಕ ಮಹಾಸಭಾ ಸುಧಾಕರ್ ವಿರುದ್ಧ ರಾಜ್ಯಪಾಲರಿಗೆ ಸವಿಸ್ತಾರ ದೂರು ಸಲ್ಲಿಸಿದೆ. ಲೋಕಾಯುಕ್ತಕ್ಕೂ ದೂರು ನೀಡಿದೆ. ಇನ್ನೂ ವಿಚಿತ್ರವೆಂದರೆ ಸುಧಾಕರ್ ಮಂತ್ರಿಯಾಗುವುದಕ್ಕೂ ಮೊದಲೇ ಆತನ ವಿರುದ್ಧ 6 ಕ್ರಿಮಿನಲ್ ಕೇಸುಗಳು, ಎರಡು ವಂಚನೆ ಕೇಸು ಮತ್ತು ಒಂದು ಅಟ್ರಾಸಿಟಿ ಕೇಸು ದಾಖಲಾಗಿತ್ತು.

ಈ ಪೈಕಿ ಚಿತ್ರದುರ್ಗದ ಚಳ್ಳಕೆರೆ ತಾಲ್ಲೂಕು ತಳಕು ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ 48/02 ಸಂಖ್ಯೆಯ ಕೇಸೊಂದೇ ಸುಧಾಕರ್ ದಲಿತರನ್ನು ಜಾತಿ ಹಿಡಿದು ನಿಂದಿಸಿ ದೌರ್ಜನ್ಯವೆಸಗಿದ್ದನ್ನು ಸಾರಿ ಹೇಳುತ್ತದೆ. ಪರಿಶಿಷ್ಟರ ಮೇಲೆ ದೌರ್ಜನ್ಯವೆಸಗಿರುವಾತನನ್ನೇ ಸಮಾಜ ಕಲ್ಯಾಣ ಮಂತ್ರಿಯನ್ನಾಗಿ ನೇಮಿಸಿದ್ದು ಬಿಜೆಪಿ. ಇತ್ತ ಭಂಗಿಗಳು ಹೊಟ್ಟೆಗಿಲ್ಲದೇ ಮಲಸ್ನಾನ ಮಾಡುವುದಾದರೆ ಅದರ ಹೊಣೆ ಹೊತ್ತುಕೊಳ್ಳಬೇಕಿದ್ದ ಸಮಾಜ ಕಲ್ಯಾಣ ಮಂತ್ರಿ ತಾನೇ ನಿಂತು ಭಂಗಿಗಳ ದುಡ್ಡು ದೋಚುತ್ತಾನೆ. ದಲಿತರ ಮೇಲೆ ದೌರ್ಜನ್ಯವೆಸಗಿದ ಕ್ರಿಮಿನಲ್ ಕೇಸು ಬಾಕಿಯಿರುವಾಗಲೇ ಬಿಜೆಪಿಗಳು ಅವನನ್ನು ಕರೆಕರೆದು ಸಮಾಜ ಕಲ್ಯಾಣದ ಖಾತೆ ಕೊಡುತ್ತಾರೆ. ಇಂಥವನು ಅಂಬೇಡ್ಕರ್ ನಿಗಮದ ದುಡ್ಡೂ ಬಾಚುತ್ತಾನೆ. ಹಿಂದುಳಿದವರು ಆದಿವಾಸಿಗರ ಪಾಲಿನ ಅನುದಾನವನ್ನೂ ದೋಚುತ್ತಾನೆ.

ಮಂತ್ರಿಯೇ ಹೀಗಾದ ಮೇಲೆ ಇನ್ನು ಭಿಕ್ಷುಕ ತಾನೇ ಹೇಗೆ ಬದುಕಿ ಉಳಿಯಲು ಸಾಧ್ಯ?

ಸದ್ಯ ಸಮಾಜ ಕಲ್ಯಾಣವನ್ನು ಕಿತ್ತು ಮುಜರಾಯಿ ಖಾತೆಯನ್ನು ವಂಚಕ ಸುಧಾಕರ್ ತಲೆಗೆ ಕಟ್ಟಿದ್ದಾರೆ ಮುಖ್ಯಮಂತ್ರಿ ಯಡ್ಡಿ. ಏನು ಪ್ರಯೋಜನ? ಭಿಕ್ಷುಕರು ಭಂಗಿಗಳು, ದಲಿತರು, ಗಿರಿಜನರನ್ನೂ ಬಿಡದೇ ಕಿತ್ತು ತಿಂದವನು ದೇವರ ಕಾಣಿಕೆ ಹುಂಡಿ ಉಳಿಸುತ್ತಾನಾ?

-ರಾ. ಸೋಮನಾಥ್

ಯಡಿಯೂರಪ್ಪ ಹುತಾತ್ಮನಾಗಲು ತಯಾರಾಗಿದ್ದಾರಂತಲ್ಲಾ!

"ಅಕ್ರಮ ಗಣಿಗಾರಿಕೆ ನಡೆಯಲು ಬಿಡುವುದಿಲ್ಲ, ಒಂದೇ ಒಂದು ಹಿಡಿ ಗಣಿಧೂಳು ಕೂಡ ಬಳ್ಳಾರಿಯಿಂದ ಆಚೆ ಹೋಗಲು ಬಿಡುವುದಿಲ್ಲ". ಇಂತಹ ಠೇಂಕಾರದ ಮಾತುಗಳನ್ನು ಆಡಿದವರು ನಮ್ಮ ಮುಖ್ಯಮಂತ್ರಿಗಳಲ್ಲ, ಬದಲಿಗೆ ಗಣಿಕಳ್ಳತನವನ್ನೇ ತನ್ನ ಕಸುಬಾಗಿಸಿಕೊಂಡಿರುವ ಜನಾರ್ದನ ರೆಡ್ಡಿಯಂತಲ್ಲಾ. ಇಂತಹ ಕಳ್ಳನನ್ನು ಪಕ್ಕದಲ್ಲೇ ಕೂರಿಸಿಕೊಂಡ ಯಡ್ಡಿ "ಈ ರಾಜ್ಯದ ಗಣಿಯನ್ನು ರಕ್ಷಿಸಬೇಕು. ಅಕ್ರಮ ತಡೆಯಬೇಕು. ಈ ವಿಷಯದಲ್ಲಿ ನಾನು ಎಂತಹ ಹೋರಾಟಕ್ಕೂ ಸಿದ್ಧ ಆದರೆ ನಾನು ಮುಖ್ಯಮಂತ್ರಿಯಾಗಿ ಬಿಡುವಿಲ್ಲದ ಕಾರ್ಯಭಾರ ಹೊಂದಿರುವವರಿಂದ ಆ ಕೆಲಸ ಮಾಡುವವರು ಮುಂದೆ ಬರಬೇಕಿದೆ" ಎಂದರಂತಲ್ಲ, ಆ ಕೂಡಲೇ ಯಡ್ಡಿಗೆ ಹೊಳೆದ ಹೋರಾಟಗಾರರೆಂದರೆ ಶಾಲಾಕಾಲೇಜಿನ ವಿದ್ಯಾರ್ಥಿಗಳಂತಲ್ಲಾ. ಆಗ ಯಡಿಯೂರಪ್ಪನವರು "ನಮ್ಮ ನಾಡಿನ ಶಾಲಾ ಕಾಲೇಜಿನ ವಿದ್ಯಾರ್ಥಿಗಳು ತಮ್ಮ ಪಾಠಪ್ರವಚನಗಳನ್ನ ಬದಿಗಿಟ್ಟು, ಕೂಡಲೇ ಗಣಿ ರಕ್ಷಣೆ ಮಾಡಬೇಕು" ಎಂದರಂತಲ್ಲಾ, ಇಂತಹ ಹೇಳಿಕೆ ಕೊಟ್ಟ ಮುಖ್ಯಮಂತ್ರಿಯ ತಲೆ ಸಂಪೂರ್ಣ ಕೆಟ್ಟು ಹೋಗಿರುವುದರಲ್ಲಿ ಯಾವ ಅನುಮಾನವೂ ಇಲ್ಲವೆಂದು ತಿಳಿದ ಅಧಿಕಾರಿಗಳು, ಕನಿಕರದಿಂದ ನಗುತ್ತ ಎದ್ದು ಹೋದರಂತಲ್ಲಾ, ಥೂತ್ತೇರಿ!

****

ಥೂತ್ತೇರಿ

-ಯಾರೂ


ನಮ್ಮ ಸಂತೆ ಶಿವರದ ಚೆಡ್ಡಿ ಭೈರಣ್ಣ ಊರಿಗೆ ಬಂದು ತನ್ನ ತಾಯಿಯ ಹೆಸರಲ್ಲಿ ಸ್ಥಾಪಿಸಿರುವ ಗ್ರಂಥಾಲಯವನ್ನು ಕಣ್ತುಂಬ ನೋಡಿ, ತನ್ನ ಕಾದಂಬರಿಯನ್ನು ಯಾರೂ ಓದದಿರುವ ಬಗ್ಗೆ ತಿಳಿದುಕೊಂಡು, ಆ ಬಗ್ಗೆ ಏನೂ ಹೇಳದೆ, "ಬಿಜೆಪಿ ಸರ್ಕಾರ ಆಡಳಿತ ಮಾಡಲು ಕಾಂಗ್ರೆಸ್ ಅವಕಾಶ ಮಾಡಿಕೊಡಬೇಕು, ತೊಂದರೆ ಕೊಡಬಾರದು" ಎಂದರಂತಲ್ಲಾ, ಇದರಿಂದ ಗಲಿಬಿಲಿಯಾದ ಸಂತೆ ಶಿವರದ ಕಾಂಗ್ರೆಸ್ ಜನ "ಇದೇನು ನಮ್ಮ ಭೈರಣ್ಣ ಇದ್ದಕ್ಕಿದ್ದಂತೆ ನಮ್ಮ ಈಶ್ವರಪ್ಪನ ಸ್ಥಾನದ ಮೇಲೆ ಕಣ್ಣಿಟ್ಟಿರುವಂತೆ ಮಾತನಾಡುತ್ತಿದ್ದಾನಲ್ಲಾ, ಎಷ್ಟೇ ಆಗಲಿ ಇದೊಂದು ಪುರೋಹಿತರ ಹಿಂಡು. ಪುರೋಹಿತರ ಹಿತ ಕಾಯುವವರನ್ನ ಕೊಂಡಾಡುವುದು ಅದರ ಹುಟ್ಟು ಗುಣ. ಆದ್ದರಿಂದ ಕೆಟ್ಟು ಕೆರಹಿಡಿದಿರುವ ಸರ್ಕಾರದ ಪರ ವಕಾಲತ್ತು ವಹಿಸುವುದರಲ್ಲಿ ಯಾವ ಆಶ್ಚರ್ಯವೂ ಇಲ್ಲ" ಎಂದು ಆಡಿಕೊಂಡವಂತಲ್ಲಾ, ಥೂತ್ತೇರಿ!

******

ಇಡೀ ದೇಶವೇ ಕಂಡರಿಯದ ಅಪರೂಪದ ಮುಖ್ಯಮಂತ್ರಿಯಾದ ಎಡೂರಪ್ಪನನ್ನು ಖೂನಿ ಮಾಡುವುದಾಗಿ ಪಾಕಿಸ್ತಾನದ ಸಾಬರು ಬೆದರಿಕೆ ಪತ್ರ ರವಾನಿಸಿದ್ದಾರಂತಲ್ಲಾ. ಇದರಿಂದ ಗಂಭೀರ ಮುಖಮುದ್ರೆಗೆ ತುತ್ತಾದ ಎಡೂರಪ್ಪ ಹುತಾತ್ಮನಂತೆ ತೋರುತ್ತ "ಈ ಕರ್ನಾಟಕದ ಗಡಿ, ಗಣಿ, ಕಾಡು, ಭೂಮಿಯ ರಕ್ಷಣೆಗಾಗಿ ನಾನು ಸಾಬರ ಕೈಯಿಂದ ಸಾಯಲೂ ತಯಾರು" ಎಂದರಂತಲ್ಲಾ, ಖೂನಿಪತ್ರ ಬಂದಿರುವುದು ಮಲ್ಲೇಶ್ವರದಿಂದ ಎಂದು ಪತ್ತೆಹಚ್ಚಿರುವ ಪೊಲೀಸರು ಅಲ್ಲಿ ಅಡಗಿರಬಹುದಾದ ಪಾಕಿಸ್ತಾನಿ ಭಯೋತ್ಪಾದಕನಿಗೆ ಶೋಧಿಸುತ್ತಿರುವಾಗಲೇ, ಚೆಡ್ಡಿಗಳ ಭೂಗತ ಪತ್ರದ ಇತಿಹಾಸವನ್ನು ಬಲ್ಲ ಕಾಂಗೈಗಳು "ಯಾವುದಕ್ಕೂ ಕೇಶವಕೃಪವನ್ನು ಜಾಲಾಡುವುದು ಒಳ್ಳೆಯದು" ಎಂದಿವೆಯಂತಲ್ಲಾ, ಥೂತ್ತೇರಿ!!

******

ಚೆಡ್ಡಿಗಳು ಗೋವು ರಕ್ಷಣೆಗೆ ಹಾಕಿಕೊಂಡಿರುವ ಕಾರ್ಯಕ್ರಮ ಈಗಾಗಲೇ ತೀವ್ರ ಸ್ವರೂಪ ಪಡೆದುಕೊಂಡಿದ್ದು, ಕಡೂರಿನ ಹಸುಗಳ ಮೇಲೆ "ನನ್ನನ್ನು ಉಳಿಸಿ, ಕೊಲ್ಲಬೇಡಿ" ಎಂದು ಬೋರ್ಡು ಬರೆದು ಅಂಟಿಸುವ ಮಟ್ಟಕ್ಕೂ ಹೋಗಿದೆಯಂತಲ್ಲಾ, ಜನರ ಬಳಿಗೋಗಿ ತಮ್ಮ ಸಾಧನೆ ಹೇಳಿಕೊಂಡು ಓಟು ಕೇಳುವುದು ಬಿಟ್ಟು, ಇಲಾತಿ ಹಸುವಿನ ಮೇಲೆ ಪೋಸ್ಟರ್ ಅಂಟಿಸಿಕೊಂಡು ತಿರುಗುತ್ತಿರುವ ಚೆಡ್ಡಿಗಳನ್ನು ನೋಡಿ ಆಡಿಕೊಳ್ಳುತ್ತಿರುವ ಕಾಂಗೈಗಳು, ಕಡೂರಿನ ಕಡುಬಡವರ ಕೈಲೂ ಐದುನೂರು ರೂ.ಗಳ ನೋಟು ನೋಡಿ ದಂಗುಬಡಿದು ಕುಳಿತಿವೆಯಂತಲ್ಲಾ, ಈ ನಡುವೆ ಚುನಾವಣಾ ಆಯೋಗದ ನೋಟಿಸಿಗೂ ಕೇರ್ ಮಾಡದೆ "ಕಡೂರನ್ನು ದತ್ತು ತೆಗೆದುಕೊಂಡು ಸಾಕುತ್ತೇನೆ. ಉಪ್ಪಾರರು, ಬಣಜಾರರು, ಎಲ್ಲರನ್ನು ನನ್ನ ಅಣ್ಣತಮ್ಮಂದಿರಂತೆ ನೋಡಿಕೊಳ್ಳುತ್ತೇನೆ" ಎಂದು ಅಬ್ಬರಿಸುತ್ತಿರುವ ಎಡೂರಪ್ಪನ ಹೊಡೆತಕ್ಕೆ ದಳ ಮತ್ತು ಕಾಂಗೈಗಳೂ ದಂಗಾಗಿ ಹೋಗಿವೆಯಂತಲ್ಲಾ, ಅತ್ತ ಜನಾರ್ದನ ರೆಡ್ಡಿ ಒಂಭತ್ತು ವಾರೆಂಟ್ ಇಷ್ಟೂ ಆದರೂ ಕೋರ್ಟಿಗೆ ಗೌರವ ಕೊಡುತ್ತಿಲ್ಲ, ಇತ್ತ ಯಡ್ಡಿ ಚುನಾವಣಾ ಆಯೋಗಕ್ಕೂ ಕೇರ್ ಮಾಡುತ್ತಿಲ್ಲ, ರಾಮರಾಮ ಎಂದು ದೇವೇಗೌಡರು ತಲೆಯ ಮೇಲೆ ಕೈ ಹೊತ್ತು ಕೂತರಂತಲ್ಲಾ, ಥೂತ್ತೇರಿ!



ಹೆಂಡತಿ ಹೆಸರಲ್ಲಿ ಗಾಲಿ ರೆಡ್ಡಿಯ ಗಣಿ ದಂಧೆ!

ಅರುಣಾ ರೋಲ್‌ಕಾಲ್ ಪುರಾಣ!

ರೆಡ್ಡಿ ತನ್ನ ಹೆಂಡತಿ ಹೆಸರಲ್ಲಿ ಅಕ್ರಮ ಗಣಿದಂಧೆ ನಡುಸುತ್ತಿದ್ದಾನೆಂದಾಕ್ಷಣ 'ಪಾಪ ಕಣ್ರಿ ಅರುಣಾ. ಆಕೆ ಬಲಿಪಶು' ಅಂತೇನಾದರೂ ಅಂದುಕೊಂಡಿದ್ದೀರಾದರೆ ನೀವು ಅಮಾಯಕರೆಂದೇ ಅರ್ಥ!

ಯಾಕೆಂದರೆ ಪತಿರಾಯ ರೆಡ್ಡಿಯ ಅಡ್ಡಾದಲ್ಲೀಕೆ ಪೂರ್ತಿ ಪಳಗಿಕೊಂಡಿದ್ದಾಳಲ್ಲದೆ, ಕೆಲ ಅಕ್ರಮ ದಂಧೆಗಳನ್ನು ತಾನೇ ಮುಂದೆ ನಿಂತು ನೆರವೇರಿಸುತ್ತಾರೆ. ಅಂಥವುಗಳಲ್ಲಿ ಅದಿರು ತುಂಬಿದ ಲಾರಿಗಳಿಂದ ವಸೂಲಿ ಮಾಡುವ ರೋಲ್‌ಕಾಲ್ ದಂಧೆ ಪ್ರಮುಖವಾದುದು.

ಈ ದಂಧೆಗೆ ಅರುಣಾರ ಅಪ್ಪ ಪರಮೇಶ್ವರ ರೆಡ್ಡಿ ಸರಿಯಾದ ಸಾಥ್ ನೀಡುತ್ತಿದ್ದುದು ಸಹ ಗುಟ್ಟಾಗುಳಿದಿಲ್ಲ. ಈ ಹಿಂದೆ ರೆಡ್ಡಿಯ ಸಾಮ್ರಾಜ್ಯದಿಂದ ಪ್ರತಿದಿನ ಸಾವಿರಾರು ಲಾರಿಗಳು ಕಡಿಮೆಯೆಂದರೂ ಮೂವತ್ತು ಸಾವಿರ ಟನ್ ಅದಿರು ಸಾಗಿಸುತ್ತಿದ್ದವು. ಈ ಸಾಗಾಣಿಕೆಯ ಭಾರ ಹೊತ್ತಿದವರು ಗುತ್ತಿಗೆದಾರರು.

ಅದಿರು ಲೋಡ್ ಆಗುವ ಸಂದರ್ಭದಲ್ಲೇ ರೆಡ್ಡಿ ಪಟಾಲಂನ ಬಂಟ ಸುಬ್ಬಾರೆಡ್ಡಿಯೆಂಬಾತ ಅದಿರು ಸಾಗಾಣಿಕಾ ಗುತ್ತಿಗೆ ದಾರರಿಗೆ ಅಟಕಾಯಿಸಿಕೊಳ್ಳುತ್ತಿದ್ದ. ಒಂದು ಟನ್‌ಗೆ ಹತ್ತು ರೂಪಾಯಿಯಂತೆ ಹಣ ಕೀಳುತ್ತಿದ್ದ. ಬರೀ ಹತ್ತು ರೂಪಾಯಿಯೇ ಅಂತ ಉದಾಸೀನ ಮಾಡುವಂತಿಲ್ಲ, ಯಾಕೆಂದರೆ, ಹತ್ತು ಗಾಲಿಯ ಒಂದು ಲಾರಿಗೆ ಕನಿಷ್ಠ ಹದಿನೇಳು ಟನ್ ಅದಿರು ತುಂಬಲಾಗುತ್ತದೆ. ಇದಕ್ಕೆ ಲಾರಿ ಮಾಲೀಕರು ನೂರಾ ಎಪ್ಪತ್ತು ರೂಪಾಯಿ ಸ್ಪಾಟಲ್ಲೇ ಕಕ್ಕಬೇಕು. ಇಂಥ ನಾಲ್ಕು ಸಾವಿರ ಲಾರಿಗಳಿಂದ ಅಖಂಡ ದಿನಕ್ಕೆ 6.80 ಲಕ್ಷ ರೂಪಾಯಿ ಕಿತ್ತುಕೊಳ್ಳಲಾಗುತ್ತಿತ್ತು, ತಿಂಗಳಿಗೆ 2 ಕೋಟಿ ರೂಪಾಯಿ ರೆಡ್ಡಿ ಪಡೆಯ ತಿಜೋರಿ ಪಾಲಾಗುತ್ತಿತ್ತು, ವಾಸ್ತವವೆಂದರೆ ಈ ಬೃಹತ್ ಮೊತ್ತದ ಹಣವನ್ನು ಮೇಂಟೇನ್ ಮಾಡುತ್ತಿದ್ದುದು ಲಕ್ಷ್ಮಿ ಅರುಣಾ ಮತ್ತು ಅಪ್ಪ ಪರಮೇಶ್ವರ ರೆಡ್ಡಿ.


ಈ ಅಪ್ಪ ಮಗಳ ಗೂಂಡಾಗಿರಿ ಹೇಗಿತ್ತೆಂದರೆ, ಲಾರಿ ಮಾಲೀಕನೇನಾದರೂ ಗ್ರಹಚಾರ ಕೆಟ್ಟು ಹಫ್ತಾ ಕೊಡಲು ನಖರಾ ಮಾಡಿದನೆಂದರೆ ಸಾಗಾಣಿಕೆಯನ್ನೇ ಬ್ಯಾನ್ ಮಾಡಿಬಿಡುತ್ತಿದ್ದರು.

ತೀರಾ ನಾಲ್ಕೈದು ವರ್ಷಗಳ ಹಿಂದೆ ನಾಲ್ಕು ಸಾವಿರ ಸಂಬಳಕ್ಕೆ ರೆಡ್ಡಿ ಪಟಾಲಂ ಸೇರಿಕೊಂಡವನು ಸುಬ್ಬಾರೆಡ್ಡಿ. ಆತನೀಗ ಹಫ್ತಾ ವಸೂಲಿ ದಂಧೆ ಮಾಡಿಮಾಡಿಯೇ ಕೋಟಿಗೆ ತೂಗುತ್ತಾನೆಂದರೆ ರೆಡ್ಡಿ ರಾಜ್ಯದಲ್ಲಿ ಕಪ್ಪು ಹಣದ ಹರಿದಾಟ ಯಾವ ಪ್ರಮಾಣದಲ್ಲಿರಬಹುದೋ ಊಹಿಸಿ.

ಇನ್ನೂ ಇಂಟರೆಸ್ಟಿಂಗ್ ವಿಚಾರವೆಂದರೆ, ಸುಬ್ಬಾರೆಡ್ಡಿ ಈ ಪರಿ ಕೊಬ್ಬಿದ್ದು ರೆಡ್ಡಿ ಹೆಂಡತಿ ಅರುಣಾರನ್ನ ವಂಚಿಸುವುದರ ಮೂಲಕ! ಈತ ವಂಚನೆಯ ದುಡ್ಡಲ್ಲೇ ಒಂದಷ್ಟು ವಂಚನೆ ನಡೆಸಿ ಕೋಟಿ ಕೋಟಿ ಕಮಾಯಿಸಿದ್ದಾನೆ. ವಿಚಾರ ಹೀಗಿರುವಾಗ ರೆಡ್ಡಿ ಹೆಂಡತಿ ಅರುಣಾ ಹಾಗೂ ಅಪ್ಪ ಪರಮೇಶ್ವರ ರೆಡ್ಡಿ ಅದ್ಯಾವ ರೇಂಜಲ್ಲಿ ಕೊಬ್ಬಿರಬಹುದೋ ಯೋಚಿಸಿ. ಇಂಥ ಅಕ್ರಮಗಳನ್ನು ಲಾಗಾಯ್ತಿನಿಂದಲೂ ನಡೆಸಿಕೊಂಡು ಬಂದಿರುವ ಅರುಣಾ ಅಸೋಸಿಯೇಟೆಡ್ ಮೈನಿಂಗ್ ಕಂಪೆನಿಯ ಮೂಲಕ ಅಕ್ರಮಗಳನ್ನು ನಡೆಸಿ ದಕ್ಕಿಸಿಕೊಂಡಿರುವುದು ಸ್ಪಷ್ಟ.

ಇಂಥ ಅಂದಾದುಂದಿಗಳಿಗೆ ಯಾವ ಶಿಕ್ಷೆಯೂ ಇಲ್ಲವೇ?

• ಸಂತೋಷ್ ಬಾಗಿಲಗದ್ದೆ
beladingalu@live.com



ಇದು ಗಣಿಕಳ್ಳ ಕಂ ಪ್ರವಾಸೋದ್ಯಮ ಸಚಿವ ಗಾಲಿ ಜನಾರ್ದನ ರೆಡ್ಡಿಯ ಅಕ್ರಮ ದಂಧೆಯ ವಿರಾಟ್ ದರ್ಶನ. ಪದೇಪದೆ ಕರ್ನಾಟಕದಲ್ಲಿ ತನ್ನ ಒಡೆತನದ ಗಣಿಗಾರಿಕೆ ನಡೆಯುತ್ತಿಲ್ಲ ಅನ್ನುವ, ಎಂಟ್ಹತ್ತು ವರ್ಷದೊಳಗಾಗಿ ಸಾವಿರಾರು ಕೋಟಿ ಸಂಪಾದಿಸಿದುದರ ಬಗ್ಗೆ ಪ್ರಶ್ನಿಸಿದರೆ 'ಇದು ನ್ಯಾಯಯುತವಾದ ಸಂಪಾದನೆ' ಅಂತ ಎದೆಯುಬ್ಬಿಸುವ ರೆಡ್ಡಿಯ ಅಸಲೀ ದಂಧೆಯ ಅನಾವರಣ. ಜೊತೆಗೆ ಗಣಿಗಾರಿಕೆಯ ಬಗ್ಗೆ ತನಗೇನೂ ಗೊತ್ತಿಲ್ಲವೆಂಬಂತೆ ಅಮಾಯಕತನ ಪ್ರದರ್ಶಿಸುವ ಮುಖ್ಯಮಂತ್ರಿ ಯಡಿಯೂರಪ್ಪರ ಅಸಲೀತನದ ದಿವ್ಯದರ್ಶನವೂ ಹೌದು!

ರೆಡ್ಡಿ ಪಡೆಯ ವಂಚಕತನಗಳ ಪರಿಚಯ ರಾಜ್ಯದ ಜನರಿಗಿದ್ದೇ ಇದೆ. ಆದರೆ ಅವುಗಳ ಆಳಕ್ಕಿಳಿದು ತಡಕಾಡಿದರೆ ಗಾಬರಿ ಬೀಳುವಂಥ, ಆಕ್ರೋಶ ಕೆರಳಿಸುವಂಥ ದಂಡಿ-ದಂಡಿ ಮಾಹಿತಿಗಳು ಹೊರಬೀಳುತ್ತವೆ. ಮಹಾನ್ ಸಾಚಾ ಎಂಬಂತೆ ಪೋಸು ಕೊಡುವ ರೆಡ್ಡಿ ತನ್ನ ಹೆಂಡತಿ ಗಾಲಿ ಲಕ್ಷ್ಮಿ ಅರುಣಾ ಹೆಸರಲ್ಲೇ ನಿರಾತಂಕವಾಗಿ ಅಕ್ರಮ ಗಣಿದಂಧೆಯಲ್ಲಿ ತೊಡಗಿರುವುದು ಗಣಿ ಮಾಫಿಯಾದ ಲೇಟೆಸ್ಟ್ ಮುಖ! ಈ ಅಕ್ರಮವನ್ನು ಕಾಂಗ್ರೆಸ್‌ನ ವಿ.ಎಸ್.ಉಗ್ರಪ್ಪ ಹಾಗೂ ಕೆ.ಸಿ.ಕೊಂಡಯ್ಯ ಬಯಲಿಗೆಳೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಈಗ್ಗೆ ಐದು ವರ್ಷಗಳ ಹಿಂದೆ ರೆಡ್ಡಿ ಹೆಂಡತಿ ಅರುಣಾ ಮಾಲೀಕತ್ವದಲ್ಲಿ ಅಸ್ತಿತ್ವಕ್ಕೆ ಬಂದದ್ದು 'ಅಸೋಸಿಯೇಟೆಡ್ ಮೈನಿಂಗ್' ಹೆಸರಿನ ಕಂಪೆನಿ. ಗಮನಿಸಲೇಬೇಕಾದ ಅಂಶವೆಂದರೆ, ಮೇಲ್ಕಂಡ ಕಂಪೆನಿ ಕರ್ನಾಟಕ ದಲ್ಲಿ ಯಾವುದೇ ರೀತಿಯಲ್ಲೂ ಗಣಿ ಲೀಸ್ ಹೊಂದಿಲ್ಲ, ಆದರೆ ಪವಾಡಸದೃಶ ರೀತಿಯಲ್ಲಿ ವಹಿವಾಟು ನಡೆದು ಹೋಗಿದೆ. ಅದು ಎಷ್ಟು ದೊಡ್ಡ ಮೊತ್ತವೆಂದರೆ, 2005ರಿಂದ 2010ರ ಮೇ ತಿಂಗಳವರೆಗೆ ಈ ಕಂಪೆನಿ ನಡೆಸಿದ ಅದಿರಿನ ವಹಿವಾಟು ಅಖಂಡ ಇನ್ನೂರ ಮೂವತ್ತೊಂದು ಕೋಟಿ ರೂ.ಮೊತ್ತದ್ದು!

ಈ ಕಂಪೆನಿಯ ಮಾಲೀಕತ್ವಕ್ಕೆ ಯಾವುದಾದರೂ ಗಣಿ ಲೀಸ್ ಸಿಕ್ಕಿರಬಹುದಾ ಅಂತೊಂದು ಗುಮಾನಿಯೊಂದಿಗೆ ಅದೆಷ್ಟೇ ತಲಾಶು ನಡೆಸಿದರೂ ಯಾವ ಪುರಾವೆಗಳೂ ಸಿಕ್ಕುವುದಿಲ್ಲ, ಹಾಗಾದರೆ ಈ ಬೃಹತ್ ಪ್ರಮಾಣದ ಅದಿರು ಅಸೋಸಿಯೇಟ್ ಮೈನಿಂಗ್ ಕಂಪೆನಿಗೆ ಹೇಗೆ ಸಿಕ್ಕಿತು? ಕರ್ನಾಟಕದಲ್ಲಿ ಗಣಿ ವ್ಯವಹಾರವನ್ನೇ ನಡೆಸುತ್ತಿಲ್ಲ ಅಂತ ಆಣೆ ಪ್ರಮಾಣ ಮಾಡಿ ಸುಳ್ಳು ಒದರುವ ರೆಡ್ಡಿ 231 ಕೋಟಿ ಮೊತ್ತದ ಅದಿರನ್ನು ಹೇಗೆ ಪಡೆದುಕೊಂಡ...?

ಇಷ್ಟೆಲ್ಲ ಪ್ರಶ್ನೆಗಳ ನಡುವಲ್ಲೇ ಮತ್ತೊಂದು ಆಘಾತಕಾರಿ ಅಂಶ ಬಯಲಾಗುತ್ತದೆ. ಮೇಲೆ ಹೇಳಿದಂತೆ ಅಷ್ಟೊಂದು ದೊಡ್ಡ ಮೊತ್ತದ ಅದಿರು ಎಲ್ಲಿಂದ ಬಂತೆಂಬ ಪ್ರಶ್ನೆಗೆ ಓಬಳಾಪುರಂ ಮೈನಿಂಗ್ಸ್‌ನಿಂದ ಇರಬಹುದು ಅಂತೊಂದು ಉತ್ತರ ಹೊಳೆದರೆ ಆಶ್ಚರ್ಯವಿಲ್ಲ. ಆದರೆ ವಾಸ್ತವವೆಂಬುದು ಅದಕ್ಕೆ ವಿರುದ್ಧವಾಗಿದೆ. ಯಾಕೆಂದರೆ, ಆಂಧ್ರಪ್ರದೇಶದ ರೆಡ್ಡಿ ಮಾಲೀಕತ್ವದ ಓಬಳಾಪುರಂ ಮೈನ್ಸ್ ಕಳೆದ ಎಂಟು ತಿಂಗಳಿಂದ ಉತ್ಪಾದನೆ ನಡೆಸುತ್ತಿಲ್ಲ, ಆದರೆ ಕಳೆದ ಮೂರು ತಿಂಗಳಲ್ಲಿ ಅಖಂಡ ನೂರು ಕೋಟಿ ವ್ಯವಹಾರ ಅರುಣಾ ಮಾಲೀಕತ್ವದ ಕಂಪೆನಿಯಿಂದ ನಡೆದಿದೆ!

ಅಂದರೆ, ಅಸೋಸಿಯೇಟ್ ಕಂಪೆನಿ ನಡೆಸಿರುವ ಅಖಂಡ ಇನ್ನೂರ ಮೂವತ್ತೊಂದು ಕೋಟಿ ಅರವತ್ತಾರು ಲಕ್ಷ ಚಿಲ್ಲರೆ ವ್ಯವಹಾರದ ಅದಿರು ಕರ್ನಾಟಕದ್ದೆ! ಮೊದಲೇ ಹೇಳಿದಂತೆ ಈ ಕಂಪೆನಿಗೆ ಗಣಿ ಲೀಸಿಂಗ್ ಆಗಲಿ, ಪರವಾನಗಿಯಾಗಲಿ ಇಲ್ಲ. ಹಾಗಾದರೆ ಕರ್ನಾಟಕದಲ್ಲಿ ಗಣಿಗಾರಿಕೆ ನಡೆಸುತ್ತಿಲ್ಲ ಅಂತ ಅಡಿಗಡಿಗೆ ಒದರುವ ಜನಾರ್ದನ ರೆಡ್ಡಿ ಅದಿರನ್ನು ಎಲ್ಲಿಂದ ತಂದ? ಈ ಪ್ರಶ್ನೆ ಮುಖ್ಯವಾಗುತ್ತದೆ.



ಕೊಂಡಯ್ಯ ಉಗ್ರಪ್ಪ



ಅರುಣಾ

ಇದರ ಬೆನ್ನು ಬಿದ್ದರೆ ಜನಾರ್ದನ ರೆಡ್ಡಿಯ ಕಳ್ಳದಂಧೆಯ ಕರಾಳಮುಖಗಳು ಬಿಚ್ಚಿಕೊಳ್ಳತೊಡಗುತ್ತವೆ. ಈತ ತನ್ನ ಹೆಂಡತಿ ಅರುಣಾ ಹೆಸರಲ್ಲಿ ಸ್ಥಾಪಿಸಿದ್ದಾನಲ್ಲ ಅಸೋಸಿಯೇಟ್ ಮೈನಿಂಗ್ ಕಂಪೆನಿಯನ್ನು? ಪರೋಕ್ಷವಾಗಿ ರೆಡ್ಡಿ ಮಾಲೀಕತ್ವ ಹೊಂದಿರುವ ಇಂಥಾದ್ದೇ ಹತ್ತಾರು ಬೇನಾಮಿ ಕಂಪೆನಿಗಳು ಬಳ್ಳಾರಿಯಲ್ಲಿವೆ. ಇಂಥ ಕಂಪೆನಿಗಳಿಂದ ಗಣಿಗಾರಿಕೆ ನಡೆಸಿ, ಬೇರೆಯವರಿಂದ ಲೀಸಿಂಗ್ ಪಡೆದು ಹಣ ಹೊಡೆದುಕೊಳ್ಳುವುದು ರೆಡ್ಡಿಯ ಕಳ್ಳ ಗಣಿದಂಧೆಯ ವೈಖರಿ. ಇದಕ್ಕೆಲ್ಲ ಬೆದರಿಕೆ, ಗೂಂಡಾಗಿರಿಗಳನ್ನು ಪ್ರಯೋಗಿಸುವುದೀಗ ಗುಟ್ಟಿನ ವಿಚಾರವಲ್ಲ.

ಇದೆಲ್ಲ ಏನೇ ಇರಲಿ, ರೆಡ್ಡಿ ತನ್ನ ಹೆಂಡತಿ ಹೆಸರಲ್ಲಿ ಅಕ್ರಮವಾಗಿ ಅದಿರು ವ್ಯವಹಾರ ನಡೆಸಿ ಕೋಟಿ ಕಮಾಯಿಸಿದ್ದು ಅಕ್ರಮವಲ್ಲವೇ? 'ನಮ್ಮ ಪಕ್ಷದವರ್ಯಾರೂ ಅಕ್ರಮ ಗಣಿಗಾರಿಕೆಯಲ್ಲಿ ತೊಡಗಿಲ್ಲ' ಅಂತ ಅಡಿಗಡಿಗೆ ಮತಿಗೆಟ್ಟವರಂತೆ ಬಡಬಡಿಸುವ ಯಡಿಯೂರಪ್ಪರಿಗೆ ಇದ್ಯಾಕೆ ಕಾಣಿಸುತ್ತಿಲ್ಲ?

ಕಳ್ಳರೆಡ್ಡಿಯ ಅಕ್ರಮಗಳು ಕೇವಲ ಅಸೋಸಿಯೇಟ್ಸ್ ಕಂಪೆನಿಗಷ್ಟೇ ಸೀಮಿತವಾಗಿಲ್ಲ, ಅದು ಬೇರೆ ಬೇರೆ ರೂಪಗಳಲ್ಲಿ ಹುಲುಸಾಗಿ ಮೈಚಾಚಿಕೊಂಡಿದೆ. ಈತನ ಜಾತಕ ತಡ ಕಾಡಿದರೆ ಬರೀ ಅಕ್ರಮ, ಅನಾಚಾರಗಳೇ ತುಂಬಿತುಳುಕುತ್ತಿರುವುದು ಗೋಚರವಾಗುತ್ತದೆ. ಗಾಲ ಟ್ರೇಡಿಂಗ್ ಇಂಟರ್ ನ್ಯಾಷನಲ್ ಹೆಸರಿನ ಕಂಪೆನಿ ಮತ್ತದರ ಕಾರ್ಯವೈಖರಿ ಹಾಗೂ ಸ್ವತಃ ಅದರ ಡೈರೆಕ್ಟರು ಗಳಲ್ಲೊಬ್ಬನಾಗಿ ಕರ್ನಾಟಕದ

▶▶ 13

ಇದು ಯಾರ ಅವಧಿಯಲ್ಲಿ ನಡೆದದ್ದು ಮಿಸ್ಟರ್ ಯಡಿಯೂರಪ್ಪ?

'ಬಿಜೆಪಿ ಸರ್ಕಾರದ ಅವಧಿಯಲ್ಲಿ ಯಾವುದೇ ಗಣಿ ಅಕ್ರಮ ನಡೆದಿಲ್ಲ, ಪರವಾನಗಿಯೂ ಪಾಸ್ ಆಗಿಲ್ಲ' ಇದು ಮುಖ್ಯಮಂತ್ರಿ ಯಡಿಯೂರಪ್ಪ ಆಗಾಗ ಬಡಬಡಿಸುವ ಗಣಿ ಸಂಬಂಧಿ ಕ್ಲಾರಿಫಿಕೇಷನ್ನು. ಆದರೆ ಅಕ್ರಮ ಗಣಿಗಾರಿಕೆ ವಿಚಾರದಲ್ಲಿ ಕಳ್ಳ ರೆಡ್ಡಿಯ ಅಪರಾವತಾರದಂತೆ ವರ್ತಿಸುವ ಯಡಿಯೂರಪ್ಪ ಮತ್ತು ಅವರ ಸರ್ಕಾರದ ಅಸಲಿಯತ್ತುಗಳು ಬೇರೆ ತೆರನಾಗಿವೆ. ಯಡಿಯೂರಪ್ಪ ಮುಖ್ಯಮಂತ್ರಿಯಾದ ಮೇಲೆ ಹದಿನೈದು ಕಂಪೆನಿಗಳು ಪರವಾನಗಿ ಪಡೆದು ಕರ್ನಾಟಕದಲ್ಲಿ ಕಾರ್ಯಾರಂಭ ಮಾಡಿವೆ. ಒಂಬತ್ತು ಕಂಪೆನಿಗಳಿಗೆ ಖುದ್ದು ಬಿಜೆಪಿ ಸರ್ಕಾರವೇ ಗಣಿಗಾರಿಕೆ ಪರವಾನಗಿ ಕೊಡುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ. ಹತ್ತು ಕಂಪೆನಿಗಳಿಗೆ ಪರವಾನಗಿ ಕೊಡಲು ತುದಿಗಾಲ ಮೇಲೆ ನಿಂತಿದೆ!

ಇದೆಲ್ಲ ನಡೆದದ್ದು 2009ರಲ್ಲಿ, ಆರೇವ್ ಮಿನರಲ್ಸ್, ತಂಗವೇಲು ಅಂಡ್ ಅದರ್ಸ್, ಜಿ.ಜಿ.ಬ್ರದರ್ಸ್, ಪಿ.ವೆಂಗಣ್ಣಶೆಟ್ಟಿ ಅಂಡ್ ಬ್ರದರ್ಸ್, ತುಂಗಾಭದ್ರಾ ಮಿನರಲ್ಸ್ ಎಸ್.ವಿ.ಬಸವರಾಜ್, ಮೈಸೂರು ಮ್ಯಾಂಗನೀಸ್ ಪ್ರೈವೇಟ್ ಲಿಮಿಟೆಡ್, ಎವರ್ ಚನ್ನಕೇಶವ ರೆಡ್ಡಿ ಎಸ್.ವಿ. ಶ್ರೀನಿವಾಸುಲು, ಮೈಸೂರು ಮಿನರಲ್ಸ್, ತಿಮ್ಮಪ್ಪನಗುಡಿ, ವರಲಕ್ಷ್ಮಿ ಮೈನಿಂಗ್ ಕಂಪೆನಿ, ಎಮ್. ಹನುಮಂತರಾವ್ ಮುಂತಾದ ಹದಿನೈದು ಕಂಪೆನಿಗಳು ಇದೀಗಲೇ ಬಿಜೆಪಿ ಪಕ್ಷದ ಅಧಿಕಾರವಧಿಯಲ್ಲಿ ಪರವಾನಗಿ ಪಡೆದು ಕಾರ್ಯ ನಿರ್ವಹಿಸುತ್ತಿವೆ.

ಇಷ್ಟೆಲ್ಲವನ್ನು ತಣ್ಣಗೆ ಮಾಡಿ ಮುಗಿಸಿರುವ ಯಡಿಯೂರಪ್ಪ ಇದೀಗ ನಾನೇನೂ ಮಾಡಿಲ್ಲ ಎಂಬಂತೆ ನಟಿಸುತ್ತಾ, ಗಣಿ ಅಕ್ರಮಗಳಿಗೆಲ್ಲಾ ಕೇಂದ್ರ ಸರ್ಕಾರವನ್ನಷ್ಟೇ ಹೊಣೆಯಾಗಿಸುತ್ತಾ ಬಚಾವಾಗಲು ಪ್ರಯತ್ನಿಸುತ್ತಿರುವುದು ಖಚಿತಗೊಂಡಿದೆ. ಮೇಲ್ಕಂಡ ಹದಿನೈದು ಕಂಪೆನಿಗಳಿಗೆ ಪರವಾನಗಿ ನೀಡಿರುವ ಸಂಬಂಧವೂ 'ನಮ್ದೇನೂ ಇಲ್ಲ, ಹಿಂದಿನ ಸರ್ಕಾರವೇ ಮಾಡಿದ್ದು' ಎಂಬರ್ಥದಲ್ಲಿ ಕೈ ಚೆಲ್ಲುತ್ತಿದ್ದಾರೆ.


ಆದರೆ, ಎಂಎಂಆರ್‌ಡಿ ಕಾಯಿದೆಯ 23(ಸಿ) ಅಡಿಯಲ್ಲಿರುವ ಕಾನೂನುಪ್ರಕಾರ ಅಕ್ರಮ ಗಣಿಗಾರಿಕೆ ತಡೆಯುವುದು ಆಯಾ ರಾಜ್ಯ ಸರ್ಕಾರದ ಜವಾಬ್ದಾರಿ. ಯಡಿಯೂರಪ್ಪರಿಗೆ ಅಕ್ರಮ ಗಣಿಗಾರಿಕೆ ತಡೆಯುವ ಮನಸ್ಸಿದ್ದಿದ್ದರೆ ಮೇಲ್ಕಂಡ ಕಾನೂನಿನನ್ವಯ ಕ್ರಮ ಕೈಗೊಳ್ಳಬಹುದಿತ್ತಲ್ಲಾ? ಈ ಹದಿನೈದು ಕಂಪೆನಿಗಳಿಗೆ ಪರವಾನಗಿ ಕೊಡಲು ಹಿಂದಿನ ಸರ್ಕಾರವೇ ಶಿಫಾರಸ್ಸು ಮಾಡಿತ್ತೆಂದುಕೊಳ್ಳೋಣ. ಅದನ್ನ ಇವರ ಅವಧಿಯಲ್ಲಾದರೂ ತಡೆಯಬಹುದಿತ್ತಲ್ಲಾ?-ಇಷ್ಟೆಲ್ಲಾ ಪ್ರಶ್ನೆಗಳಿಗೆ ಯಡಿಯೂರಪ್ಪನವರೇ ಉತ್ತರಿಸಬೇಕಿದೆ.

ಅಷ್ಟಕ್ಕೂ ಗಣಿ ಅಕ್ರಮ ವಿಚಾರವನ್ನೇನಾದರೂ ಸಿಬಿಐಗೆ ವಹಿಸಿದರೆ ಪೂರಾ ಸತ್ಯ ಬಯಲಾಗುತ್ತದೆ. ಆದರೆ ಈ ಆಸಾಮಿ ಲೋಕಾಯುಕ್ತಕ್ಕೆ ವಹಿಸಿ ನುಣುಚಿಕೊಳ್ಳಲು ಹವಣಿಸುತ್ತಿದ್ದಾರೆ. ವಾಸ್ತವವೆಂದರೆ, ಲೋಕಾಯುಕ್ತ ಇಲಾಖೆಗೆ ಸತ್ಯ ಶೋಧಿಸಿ ಭ್ರಷ್ಟರನ್ನು ಸರ್ಕಾರದೆದುರು ನಿಲ್ಲಿಸುವ ಅಧಿಕಾರವಷ್ಟೇ ಇರುತ್ತದೆ. ಈ ವರದಿಯನ್ನು ಸರ್ಕಾರ ಒಪ್ಪಬಹುದು ಅಥವಾ ತಿರಸ್ಕರಿಸಬಹುದು (ಸೆಕ್ಷನ್13ರ ಪ್ರಕಾರ). ಹಾಗೊಂದು ವೇಳೆ ಒಪ್ಪಿಕೊಂಡರೆ ಅಂತಿಮವಾಗಿ ಸಿಬಿಐ ಸಂಸ್ಥೆಯೇ ತನಿಖೆ ನಡೆಸಬೇಕು.

ಹಾಗೊಂದು ವೇಳೆ ಈ ಪ್ರಕರಣ ಸಿಬಿಐ ತನಿಖೆಗೊಳಪಟ್ಟರೆ ಬರೀ ಜನಾರ್ದನ ರೆಡ್ಡಿ ಪಟಾಲಂ ಮಾತ್ರವಲ್ಲ, ಯಡಿಯೂರಪ್ಪನವರೂ ಸೇರಿದಂತೆ ಬಿಜೆಪಿ ಪಾಳೆಯಕ್ಕೇ ಮುಳುಗು ನೀರಾಗಿ ಪರಿಣಮಿಸಲಿದೆ. ಈ ಗಣಿದಂಧೆಯಲ್ಲಿ ಸುಷ್ಮಾ ಸ್ವರಾಜ್ ಸೇರಿದಂತೆ ಬಿಜೆಪಿಯ ಪ್ರಮುಖರನೇಕರ ಪಾಲುದಾರಿಕೆಯಿರುವ ಬಗ್ಗೆ ಗುಮಾನಿಗಳಿವೆ.

ಇದರಿಂದ ತಪ್ಪಿಸಿಕೊಳ್ಳಬೇಕೆಂದರೆ ಕಾಲ ತಳ್ಳಬೇಕು! ಅದಕ್ಕಾಗಿಯೇ ಪ್ರಕರಣವನ್ನು ಲೋಕಾಯುಕ್ತರಿಗೆ ವಹಿಸುವುದು ಮುಂತಾದ ನಾಟಕಗಳು ಯಡಿಯೂರಪ್ಪನವರ ಕಡೆಯಿಂದ ನಿರಂತರವಾಗಿ ನಡೆಯುತ್ತಿವೆ.

ಯಡಿಯೂರಪ್ಪನವರಿಗೆ ನೈತಿಕತೆಯಿದ್ದರೆ ಗಣಿ ಅಕ್ರಮದ ತನಿಖೆಯನ್ನು ಸಿಬಿಐಗೆ ವಹಿಸಲಿ....



ಯಡ್ಡಿ ಅವಧಿಯಲ್ಲಿ ಆರಂಭಗೊಂಡ ಗಣಿ ವಿವರ

ಗಣಿ ಕಳ್ಳರ ಹಣದಲ್ಲಿ ರಾಜ್, ವಿಷ್ಣು ಪ್ರತಿಮೆ!



• ಪಾರ್ವತೀಶ

bparvateesha@gmail.com

ವಿರೋಧಿಗಳನ್ನು ತಮ್ಮ ಸಿನಿಮಾಗಳಲ್ಲಿ, ಹಾಡುಗಳಲ್ಲಿ ಖಂಡಿಸಿ ಕನ್ನಡದ ಹಿರಿಮೆಯನ್ನು ಎತ್ತಿ ಹಿಡಿದವರು. ನಿಜ ಬದುಕಿನಲ್ಲೂ ಕನ್ನಡಕ್ಕೆ, ಕರ್ನಾಟಕಕ್ಕೆ ಕುತ್ತು ಬಂದಾಗ ಬೀದಿಗಿಳಿದು ಜನರೊಂದಿಗೆ ಸೇರಿ ದನಿ ಎತ್ತುತ್ತಿದ್ದವರು. ಅದೇ ರಾಜ್ ಕುಟುಂಬದ ಪುನೀತ್ ತೀರಾ ಇತ್ತೀಚೆಗೆ ಮಾಡಿದ 'ಪೃಥ್ವಿ' ಗಣಿ ಕಳ್ಳರನ್ನೇ ನೇರವಾಗಿ ಉದ್ದೇಶಿಸಿದ್ದ ಸಿನಿಮಾ ಆಗಿತ್ತು.

ಹೀಗೆ ಪರಸ್ಪರ ವಿರುದ್ಧ ಶಿಬಿರಗಳಲ್ಲಿರುವ ಇವರು ಹೀಗೆ ಏಕಾಏಕಿ ಈಗ ಒಂದೆಡೆ ಬರುವಂತಾಗಿರುವುದು ಮಾತ್ರ ಆಶ್ಚರ್ಯವಲ್ಲವೆ? ಇವರನ್ನು ಒಂದೆಡೆ ತರುತ್ತಿರುವುದು ರಾಜ್ ಪ್ರತಿಮೆ ಅನಾವರಣ ಎಂಬ ಅದ್ದೂರಿ ಸಮಾರಂಭ ಮಾತ್ರ ಆಗಿರಬಹುದು. ಆದರೆ ಅದರ ಹಿಂದಿರುವ ಲೆಕ್ಕಾಚಾರಗಳು ಮಾತ್ರ ಅಷ್ಟು ಸರಳವಾಗಿಲ್ಲ.




...ಳ್ಳಾರಿಯ ಅಕ್ರಮ ಗಣಿಗಾರಿಕೆಯ ದುಡ್ಡು ಅನೇಕ ...ರೂಪಾಂತರಗೊಳ್ಳುವುದು ಮುಂದುವರೆಯುತ್ತಿದೆ. ...ಲ್ಲಿನ ಗಣಿ ದುಡ್ಡು ಈಗಾಗಲೇ ಬೃಹತ್ ...ನಗಳಾಗಿ ತಲೆ ಎತ್ತಿವೆ. SUV ಕಾರ್‌ಗಳಾಗಿ ...ಡುತ್ತಿವೆ. ಡಜನ್‌ಗಟ್ಟಲೆ ಹೆಲಿಕಾಪ್ಟರುಗಳಾಗಿ ...ರುತ್ತಿವೆ. ಶಾಸಕರನ್ನು ಖರೀದಿಸಬಲ್ಲ ಸರಕಾಗಿಸಿದೆ. ...ಗಳನ್ನೇ ಆಡಿಸಿ ನೋಡುವ ಬೀಳಿಸಿ ಕೆಡವುವ ...ಮೂ ಆಗಿಸಿದೆ. ಮುಖ್ಯಮಂತ್ರಿಯನ್ನೇ ಸರ್ಕಸ್ ...ರ್ ಆಗಿಸಿದೆ. ಅಷ್ಟೇ ಏಕೆ ಜೋಕರ್‌ಗಳನ್ನೇ ...ರ್‌ಗಳನ್ನಾಗಿಯೂ ಮಾಡಿದೆ.

...ಗ ಇದು ಹೊಸ ಮಜಲನ್ನು ಪ್ರವೇಶಿಸುತ್ತಿದೆ. ...ದೇ ಬಳ್ಳಾರಿಯ ಗಣಿ ಕಳ್ಳತನದ ದುಡ್ಡು ಈಗ ... ನಟರಾಗಿದ್ದ ಡಾ. ರಾಜ್‌ಕುಮಾರ್ ಹಾಗೂ ವಿಷ್ಣುವರ್ಧನ್‌ರ ಪ್ರತಿಮೆಗಳಾಗಿಯೂ ...ರಣಗೊಳ್ಳುತ್ತಿದೆ. ಇಂಥದ್ದೊಂದು ಆಕ್ರಮ ಹಣದಲ್ಲಿ ... ದಂಧೆಕೋರರ ಮುಂದಾಳತ್ವದಲ್ಲಿ ರಾಜ್-ವಿಷ್ಣು ... ತಲೆ ಎತ್ತಬೇಕೆ ಎಂಬ ಪ್ರಶ್ನೆ ಕೇಳಬೇಕಾದ ...ರ್ಯವಿದು.

...ಕೆಂದರೆ ರಾಜ್ ಪ್ರತಿಮೆ ಸ್ಥಾಪನೆಗೆ ...ಕಿರುವುದು ಕುಖ್ಯಾತ ರೆಡ್ಡಿ ...ರ್! ಮತ್ತು ಪ್ರತಿಮೆ ಅನಾವರಣ ...ರಾಂಭದಲ್ಲಿ ಭಾಗವಹಿಸುವುದಾಗಿ ...ರುವುದು ರಾಜ್ ಕುಟುಂಬ!! ...ರ್ನಾಟಕ-ಆಂಧ್ರ ಗಡಿಯನ್ನೇ ...ವರಿ ಮಾಡಿದ ...ಷವಿರುವಾಗ, ಅಕ್ರಮ ...ರಿಕೆಯ ಮೂಲಕ ಕರ್ನಾಟಕದ ... ಸಂಪತ್ತನ್ನೇ ಬಾಚಿ ಲೂಟಿ ...ಸಿದ್ದಾರೆಂಬ ಗಲಾಟೆ ...ರುವಾಗಲೇ ರೆಡ್ಡಿಗಳು ರಾಜ್ ...ಗೂ ವಿಷ್ಣುವರ್ಧನ್‌ಗೆ ...ಬಿದ್ದಿದ್ದಾರೆ.

...ಮತ್ತೊಂದೆಡೆ ರಾಜ್ ಸದಾ ...ರ್ನಾಟಕದ ಬಗ್ಗೆ ಕಾಳಜಿ ...ಟ್ಟುಕೊಂಡಿದ್ದವರು. ಕನ್ನಡ



ರಾಜಕೀಯ ಲಾಭ-ನಷ್ಟದ ಲೆಕ್ಕ, ಸುಳ್ಳರು ಎನಿಸಿಕೊಂಡವರು ಸಜ್ಜನರೆನಿಸಿಕೊಳ್ಳುವ ಯೋಚನೆ, ಕುಸಿದು ಬಿದ್ದಿರುವ ತಮ್ಮ ಇಮೇಜಿಗೆ ಕೊಂಚ face lift ತಂದುಕೊಳ್ಳುವ ಸರ್ಕಸ್....!

ಟೋಟಲ್ಲಾಗಿ ಹೇಳಬೇಕೆಂದರೆ ಇದೂ ಒಂಥರಾ ರೆಡ್ಡಿಗಳ ಅಕ್ರಮ-ಸಕ್ರಮ ಯೋಜನೆ. ಒಂಥರ ಟ್ರಾಪ್. ಆದರೆ ರಾಜ್ ಕುಟುಂಬ ಹಿಂದೆಮುಂದೆ ಯೋಚಿಸದೆ ರೆಡ್ಡಿಗಳು ಹಾಕಿರುವ ಬಲೆಯಲ್ಲಿ ಹೋಗಿಬೀಳುತ್ತಿರುವುದೇ ಒಂದು ದುರಂತ.

ಬಳ್ಳಾರಿ ಟಾಸ್ಕ್ ಫೋರ್ಸ್

ಬಳ್ಳಾರಿಯಲ್ಲೀಗ ಎದ್ದು ಕಾಣುವಂತ ಸಿವಿಲ್ ಕಾಮಗಾರಿಗಳು ನಡೆಯುತ್ತಿವೆ. ದೊಡ್ಡ ದೊಡ್ಡ ರಸ್ತೆಗಳೇನು, ಸೇತುವೆ, ಪಾರ್ಕ್‌ಗಳೇನು, ಏರ್‌ಪೋರ್ಟ್ ಏನು?

ಒಂದಾ ಎರಡಾ?

ಆದರೆ ಇವೆಲ್ಲಾ ಯಾರಿಗಾಗಿ ಆಗುತ್ತಿವೆ, ಯಾರ ಹಣದಿಂದ ನಿರ್ಮಾಣವಾಗುತ್ತಿವೆ?

ಇದಕ್ಕೂ ಒಂದು ಹಿಸ್ಟರಿ ಇದೆ.

2004 ರ ಜೂನ್ ಸುಮಾರಿನಲ್ಲಿ ಈ ರೆಡ್ಡಿಗಳ ಉಸ್ತುವಾರಿಯಲ್ಲೇ ಬಳ್ಳಾರಿ ಅಜೆಂಡಾ ಟಾಸ್ಕ್ ಫೋರ್ಸ್ ಎನ್ನುವ ಒಂದು ಸಮಿತಿ ರಚನೆಯಾಯಿತು. ಜಿಲ್ಲಾಧಿಕಾರಿ ಅದರ ಅಧ್ಯಕ್ಷರಾಗಿಯೂ ಗಣಿಖೋರ ಸೋಮಶೇಖರ ರೆಡ್ಡಿ ಮುಖ್ಯಸ್ಥನಾಗಿಯೂ ಇದ್ದರು. ಈ ಸಮಿತಿ ರಚನೆಯಾದ ತಕ್ಷಣ ಬಳ್ಳಾರಿಯ ಸಮಸ್ತ ಗಣಿ ಉದ್ಯಮಿಗಳಿಂದ ಬಳ್ಳಾರಿಯ ಅಭಿವೃದ್ಧಿಯ ಹೆಸರಿನಲ್ಲಿ ಹಣ ವಸೂಲಿ ಪ್ರಾರಂಭವಾಯಿತು. 2004 ರಲ್ಲಿ 4.64 ಕೋಟಿ, 2007 ರಲ್ಲಿ 2.90 ಕೋಟಿ, 2008 ರಲ್ಲಿ 13 ಕೋಟಿ.... ಹೀಗೆ ಈ ಹಣ ರಾಶಿಯಾಗುತ್ತಾ ಈಗ ಒಟ್ಟಾರೆ 27.74 ಕೋಟಿ ರೂಪಾಯಿ ವಸೂಲಿ ಮಾಡಿಕೊಂಡಿದ್ದಾರೆ. ಆಶ್ಚರ್ಯ ಏನೆಂದರೆ ಹೀಗೆ ವಸೂಲಾದ ಹಣದ ಬಹುಭಾಗವನ್ನು ಬಳ್ಳಾರಿಯ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಖರ್ಚು ಮಾಡಲಾಯಿತು.

ಯಾಕೆ ಗೊತ್ತಾ?

ಅದಿರಿನ ಲಾರಿಗಳು ಸಲೀಸಾಗಿ ಓಡಾಡಲು!

▶▶ 13



ಡಾ.ರಾಜ್ ಪ್ರತಿಮೆ



ವಿಷ್ಣು ಪ್ರತಿಮೆ



ರಾಘವೇಂದ್ರ ರಾಜ್‌ಕುಮಾರ್ ಹೇಳಿದ್ದು....

ರಾಜ್‌ರಂತಹ ಪ್ರಖ್ಯಾತರ ಬಗ್ಗೆ ಸಾಮಾನ್ಯ ಜನ ಹೊಂದಿರುವ ಪ್ರೀತಿ, ಗೌರವಕ್ಕೆ ಲಾಭ-ಲೋಭ ಇರುವುದಿಲ್ಲ, ಆದರೆ ರೆಡ್ಡಿ ಗ್ಯಾಂಗ್ ಲಾಭವಿಲ್ಲದೆ ಉಸಿರಾಟವನ್ನೂ ಮಾಡುವವರಲ್ಲ, ಈ ಗ್ಯಾಂಗ್ ರಾಜ್ ಪ್ರತಿಮೆ ಸ್ಥಾಪಿಸುವ ಹಾಗೂ ರಾಜ್ ಕುಟುಂಬ ಆ ಕಾರ್ಯಕ್ರಮದಲ್ಲಿ ಭಾಗವಹಿಸುವ ಸುದ್ದಿ ಕುರಿತಂತೆ 'ಲಂಕೇಶ್' ಜೊತೆ ಮಾತನಾಡಲು ರಾಘವೇಂದ್ರ ರಾಜ್‌ಕುಮಾರ್ ಸಿಕ್ಕರು.

ಈ ಟೆಲಿಫೋನ್ ಸಂದರ್ಶನದ ಮುಖ್ಯಾಂಶ ಇಲ್ಲಿದೆ.

ಲಂಕೇಶ್: ಬಳ್ಳಾರಿ ರೆಡ್ಡಿಗಳು ರಾಜ್ ಪ್ರತಿಮೆ ಮಾಡಿಸಿದ್ದಾರೆ. ಪುತ್ಥಳಿ ಅನಾವರಣ ಕಾರ್ಯಕ್ರಮಕ್ಕೆ ನೀವೂ ಜೊತೆ ಸೇರುತ್ತಿದ್ದೀರಿ ಅಂತಾ ಸುದ್ದಿ ಇದೆ. ಇದು ಎಷ್ಟರ ಮಟ್ಟಿಗೆ ಸರಿ?

ರಾಘು: ಕರ್ನಾಟಕದ ಅನೇಕ ಕಡೆ ಜನ ಅಪ್ಪಾಜಿ ಪ್ರತಿಮೆ ಮಾಡಿಸಿದ್ದಾರೆ. ರಸ್ತೆಗಳಿಗೆ ಹೆಸರಿಟ್ಟಿದ್ದಾರೆ. ಅವಕಾಶ ಸಿಕ್ಕಾಗೆಲ್ಲಾ ನಾವು ಹೋಗಿ ಭಾಗವಹಿಸಿದ್ದೇವೆ. ಈಗ ಬಳ್ಳಾರಿಯಲ್ಲೂ ನಡೆಯುತ್ತಿರುವುದು ಅದೇ ರೀತಿಯ ಒಂದು ಕಾರ್ಯಕ್ರಮ ಅಷ್ಟೆ.

ಲಂಕೇಶ್: ಇರಬಹುದು. ಆದರೆ ಕರೆಯುವವರ ರಾಜಕೀಯ ಉದ್ದೇಶ ಏನು ಅಂತಾ ಯೋಚಿಸಬೇಕು ಅಲ್ಲವಾ?

ರಾಘು: ನೋ.... ನೋ... ನೋಡಿ ನಮಗೆ ರಾಜಕೀಯ ಇದೆಲ್ಲಾ ಬೇಡ.

ಲಂಕೇಶ್: ನಿಮಗೆ ರಾಜಕೀಯ ಬೇಕಿಲ್ಲದಿರಬಹುದು. ಆದರೆ ಅವರಿಗೆ ರಾಜಕೀಯವೇ ಮುಖ್ಯ ಉದ್ದೇಶ ಆಗಿದೆಯಲ್ಲ!

ರಾಘು: ಇಲ್ಲ ನಮ್ಮ ಫ್ಯಾಮಿಲಿಯಲ್ಲಿ ಯಾರೂ ಆ ಥರ ಯೋಚಿಸೋಲ್ಲ, ಕಳೆದ 50 ವರ್ಷದಿಂದ ನಮ್ಮ ಕುಟುಂಬ ಸಾರ್ವಜನಿಕರ ಜೊತೆ ಒಡನಾಟ ಹೊಂದಿದೆ. ನಾವು ಯಾವುದಾದರೂ ಫಂಕ್ಷನ್‌ಗೆ ಹೋದರೆ ಜನ ಆ ಪಾರ್ಟಿ, ಈ ಪಾರ್ಟಿ ಅಂದುಕೊಳ್ಳಲ್ಲ, ಅಕಸ್ಮಾತ್ ಯಾರಾದರೂ ಹಾಗಂದರೂ ಜನ ನಂಬಲ್ಲ, ಯಾಕಂದ್ರೆ ಅಪ್ಪಾಜೀನೂ ಯಾರೂ ಯಾವ ಉದ್ದೇಶಕ್ಕೇ ಆಗಲಿ ಕರೆಸಿದ್ದಾಗಲೂ ಜನ ಅವೆರಡನ್ನೂ ಬೇರೆಬೇರೆಯಾಗಿ ನೋಡ್ತಾ ಇದ್ರು. ಹಾಗಾಗಿ ನಮ್ಮ ಕುಟುಂಬಾನ ಯಾರ ರಾಜಕೀಯ ಉದ್ದೇಶಕ್ಕೂ ಬಳಸಿಕೊಳ್ಳಲು ಆಗೊಲ್ಲ.

ಲಂಕೇಶ್: ಓ.ಕೆ. ಆದ್ರೂ ರೆಡ್ಡಿಗಳು ಬಂದಾಗ "ಸಂತೋಷ ಒಳ್ಳೆಯದಾಗಲಿ" ಅಂತ ಹೇಳಿ ಸುಮ್ಮನಾಗಬಹುದಿತ್ತಲ್ಲ?

ರಾಘು: ಅದು ನಿಮ್ಮ ಭಾವನೆ, ನಮಗೂ ಅದೇ ಅಭಿಪ್ರಾಯ ಇರಬೇಕೆಂದರೆ ಹೇಗೆ? ಈ ಪಾರ್ಕ್ ಸಾರ್ವಜನಿಕರಿಗಾಗಿ, ಬಳ್ಳಾರಿಯ ಜನರ ಒಳಿತಿಗಾಗಿ ಮಾಡಿದ್ದಾರೆ ಅಂತ ಜನ ಅಂದುಕೊಳ್ಳಬಹುದಲ್ವ. ಇದನ್ನು ನಮ್ಮ ತಂದೆಯವರ ಹೆಸರಿನಲ್ಲಿ ಮಾಡ್ತಿದ್ದಾರೆ. ಯಾರೇ ಕರೆದರೂ ನಾವು ಹೋಗ್ತೀವಿ.

ಲಂಕೇಶ್: ತೀರಾ ಇತ್ತೀಚೆಗೆ ಪುನೀತ್ 'ಪೃಥ್ವಿ' ಸಿನಿಮಾ ಮಾಡಿದರು. ಅದು ಅಕ್ರಮ ಗಣಿಗಾರಿಕೆ ಬಗ್ಗೇನೇ ಇತ್ತಲ್ವಾ?

ರಾಘು: ನೋಡಿ ಜನ ರಾಮಾಯಣ ಸರೀನೊ, ಮಹಾಭಾರತ ಸರೀನೊ ಅಂತಾರೆ. ಪೃಥ್ವಿಯದ್ದು ಒಂದು ಸಿನಿಮಾ ಪಾತ್ರ ಅಷ್ಟೆ. ಗಂಧದ ಗುಡಿ ತರ ಸಿನಿಮಾ ಅದು.

ಲಂಕೇಶ್: ನೀವೂ ಸಾರ್ವಜನಿಕ ಜೀವನದಲ್ಲೇ ಇದ್ದೀರಿ. ಕೊಂಚ ಎಚ್ಚರದಿಂದ ಇರಬೇಕಲ್ವ?

ರಾಘು: ನಾವೆಲ್ಲಾ 50 ವರ್ಷದಿಂದ ಹೀಗೇ ಬಂದಿದ್ದೀವಿ.

ಲಂಕೇಶ್: ರೆಡ್ಡಿಗಳಿಗೆ ಯಾವ ಉದ್ದೇಶ ಇರಬಹುದು? ಅವರ ವ್ಯವಹಾರ-ಅವ್ಯವಹಾರ ಬಗ್ಗೆ ನಿಮಗೆ ಗೊತ್ತಾ?

ರಾಘು: ಅವರ ಉದ್ದೇಶ ನಮಗೆ ಬೇಕಿಲ್ಲ, ವ್ಯವಹಾರ ಇತ್ಯಾದಿ ಚೆಕ್ ಮಾಡೋಕೆ ಸರ್ಕಾರ ಇದೆ. ಪ್ರತಿಮೆ ಅನಾವರಣಕ್ಕೆ ಮಾತ್ರ ಕರೆಯುತ್ತಿದ್ದಾರೆ. ಅಮ್ಮನನ್ನು ಕೇಳಿದ್ದಾರೆ. ನಮ್ಮ ಮನೆಗೆ ಬಂದಿದ್ದ ಅತಿಥಿ ಅವರು. ಅಪ್ಪಾಜಿ ಪ್ರತಿಮೆ ಕಾರ್ಯಕ್ರಮಕ್ಕೆ ಮನೆಯಿಂದ ಯಾರಾದರೂ ಬನ್ನಿ ಅಂದಿದ್ದಾರೆ.

ಲಂಕೇಶ್: ರೆಡ್ಡಿಗಳಿಂದ ಕರ್ನಾಟಕ-ಆಂಧ್ರ ಗಡಿ ವಿವಾದವೂ ಸೃಷ್ಟಿಯಾಗಿದೆ.

ರಾಘು: ನೋಡಿ ನಾವು ಹೋಗದಿದ್ದರೆ ಆಗಲೂ ನಮಗೆ ರಾಜಕೀಯ ಯಾಕೆ ಬೇಕಿತ್ತು ಅಂತಾರಲ್ಲ ಜನ? ಯಾರೇ ಕರೆದರೂ ನಾವು ಹೋಗ್ತೀವಿ. ಟೈಂ ಇದ್ದರೆ ನಾವು ಮೂವರಲ್ಲಿ ಯಾರಾದರೂ ಹೋಗ್ತೀವಿ. ಜನ ನಮ್ಮನ್ನು ತಪ್ಪು ತಿಳಿಯೋಲ್ಲ, ಈ 50 ವರ್ಷದಲ್ಲಿ ಯಾರೂ ಹಾಗೆ ಭಾವಿಸಿಲ್ಲ, ನಾವು ಪ್ರತಿಯೊಂದರಲ್ಲೂ ಕರೆದವರ ಉದ್ದೇಶ ಹುಡುಕ್ತಾ ಹೋದರೆ ನಾವು ಜನರ ಜೊತೆ ಇರೋದು ಹೇಗೆ ಆಗುತ್ತಾ.....?

ಗಣಿಖೋರರ ಹಣ... ಚೀಟರ್‌ಗಳೇ ನಾಯಕರು

ಬಳ್ಳಾರಿಯಲ್ಲಿರುವ ರಾಜ್ ಪಾರ್ಕ್-ಪ್ರತಿಮೆ, ವಿಷ್ಣುವರ್ಧನ್ ಪಾರ್ಕ್- ಪ್ರತಿಮೆಗಳೆಲ್ಲಾ ಗಣಿಖೋರರ ಅಕ್ರಮ ಹಣದಿಂದಲೇ ಆಗುತ್ತಿರುವುದೊಂದು ಖೇದಕರ ಸಂಗತಿ.


ಜಿಂದಾಲ್, ಕಿರ್ಲೋಸ್ಕರ್, ಎಂಎಸ್‌ಐಎಲ್ 12 ಲಕ್ಷ, ಹೊಸಪೇಟೆಯ ಜಿ.ಜಿ. ಬ್ರದರ್ಸ್ 38 ಸಾವಿರ, ಕೆಎಂಎಲ್‌ಎಲ್ 3 ಲಕ್ಷ, ಬಾಲಾಜಿ ಮೈನ್ಸ್ 40 ಸಾವಿರ, ಸಂಡೂರ್ ಮ್ಯಾಂಗನೀಸ್ 2.40 ಲಕ್ಷ, ಭಾರತಿ ಮೈನ್ಸ್ 2 ಲಕ್ಷ ರೂ- ಹೀಗೆ ಡಜನ್‌ಗಟ್ಟಲೆ ಗಣಿ ಕಂಪನಿಗಳಿಂದ ಹಣ ವಸೂಲಿ ಮಾಡಲಾಗಿದೆ. ಈ ದುಡ್ಡಲ್ಲೇ ಈಗ ರಾಜ್ ಹಾಗೂ ವಿಷ್ಣು ಪ್ರತಿಮೆಗಳಾಗಿವೆ.

ಒಂದು ವಿಪರ್ಯಾಸ ಗಮನಿಸಿ. ಇದೇ ರೆಡ್ಡಿ ಗ್ಯಾಂಗ್‌ನ ಗೂಂಡಾ ಶ್ರೀರಾಮುಲು ಹೇಳಿಕೊಳ್ಳಲಿಕ್ಕೆ ರಾಜ್ಯ ಆರೋಗ್ಯ ಮಂತ್ರಿ. ರಾಜ್ಯಪೂರಾ ಜನ ಚಿಕನ್ ಗುನ್ಯಾ H1N1 ವೈರಲ್ ಜ್ವರಗಳಿಂದ ಬಳಲುತ್ತಿದ್ದಾರೆ. ರೋಗಿಗಳಿಗೆ ಅಗತ್ಯ ಔಷಧ ಒದಗಿಸಲು ರಾಮುಲುಗೆ ಹಣ ಒದಗಿಸಲಾಗುವುದಿಲ್ಲ, ಆದರೆ ಪ್ರತಿಮೆ-ಪಾರ್ಕುಗಳಿಗಾದರೆ ಇವರು ಎಷ್ಟು ಕೋಟಿ ಬೇಕಾದರೂ ವಸೂಲಿ ಮಾಡಿಬಿಡುತ್ತಾರೆ.

ತೀರಾ ಇತ್ತೀಚೆಗೆ ಬಳ್ಳಾರಿಯಲ್ಲೇ ಚಾಮುಂಡೇಶ್ವರಿ ಹಾಗೂ ಮಹಿಷಾಸುರ ದೇವರ ವಿಗ್ರಹಗಳನ್ನು ಇದೇ ಗ್ಯಾಂಗ್ ಪ್ರತಿಸ್ಥಾಪಿಸಿದೆ. ತಿರುಪತಿ ತಿಮ್ಮಪ್ಪನಿಗೆ 42 ಕೋಟಿ ರೂಪಾಯಿಗಳ ವಜ್ರದ ಕಿರೀಟ ಹಾಕಿದೆ. ಆ ಹಣ ಕಳ್ಳ ದಂಧೆಯದಾದ ಕಾರಣ ಆದನ್ನೂ ವಜ್ರದ ಟೋಪಿ ಅಂದುಕೊಳ್ಳಬಹುದು.

ಸಿದ್ದರಾಮಯ್ಯ ಬಳ್ಳಾರಿಗೆ ದಂಡೆತ್ತಿ ಹೋದಾಗ ಇದೇ ರಾಮುಲು ತಲೆ ಗುಂಡು ಹೊಡೆಸಿಕೊಂಡು ಬಳ್ಳಾರಿ ಜನರನ್ನು ಎತ್ತಿಕಟ್ಟಲು ನೋಡಿದ್ದ. ಬಳ್ಳಾರಿಯ ಇತಿಹಾಸ, ಸಾಂಸ್ಕೃತಿಕ ಪರಂಪರೆಗಳ ಬಗ್ಗೆ ಬಾಯಿಪಾಠ ಮಾಡಿದ ಮಾತುಗಳಾಡಿದ್ದ, ಅದರ ಮುಂದುವರೆದ ಭಾಗವೇ ಈಗ ರಾಜ್-ವಿಷ್ಣು ಪ್ರತಿಮೆಗಳ ಅನಾವರಣ. ಅದೂ ಕೂಡ ಕದ್ದ ಹಣದಲ್ಲಿ ಮಾಡಿಸಿರುವ ಪ್ರತಿಮೆಗಳು?

ದೂರ ತೀರಕೆ ಮುರಳಿ ಯಾನ....



ಅದು 1983. ಮಲ್ಲೇಶ್ವರ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಸಿನಿಮಾ ಮುಹೂರ್ತ ನಡೆದಿತ್ತು. ಚಿತ್ರದ ನಿರ್ದೇಶಕ 'ಲೈಟ್ಸ್ ಆನ್, ಆಕ್ಷನ್' ಎಂದು ಹೇಳಿ, ಕ್ಲಾಪ್‌ಬಾಯ್ ಕ್ಲಾಪ್ ಮಾಡಿದ ತಕ್ಷಣ ಈ ಯುವಕ ಕ್ಯಾಮರಾ ಮುಂದೆ ನಿಂತು ತನ್ನ ಮೊತ್ತ ಮೊದಲು ದೃಶ್ಯದಲ್ಲಿ ತನ್ನ ಶಕ್ತಿ ಮೀರಿ ನಟಿಸಿದ. ಅದು ಆತನ ಮೊದಲನೇ ಚಿತ್ರವಾಗಿತ್ತು. ಈ ಯುವಕನ ನಟನೆ ಕಂಡು ಅಲ್ಲಿದ್ದವರೆಲ್ಲ ಚಪ್ಪಾಳೆ ಹೊಡೆದು ಸಂಭ್ರಮಿಸಿದರು. ಸಹಜವಾಗಿಯೇ ಆ ಯುವಕನ ಮುಖದಲ್ಲಿ ಮಂದಹಾಸ ಮೂಡಿತು.

ಹೀಗೆ ಮೊದಲ ಟೇಕ್ ಓಕೆ ಆಗುತ್ತಿದ್ದಂತೆಯೇ ಅಲ್ಲಿ ನೆರೆದಿದ್ದ ಜನರ ಮಧ್ಯೆ ಇದ್ದ ಕಿಡಿಗೇಡಿಯೊಬ್ಬ "ಏನೋ ಕರಿಯಾ, ನೀನಾ ಹೀರೋ" ಎಂದು ಜೋರಾಗಿ ಕೂಗಿಬಿಟ್ಟ. ಸಂಭ್ರಮದಿಂದ ಅರಳಿ ನಿಂತಿದ್ದ ಆ ಯುವಕ ಈ ಟೀಕೆಯನ್ನು ಕೇಳಿದ ಕೂಡಲೇ ಆತನ ಮುಖ ಬಾಡಿತು. ಆ ಕ್ಷಣ ಆತ ತನ್ನ ಮನಸ್ಸಿನಲ್ಲೇ ತೀರ್ಮಾನಿಸಿದ: "ನಾನು ಕಪ್ಪಗಿದ್ದರೂ ಹೀರೋ ಆಗಿ ದೊಡ್ಡ ಹೆಸರು ಮಾಡಬೇಕು."

ಆ ಛಲದಿಂದಾಗಿಯೇ ಆ ಯುವಕ ತನಗೆ ಸಿಕ್ಕ ಪ್ರತಿಯೊಂದು ಅವಕಾಶವನ್ನೂ ಮೆಟ್ಟಿಲಾಗಿಸಿಕೊಂಡು ದಕ್ಷಿಣ ಭಾರತದ ಚಿತ್ರರಂಗದಲ್ಲೇ ದೊಡ್ಡ ಹೆಸರು ಮಾಡಿದ. ಆ ಕಪ್ಪು ಯುವಕನ ಹೆಸರೇ ಮುರಳಿ.

ಯುವಕನಾಗಿದ್ದಾಗಲೇ ಚಿತ್ರಲೋಕಕ್ಕೆ ಕಾಲಿಟ್ಟ ಮುರಳಿ

> ಹೆಸರು ಮಾಡಿರುವ ನಿರ್ದೇಶಕ ಅಥವಾ ನಟರ ಮಕ್ಕಳು ಯೌವನಕ್ಕೆ ಹೆಜ್ಜೆ ಇಡುತ್ತಿದ್ದಂತೆ ಸೀದಾ ತಮ್ಮ ಮುಖಕ್ಕೆ ಬಣ್ಣ ಹಚ್ಚಿಕೊಂಡು ತೆರೆಯ ಮೇಲೆ ವಿಜೃಂಭಿಸಲು ಇಷ್ಟಪಡುತ್ತಾರೆ. ಅದಕ್ಕೆ ಮುನ್ನ ಮೈ-ಕೈ ಹುರಿಗೊಳಿಸಿಕೊಳ್ಳಲು ವ್ಯಾಯಾಮ, ಕಸರತ್ತುಗಳಲ್ಲಿ ತೊಡಗುತ್ತಾರೆ. ಆದರೆ ಮುರಳಿ ಅದೆಲ್ಲದಕ್ಕೂ ಭಿನ್ನ. ಈತ ಚಿಕ್ಕವನಾಗಿದ್ದಾಗಲೇ ಸಿನಿಮಾ ತಂತ್ರಜ್ಞನಾಗಬೇಕೆಂಬ ತಹತಹ ಈತನಲ್ಲಿ ಮೊಳಕೆಯೊಡೆದಿತ್ತು.

ಹೀರೋ ಹೀರೋ ಹೀರೋ ನಾನೇ ನಾನೇ ನಾನೇ....

ತನ್ನ ವೃತ್ತಿಜೀವನದಲ್ಲಿ ನೂರಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸಿ, ಹಲವಾರು ಹಿಟ್ ಚಿತ್ರಗಳನ್ನು ನೀಡಿ, ಸಾವಿರಾರು ಅಭಿಮಾನಿಗಳನ್ನು ಪಡೆದು, ಹಲವಾರು ಪ್ರಶಸ್ತಿಗಳನ್ನು ಗಳಿಸಿ, ಈಗ ತಮ್ಮ ಮಗನನ್ನು ಚಿತ್ರರಂಗಕ್ಕೆ ಪರಿಚಯಿಸಿ ತಾವು ಇನ್ನೂ ಹಲವಾರು ಚಿತ್ರಗಳಲ್ಲಿ ನಟಿಸಲು ಒಪ್ಪಿಕೊಂಡಿದ್ದರೂ... ಇದೇ ಬುಧವಾರದ ಮುಂಜಾನೆ, ಅವೆಲ್ಲವನ್ನು ಮಧ್ಯದಲ್ಲೇ ನಿಲ್ಲಿಸಿ, ಇನ್ನೂ ನಲವತ್ತಾರರ ಚಿಕ್ಕವಯಸ್ಸಿನಲ್ಲೇ ಕಣ್ಣುಮುಚ್ಚಿದ್ದಾರೆ.

ಮುರಳಿಯನ್ನು ನೆನೆದಾಕ್ಷಣ ಕಣ್ಣೆದುರಿಗೆ ಬರುವುದು ಅವರ ಅದ್ಭುತ ಕಾಂತಿಯ ಕಪ್ಪು ಮೊಗ, ಅದರ ತುಂಬಾ ನಗೆ, ಮನಕಲಕುವ ಮನೋಜ್ಞ ಅಭಿನಯ...

ಆಗಿನ್ನೂ ಕನ್ನಡ ಚಿತ್ರರಂಗದ ಬೇರು ಮದ್ರಾಸಿನಲ್ಲೇ ಇದ್ದುದರಿಂದ ಖ್ಯಾತ ಚಿತ್ರ ನಿರ್ದೇಶಕ ಸಿದ್ದಲಿಂಗಯ್ಯನವರ ಕುಟುಂಬ ಕೂಡಾ ಅಲ್ಲೇ ನೆಲೆ ಕಂಡುಕೊಂಡಿತ್ತು, ಹೀಗಾಗಿ ಮುರಳಿ ಹುಟ್ಟಿ ಬೆಳೆದದ್ದೆಲ್ಲಾ ಮದ್ರಾಸಿನಲ್ಲೇ. ಐದನೇ ತರಗತಿಯ ತನಕ ತಮಿಳು ಮೀಡಿಯಂನಲ್ಲೇ ಓದಿದ ಮುರಳಿ ನಂತರ ಬೆಂಗಳೂರಿನಲ್ಲಿ ಆರರಿಂದ ಹತ್ತನೇ ತರಗತಿಯವರೆಗೂ ವಿದ್ಯಾಭ್ಯಾಸ ಮುಂದುವರೆಸಿದರು.

ಸಾಮಾನ್ಯವಾಗಿ ಹೆಸರು ಮಾಡಿರುವ ನಿರ್ದೇಶಕ ಅಥವಾ ನಟರ ಮಕ್ಕಳು ಯೌವನಕ್ಕೆ ಹೆಜ್ಜೆ ಇಡುತ್ತಿದ್ದಂತೆ ಸೀದಾ ತಮ್ಮ ಮುಖಕ್ಕೆ ಬಣ್ಣ ಹಚ್ಚಿಕೊಂಡು ತೆರೆಯ ಮೇಲೆ ವಿಜೃಂಭಿಸಲು ಇಷ್ಟಪಡುತ್ತಾರೆ. ಅದಕ್ಕೆ ಮುನ್ನ ಮೈ-ಕೈ ಹುರಿಗೊಳಿಸಿಕೊಳ್ಳಲು ವ್ಯಾಯಾಮ, ಕಸರತ್ತುಗಳಲ್ಲಿ ತೊಡಗುತ್ತಾರೆ. ಆದರೆ ಮುರಳಿ ಅದೆಲ್ಲದಕ್ಕೂ ಭಿನ್ನ, ಈತ ಚಿಕ್ಕವನಾಗಿದ್ದಾಗಲೇ ಸಿನಿಮಾ ತಂತ್ರಜ್ಞನಾಗಬೇಕೆಂಬ ತಹತಹ ಈತನಲ್ಲಿ ಮೊಳಕೆಯೊಡೆದಿತ್ತು, ಉಂಡು, ಆಡಿ, ಮಲಗುವ ವಯಸ್ಸಿಗೇ ಮುರಳಿ ಸಿನಿಮಾದ ಒಳ-ಒಳಹುಗಳನ್ನು ತಿಳಿದುಕೊಳ್ಳಲು ಆರಂಭಿಸಿದ್ದ. ಹದಿನಾಲ್ಕನೇ ವಯಸ್ಸಿನಲ್ಲೇ ತನ್ನ ತಂದೆ ಸಿದ್ದಲಿಂಗಯ್ಯನವರಿಗೆ ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡಲಾರಂಭಿಸಿದ್ದ. ಜೊತೆಜೊತೆಗೆ ಸಂಕಲನವನ್ನೂ ಕಲಿಯಲು ಆರಂಭಿಸಿದ್ದ. ಆಗಲೇ ಮುರಳಿ ಅತಿ ಕಿರಿ ವಯಸ್ಸಿನ ಸಹಾಯಕ ನಿರ್ದೇಶಕ ಮತ್ತು ಸಂಕಲನಕಾರ ಎಂಬ ಹೆಗ್ಗಳಿಕೆ ಪಡೆದಿದ್ದ.

ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್, ಖ್ಯಾತ ಖಳ ನಟ ಆನಂದ್‌ರಾಜ್, ತಮಿಳಿನ ಮಹಾನ್ ನಟ ಮುತ್ತುರಾಮನ್ ಅವರ ಮಗ ಕಾರ್ತಿಕ್ ಮತ್ತು ಮುರಳಿ ಎಲ್ಲರೂ ಅಡ್ಯಾರ್ ಫಿಲ್ಮ್ ಇನ್‌ಸ್ಟಿಟ್ಯೂಟ್‌ನಲ್ಲಿ ಒಟ್ಟೊಟ್ಟಿಗೇ ಕೋರ್ಸ್ ಮಾಡಿದವರು. ಅಲ್ಲಿ ಸಿನಿಮಾ ನಿರ್ದೇಶನವನ್ನು ಕಲಿತ ಮುರಳಿ ತನ್ನ ತಂದೆ ಸಿದ್ದಲಿಂಗಯ್ಯನವರು ನಿರ್ದೇಶಿಸುತ್ತಿದ್ದ ಎಲ್ಲ ಚಿತ್ರಗಳಿಗೂ ಸಹಾಯಕರಾಗಿ ದುಡಿಯುತ್ತಿದ್ದರು. "ನೀನು ನನ್ನ ಮಗ ಅನ್ನೋ ಕಾರಣಕ್ಕೆ ನಿನಗೆ ಯಾವುದೇ ವಿಶೇಷ ಗೌರವಗಳಿರುವುದಿಲ್ಲ, ನನ್ನೊಟ್ಟಿಗೆ ಕೆಲಸ ಮಾಡುವ ಇತರೇ ಸಹ ನಿರ್ದೇಶಕರಂತೆಯೇ ನೀನೂ ಕೂಡ. ಅವರಿಗೆ ಕೊಡುವ ಸಂಬಳವನ್ನೇ ನೀನೂ ಪಡೆಯಬೇಕು" ಎಂದು ಸಿದ್ದಲಿಂಗಯ್ಯನವರು ಮೊದಲೇ ಮಗನಿಗೆ ಕಿವಿಮಾತು ಹೇಳಿದ್ದರಂತೆ. ಎಷ್ಟೋ ವರ್ಷಗಳ ತನಕ ಸಿದ್ದಲಿಂಗಯ್ಯನವರ ಸಹಾಯಕನಾಗಿ ಚುರುಕು ಚುರುಕಾಗಿ ಕೆಲಸ ಮಾಡುತ್ತಿದ್ದ ಯುವಕ ಅವರ ಸ್ವಂತ ಮಗ ಎಂಬುದೇ ಚಿತ್ರರಂಗದವರಿಗೆ ಗೊತ್ತಿರಲಿಲ್ಲವಂತೆ.

ಒಂದು ದಿನ ಇದ್ದಕ್ಕಿದ್ದ ಹಾಗೆ ತಮ್ಮ ಮಗನನ್ನು ಕರೆದ ಸಿದ್ದಲಿಂಗಯ್ಯ "ನಾನು ಹೊಸದೊಂದು ಸಿನಿಮಾ ಆರಂಭಿಸುತ್ತಿದ್ದೇನೆ. ಆ ಚಿತ್ರಕ್ಕೆ ಹೊಸ ಹೀರೋ ಒಬ್ಬನನ್ನು ಆಯ್ಕೆ ಮಾಡಿಕೊಂಡಿದ್ದೇನೆ" ಅಂದರಂತೆ. "ಹೌದಾ. ಆಯ್ತು..." ಎಂದು ತಲೆ ಅಲ್ಲಾಡಿಸಿದ ಮುರಳಿಯನ್ನೇ ನೋಡಿದ ಸಿದ್ದಲಿಂಗಯ್ಯ "ಆ ಹೀರೋ ನೀನೇ" ಎಂದುಬಿಟ್ಟರಂತೆ. ತನ್ನ ಕಿವಿಯನ್ನೇ ನಂಬದಂತಾದ ಯುವಕ ಮುರಳಿ ತನ್ನ ತಂದೆಯ ಆಜ್ಞೆಯಂತೆ ತಮ್ಮ ಮುಖಕ್ಕೆ ಬಣ್ಣ ಹಚ್ಚಲು ಮುಂದಾದರು. ಆಗ ಶುರುವಾಗಿದ್ದೇ 'ಪ್ರೇಮಪರ್ವ'...

ಹಾಗೆ ನೋಡಿದರೆ ಮುರಳಿಯ ತಂದೆ ಸಿದ್ದಲಿಂಗಯ್ಯ ಅವರೇ ಹೀರೋ ಆಗಬೇಕು ಎಂದು ಕನಸು ಕಂಡು ಮದ್ರಾಸು ಸೇರಿದವರು. ಆದರೆ ಹೀರೋ ಆಗುವ ಅರ್ಹತೆ ಕಡಿಮೆಯಿದ್ದುದರಿಂದಲೋ ಏನೋ ಸಿದ್ದಲಿಂಗಯ್ಯನವರಿಗೆ ಆ ಅವಕಾಶ ಮರೀಚಿಕೆಯಾಯಿತು. ಆದರೆ ನಿರ್ದೇಶಕರಾಗಿ ಸಿದ್ದಲಿಂಗಯ್ಯನವರಿಗೆ ಅವಕಾಶಗಳು ಬಂದವು, ಯಶಸ್ಸೂ ಕೈಹಿಡಿಯಿತು. ವಿಚಿತ್ರವೆಂದರೆ ಅವರ ಮಗ ಮುರಳಿ ತಾನೊಬ್ಬ ನಿರ್ದೇಶಕನಾಗಬೇಕು ಎಂದು ಬಂದು ಒಬ್ಬ ಯಶಸ್ವೀ ನಾಯಕನಟನಾದದ್ದು.


1983ರಲ್ಲಿ 'ಪ್ರೇಮಪರ್ವ' ಚಿತ್ರದಿಂದ ನಾಯಕನಟನಾದ ಮುರಳಿ ನಂತರ 'ಅಜೇಯ', 'ಪ್ರೇಮಗಂಗೆ', 'ಅಜಯ್ ವಿಜಯ್', 'ಸಂಭವಾಮಿ ಯುಗೇ ಯುಗೇ' ಚಿತ್ರಗಳಲ್ಲಿ ನಟಿಸಿದರು. ಆ ಹೊತ್ತಿಗಾಗಲೇ ಕನ್ನಡದಿಂದ ತಮಿಳು ಸಿನಿಮಾಗೆ ಹೋಗಿ ಅಲ್ಲಿ ಸೂಪರ್ ಸ್ಟಾರ್ ಆಗಿದ್ದರು ರಜನಿಕಾಂತ್. ಆಗ ರಜನಿ ಪರ ತಮಿಳು ನಾಡಿನಲ್ಲಿ ದೊಡ್ಡ ಅಲೆ ಇದ್ದುದರಿಂದ ಹಾಗು ಅವರಂತೆಯೇ ಮುರಳಿ ಕೂಡ ಕಪ್ಪಗಿದ್ದುದರಿಂದ ತಮಿಳಿನಲ್ಲೂ ನಟಿಸುವ ಅವಕಾಶಗಳು ಮುರಳಿಗೆ ದೊರಕಿದವು.

ಅಮೀರ್‌ಜಾನ್ ನಿರ್ದೇಶಿಸಿದ್ದ 'ಪೂವಿಲಂ... ಚಿತ್ರದಿಂದ ಮುರಳಿ ತಮಿಳಿನಲ್ಲಿ ಹೀರೋ ಆಗಿ ... ಕೊಟ್ಟರು. ನಂತರ ಕನ್ನಡ ಚಿತ್ರಗಳತ್ತ ತಿರುಗಿ... ನೋಡದಷ್ಟು ಬ್ಯುಸಿಯಾಗಿಬಿಟ್ಟರು ಮುರಳಿ. ಅವ... 'ವೆಟ್ರಿ ಮಲೈ', 'ಸಿಲಂಬು', 'ಇದಯಮ್', 'ತಂಗ... 'ಪೂಮಣ', 'ಪೊರ್‌ಕಾಲಂ', 'ವೆಟ್ರಿಕೊಡಿಕಟ್ಟು'ಗಳಂ... ಅನೇಕ ಸೂಪರ್ ಹಿಟ್ ಸಿನಿಮಾಗಳಲ್ಲಿ ಮುರಳಿ ನಟಿಸಿದ... ರಂಭಾ, ಸಿಮ್ರನ್, ದೇವಯಾನಿ, ಮೀನಾ ಸೇರಿದ... ಬಹುತೇಕ 80ರ ಮತ್ತು 90ರ ಎಲ್ಲ ನಾಯಕ ನಟಿಯ... ಮುರಳಿ ಜೊತೆ ನಟಿಸಿದ್ದರು. ಹಳ್ಳಿ ಹೈದನ ಪಾತ್ರ... ಮತ್ತು ಕೌಟುಂಬಿಕ ಚಿತ್ರಗಳಿಗೆ ಮುರಳಿ ಫೇಮಸ್ ಆಗಿದ... 'ಕರುಪ್ಪು ತಾ ಎನಕ್ಕು ಪುಡಿಚ್ಚ ಕಲರ್' (ಕಪ್ಪು ನ... ಇಷ್ಟವಾದ ಬಣ್ಣ, ದೇವರ ಶಿಲೆಯೂ ಕಪ್ಪು, ಕಾಡಿಗೆಯ... ಕಪ್ಪು, ರಜನೀಕಾಂತ್ ಕೂಡಾ ಕಪ್ಪು, ನೀನೂ ಕ... ಎಂದು ನಾಯಕಿ ಮಾಳವಿಕಾ ಮುರಳಿಯನ್ನು ಕುರಿ... ಹಾಡುವ ಹಾಡು ಇವತ್ತಿಗೂ ತಮಿಳರ ಬಾಯ... ನಲಿದಾಡುತ್ತಿದೆ...

2006ರಲ್ಲಿ ಬಂದ 'ಪಾಸ ಕಿಳಿಗಳ್' ತನಕ ಮುರಳಿ... ಸಿನಿಮಾ ಓಟ ನಿಂತೇ ಇರಲಿಲ್ಲ, ನಂತರದ ದಿನಗ... ಹೊಸಬರ ಅಲೆಯಲ್ಲಿ ಹಳಬರಿಗೆ ಅವಕಾಶಗ... ಕಮ್ಮಿಯಾಗುತ್ತಾ ಬಂದವು. ಹೀಗಾಗಿ ಕೊರಗಿಗೆ ... ಮುರಳಿ ದಿನೇದಿನೇ ಅತಿಯಾಗಿ ಕುಡಿಯಲಾರಂಭಿಸಿದ... ಆದರೆ ಅಷ್ಟೊತ್ತಿಗಾಗಲೇ ಅವರ ಮಗ ಅಥರ್ವ ... ಬಂದಿದ್ದರಿಂದ ಆತನನ್ನು ಚಿತ್ರರಂಗಕ್ಕೆ ಪರಿಚಯಿಸುವ... ಮುರಳಿಯ ಕನಸಾಗಿತ್ತು, ಅದೂಅಲ್ಲದೆ, ತನ್ನಂತೆಯೇ ... ಮಗ ಕೂಡಾ ಕನ್ನಡ ಚಿತ್ರರಂಗದಿಂದಲೇ ಆರಂಗೇ... ಮಾಡಬೇಕು ಎಂಬುದೂ ಅವರ ಬಯಕೆಯಾಗಿತ್ತು. ಆ... ತಮಿಳಿನಲ್ಲಿ ಅವಕಾಶ ಒದಗಿಬಂದಿದ್ದರಿಂದ 'ವಾನ ಕಾ... ಚಿತ್ರದ ಮೂಲಕ ಆತ ನಟನೆಗೆ ಇಳಿದ. ಈ ಚಿತ್ರ ಆ... ಅರರಂದು ಬಿಡುಗಡೆಯಾಗಿತ್ತು. ಈ ಸಿನಿಮಾ ಬಿಡುಗ... ಮುನ್ನ ಬೆಂಗಳೂರಿಗೆ ಬಂದು ಇಲ್ಲಿನ ಸಿನಿಮಾ ಪತ್ರ... ರನ್ನೆಲ್ಲಾ ಕರೆಸಿ ತಮ್ಮ ಮಗನನ್ನು ತುಂಬ ಹೆಮ್ಮೆಯಿ... ಪರಿಚಯಿಸಿದ್ದರು ಮುರಳಿ. "ಇನ್ನು ಸ್ವಲ್ಪ ದಿನಗ... ಕನ್ನಡದಲ್ಲಿ ನನ್ನ ಮಗನಿಗಾಗಿ ನಾನೇ ಸಿನಿಮಾವೊಂ... ನಿರ್ಮಿಸುತ್ತಿದ್ದೇನೆ. ಅದರ ಎಲ್ಲ ಸಿದ್ಧತೆಗಳೂ ನಡೆಯುತ್ತಿ... ಎಂದು ಮುರಳಿ ಆತ್ಮವಿಶ್ವಾಸದ ಮಾತುಗಳಾಡಿದ್ದರು... ಸಂದರ್ಭದಲ್ಲಿ.

ಮರಳಿ ಬಾರದ ಊರಿಗೆ ಮುರ...

ಅಂದು ಮುರಳಿ ಆಡಿದ ಮಾತುಗಳು ಇ... ಮನಸ್ಸಿನಿಂದ ಮರೆಯಾಗಿಲ್ಲ. ಆದರೆ ಆ ಸಿನಿ... ಆರಂಭವಾಗುವದಕ್ಕೆ ಮುನ್ನವೇ ಮುರಳಿಯೇ ಮರೆಯ... ಬಿಟ್ಟಿದ್ದಾರೆ.



ಸ್ವತಃ ಮುರಳಿ ನಾಯಕನಾಗಿ ನಟಿಸಬೇಕಿದ್ದ ತಮಿ... 'ಎನ್ ರಾಸಿ ನಲ್ಲ ರಾಸಿ' (ನನ್ನ ರಾಶಿ ಅದೃಷ್ಟವಂತ ... ಚಿತ್ರ ಕೂಡಾ ಇನ್ನೇನು ಸೆಟ್ಟೇರಬೇಕಿತ್ತು, ಆದರೆ ಮುರ... ದುರಾದೃಷ್ಟ, ಈ ಬಾರಿ ರಾಶಿ ಅವರಿಗೆ ಕೈ ಕೊಟ್ಟ...

ತಮ್ಮಿಡೀ ಬದುಕನ್ನು ಸಿನಿಮಾಕ್ಕಾಗಿಯೇ ಸವ... 'ಬಂಗಾರದ ಮನುಷ್ಯ' ಸಿದ್ದಲಿಂಗಯ್ಯ ಮತ್ತು ಅ... ಕುಟುಂಬದವರಿಗೆ ಮುರಳಿಯ ಅಗಲಿಕೆ ದೊಡ್ಡ ಆ... ದಂತೆ ಬಂದೆರಗಿದೆ... ಆ ನೋವನ್ನು ತಡೆಯುವ ... ಅವರಿಗೆ ದೊರಕಬೇಕಷ್ಟೆ...

• ಅರುಣ್ ಕುಮಾರ್
arunodayagc@gmail.c...

6

ಬೇಲೇಕೇರಿ ಬಂದರು ಭಾನಗಡಿ

ಇವರಿಬ್ಬರು ಬೇಕಾದವರೇ. ಹಾಗೆಯೇ ಕೇಂದ್ರ ಪತ್ತೆದಳಕ್ಕೂ ಅವಶ್ಯ ಇರುವಂಥ ಚಟುವಟಿಕೆಯ ಗಣಿ ಉದ್ಯಮಪತಿಗಳಿವರು. ಬಳ್ಳಾರಿ ಪೊಲೀಸರಿಗಂತೂ ತುಂಬ 'ಅವಶ್ಯ'ವಿರುವವರು.

ತಮ್ಮ ಅಕ್ರಮ ಅದಿರು ಸಾಮ್ರಾಜ್ಯ ಕಾಯುವ ಈ ನಿಯತ್ತಿನ ಕಾವಲುಗಾರರಿಗೆ ಬಾಸ್ ರೆಡ್ಡೀಸ್‌ಗಳು ಇನಾಮಾಗಿ 'ರಿಸ್ಕ್ ಟ್ರಾನ್ಸ್‌ಪೋರ್ಟ್' ದಂಧೆ ಹಚ್ಚಿಕೊಟ್ಟಿದ್ದಾರೆ. ಬಳ್ಳಾರಿ ಬದಿಯ ಗಣಿಗಳಿಂದ ಕಾರವಾರ-ಬೇಲೇಕೇರಿ-ಮಂಗಳೂರು ಬಂದರಿಗೆ ಬರುವ ಅದಿರು ಹೊತ್ತ ಲಾರಿಗಳಿಗೆ ಎದುರಾಗುವ 'ರಿಸ್ಕ್' ನಿಭಾಯಿಸುವುದು ಖಾರಪುಡಿ ಮಹೇಶ್ ಮತ್ತು ಸ್ವಸ್ತಿಕ್ ನಾಗರಾಜ್‌ಗೆ ಕರಗತವಾಗಿ ಹೋಗಿದೆ. ಪರವಾನಗಿ ಇಲ್ಲದ ಅಕ್ರಮ ಅದಿರು ರಪ್ತಾಗುತ್ತಿದ್ದರೂ, ಇರುವ ಎಲೆಂಟು ಚೆಕ್‌ಪೋಸ್ಟ್‌ಗಳಲ್ಲಿ ಸರಾಗವಾಗಿ ಬರುವಂಥ 'ವ್ಯವಸ್ಥೆ' ಇವರು ಮಾಡುತ್ತಾರೆ. ಪ್ರತಿ ಚೆಕ್‌ಪೋಸ್ಟ್‌ಗೂ ಹಫ್ತಾ ಹಂಚುವ, ರಸ್ತೆಗಳಲ್ಲಿ ಗೂಂಡಾಗಿರಿ ಮಾಡುವ ಈ ಖಾರಪುಡಿ-ಸ್ವಸ್ತಿಕ್ ಕಳ್ಳ ಅದಿರು ಸಾಗಾಟದಿಂದಲೇ ಕೋಟಿ-ಕೋಟಿ ಕೂಡಿ ಹಾಕಿದ್ದಾರೆ.

ತಮ್ಮ ದಂಧೆಗೆ ಎದುರಾಗುವ ಒಂದಿಷ್ಟು ಅಡೆತಡೆಗಳನ್ನು ದುಡ್ಡಿನಿಂದ, ಇನ್ನೊಂದಿಷ್ಟು ತೊಂದರೆಗಳನ್ನು ದಾದಾಗಿರಿಯಿಂದ ಪರಿಹರಿಸಿಕೊಳ್ಳುವ ಈ ಖಾರಪುಡಿ-ಸ್ವಸ್ತಿಕ್ ಹೆಸರು ಕೇಳಿದರೆ ಇಡೀ ಅಕ್ರಮ ಅದಿರು ಸಾಮ್ರಾಜ್ಯ ಗಡಗಡ ನಡುಗುತ್ತದೆ. ಇಂಥ ಮೋಸ್ಟ್ ವಾಂಟೆಂಡ್‌ಗಳೀಗ ಟೂರಿಸಮ್ ವೀಸಾದಲ್ಲಿ ಶ್ರೀಲಂಕಾಕ್ಕೆ ಹೋಗಿದ್ದಾರೆ. ಹಲವು ಪ್ರಕರಣದಲ್ಲಿರುವ ಈ ಹಾಪಿಗಳು ವಿದೇಶಕ್ಕೆ ಹೋಗಲು ಅವಕಾಶ ಕೊಟ್ಟಿರುವ ಯಡ್ಡಿ ಸರ್ಕಾರದ ಪೊಲೀಸರು ಬೇಕಂತಲೇ ಕಳ್ಳ-ಪೊಲೀಸ್ ಆಟ ಆಡು ತ್ತಿದ್ದಾರೆ. ಸಿಐಡಿಗಳಿಗೆ-ಪೊಲೀಸರಿಗೆ ಬೇಕಾದವರು ವಿದೇಶಕ್ಕೆ ಹೋಗಲು ಅವಕಾ... ಕೊಟ್ಟವರ್ಯಾರು? ಹೇತ್ಲಾಂಡಿ ಹೋಮ್ ಮಿನಿಸ್ಟರ್ ಆಚಾರ್ಯರಿಗೆ ಇ... ಗೊತ್ತಿರುವುದು ಅನುಮಾನ. ಯಡ್ಡಿಯ ಚೆಡ್ಡಿ ಆಡಳಿತವೇ ಹಾಗೆ! ದುಷ್ಟ... ರಕ್ಷ; ಶಿಷ್ಟರಿಗೆ ಶಿಕ್ಷೆ. ಮೈನ್ಸ್ ಮಾಫಿಯಾದ ಕೈಗೊಂಬೆಯಂತಾಗಿರ... ಸಿಎಂ ಯಡ್ಡಿ ಸಾಹೇಬರು ಗಣಿ ಅಕ್ರಮ ತಡೆಗಟ್ಟುವ ಮತ್ತು ತಾ... ಗಣಿಗಾರಿಕೆ ಅಪರಾಧಿಯಲ್ಲ ಎಂದು ತೋರಿಸಿಕೊಳ್ಳಲು ಗಂಟ... ಹರಿದುಹೋಗುವಂತೆ ಕೂಗಾಡಿದಾಗೆಲ್ಲ ಎಂಥವರಿಗೂ ನಗುಬರುತ್ತದೆ. ಗಣಿಗಾ... ಬಗ್ಗೆ ಯಡ್ಡಿ ಬೊಬ್ಬೆ ಹೊಡೆದಾಗೆಲ್ಲ ಕತ್ತಲಲ್ಲಿ ಕೋಲು ಕಳೆದುಕೊಂಡ ಕುರು... ತನಗೇ ತಾನು ಸಾಂತ್ವನ ಹೇಳಿಕೊಂಡಂತೆ ಕೇಳಿಸುತ್ತದಷ್ಟೇ!

ಸುಳ್ಳುಗಾರ ಯಡ್ಡಿಯ ಸಿಐಡಿಗಳಿಂದ ಬೇಲೇಕೇರಿ ಬಂದರಿನ ಜಪ... ಅದಿರು ರಫ್ತು ಪ್ರಕರಣಕ್ಕೆ ನ್ಯಾಯ ಸಿಗಲು ಸಾಧ್ಯವೇ? ಸತ್ಯ ಹೊರಬರ... ಸಾಧ್ಯವೇ? ಕಳ್ಳರಿಗೆ ಕೋಳ ತೊಡಿಸಲು ಸಾಧ್ಯವೇ? ಅನುಮಾನ ಅಲ್ಲವ...

• ನಹು...

ಣಿ ಕಳ್ಳರ ಹಣದಲ್ಲಿ ರಾಜ್, ವಿಷ್ಣು ಪ್ರತಿಮೆ!

11

ಆದರೆ ತಮ್ಮ ಲಾಭಕ್ಕಾಗಿ ಬರೀ ರಸ್ತೆ ಕೆಲಸ ...ಸಿಕೊಂಡರೆ ಜನ ಉಗಿದರೆಂದು ಪಾರ್ಕು, ಫೌಂಟೇನು ...ಪ್ಲಾನ್ ಅನ್ನು ಸೇರಿಸಿಕೊಂಡರು.

...ಗ ತಲೆ ಎತ್ತಿದ್ದೇ ರಾಜ್‌ಕುಮಾರ್ ಪಾರ್ಕ್!

...ಂಟೆಗಡ್ಡೆ ರೆಡ್‌ಲೈಟ್ ಏರಿಯಾ ರಾಜ್ ಪಾರ್ಕ್ ...ತು.

...ಳ್ಳಾರಿ ಮಹಾನಗರ ಪಾಲಿಕೆಯ ಹಿಂಭಾಗದಲ್ಲಿ ... ತಲೆ ಎತ್ತಿರುವ ರಾಜ್ ಪಾರ್ಕ್ ಒಂದು ಕಾಲದಲ್ಲಿ ...ಗಡ್ಡೆ ಎನಿಸಿಕೊಂಡಿತ್ತು. ಆಗದು ಬಳ್ಳಾರಿಯ ಬಹು...ಕ್ಕ ರೆಡ್‌ಲೈಟ್ ಏರಿಯಾ!

...ನಿಷ್ಕ ಒಂದು ಸಾವಿರ ಜನ ಅಲ್ಲಿ ವಾಸವಿದ್ದರು. ... ಅತೀ ಬಡವರೆ. ಸ್ಲಮ್ಮು, ಬಡತನಗಳೆಲ್ಲಾ ...ಪದೇ ಶ್ರೀಮಂತರ ಹಾಗೂ ಅಧಿಕಾರಿಗಳ ಕಣ್ಣಿಗೆ ...ತ್ತಿದ್ದರೆ ಅವರಿಗೆ ಕಿರಿಕಿರಿಯಾಗುತ್ತದಲ್ಲ, ಹಾಗಾಗಿ ...ಬಳ್ಳಾರಿ ಡಿಸಿಯಾಗಿದ್ದ ಗೌರಿ ತ್ರಿವೇದಿಯವರು ಅಲ್ಲಿ ...ಕುಮಾರ್ ಉದ್ಯಾನ ಮಾಡಬೇಕೆಂದು ಹೇಳಿ ಇಡೀ



...ಟೆಗಡ್ಡೆ ಸ್ಲಮ್ಮನೇ ಎತ್ತಂಗಡಿ ಮಾಡಿಸಿ ಪಾರ್ಕ್ ...ಸಿದರು. ನಂತರ ಅದೇ ಜಾಗದಲ್ಲಿ ರಾಜ್‌ಕುಮಾರ್ ...ರ್ಕ್ ಆಯಿತು.

...ರಾಜ್ ಹೆಸರು ಯಾರ್‍ಯಾರ ಕೈಯಲ್ಲಿ ಯಾವ್ಯಾವ ...ಕ್ಕೆ ಬಳಕೆಯಾಗುತ್ತದೆ ನೋಡಿ!

...ಅಲ್ಲಿಂದ ಎತ್ತಂಗಡಿಯಾದ ಜನರಿಗೆ ಗೌರಿ ತ್ರಿವೇದಿಯೇ ...ದ್ದೆ ನಿಂತು ಕೊಂಚ ಮಟ್ಟಿಗಿನ ಪರ್ಯಾಯ ವ್ಯವಸ್ಥೆ ಮಾಡಿಸಿಕೊಟ್ಟಿದ್ದರು. ಬೆಳಗಲ್ ರಸ್ತೆಯ ಬಳಿ ಸ್ಥಳ ಹುಡುಕಿ ಸಂತ್ರಸ್ತರಿಗೆ ಪರ್ಯಾಯ ಜಾಗ ನೀಡಿ ಪುಟ್ಟ ಮನೆಗಳನ್ನು ಕಟ್ಟಿಸಿಕೊಟ್ಟರು. ಈಗದು ಡಿಸಿ ನಗರವೆಂತಲೂ, ಕೆಲವೊಮ್ಮೆ ಗೌರಿ ತ್ರಿವೇದಿ ನಗರವೆಂತಲೂ ಕರೆಸಿಕೊಳ್ಳುತ್ತಿದೆ. ಆದರೆ ಜನರ ಬಡತನದ ಸ್ಥಿತಿ ಬದಲಾಗಲೇ ಇಲ್ಲ. ಕುಂಟೆಗಡ್ಡೆ ರೆಡ್‌ಲೈಟ್ ಏರಿಯಾ ಕಣ್ಮರೆಯಾದಾಕ್ಷಣ ಬಳ್ಳಾರಿಯ ವೇಶ್ಯಾವಾಟಿಕೆ ದಂಧೆಯೇನು ನಿಂತುಹೋಗಲಿಲ್ಲ. ಬದಲಾಗಿ ಬಳ್ಳಾರಿ ಟೌನಿನ ಲಾಡ್ಜ್‌ಗಳಲ್ಲಿ ಕೆಲವು ಈಗ ಪೂರಾ ಬ್ಯುಸಿಯಾಗಿ ಬಿಟ್ಟಿವೆ. ಇಂಥವರ ಸಕ್ರಮ ದಂಧೆ ಬಗ್ಗೆ ಬರೆದರೆ ಅದೇ ಒಂದು ಮೇಗಾ ಸೀರಿಯಲ್.

ರಾಜ್ ಪ್ರತಿಮೆ-ರಾಜಕೀಯ ಲೆಕ್ಕಾಚಾರ

ಕಳೆದ ಮೂರ್ನಾಲ್ಕು ವರ್ಷಗಳಿಂದಲೂ ರಾಜ್ ಪ್ರತಿಮೆ ಸ್ಥಾಪಿಸುವ ಮಾತು ಬಳ್ಳಾರಿಯಲ್ಲಿ ಕೇಳಿಬರುತ್ತಿತ್ತು. ಮಜಾ ಅಂದರೆ 2006 ರಲ್ಲೂ ಬಳ್ಳಾರಿ ಅಜೆಂಡಾ ಟಾಸ್ಕ್ ಫೋರ್ಸ್‌ನವರಿಗೆ ರಸ್ತೆ ಕೆಲಸದೆಡೆ ಗಮನವಿತ್ತೆ ಹೊರತು ರಾಜ್ ಪ್ರತಿಮೆ ಬೇಕಿರಲಿಲ್ಲ. ಅದಕ್ಕೊಂದು ಉದಾಹರಣೆ ಕೊಡಬೇಕೆಂದರೆ ಈ ಸಮಿತಿಯ ಹತ್ತಿರ ಕೋಟಿಗಟ್ಟಲೆ ಹಣವಿದ್ದರೂ ರಾಜ್ ಪ್ರತಿಮೆಗೆಂದು 2006 ರಲ್ಲಿ ಖರ್ಚು ಮಾಡಿದ್ದ ಹಣ 184 ರೂಪಾಯಿ ಅಂತ BATFನ ಲೆಕ್ಕಪತ್ರ ವರದಿಗಳೇ ಹೇಳುತ್ತಿವೆ.

ಹೀಗಿದ್ದಾಗ ಈಗ ದಿಢೀರೆಂದು ರಾಜ್ ಪ್ರತಿಮೆ ತಲೆ ಎತ್ತುತ್ತಿರೆ ಯಾಕೆ?

ಸಿಂಪಲ್ಲಾಗಿ ಹೇಳಬೇಕೆಂದರೆ ಪಾತಾಳ ತಲುಪಿರುವ ರೆಡ್ಡಿ ಸೋದರರ ಇಮೇಜ್ ಅನ್ನು ಮೇಲೆತ್ತಲು!

ರೆಡ್ಡಿ ಬ್ರದರ್ಸ್ ನಡೆಸಿರುವ ಅಕ್ರಮಗಳು, ಕಾಂಗ್ರೆಸ್‌ನವರ ಪಾದಯಾತ್ರೆಯಿಂದ ಬಳ್ಳಾರಿ ಜಿಲ್ಲೆಯಲ್ಲೇ ರೆಡ್ಡಿ ಗ್ಯಾಂಗ್‌ಗೆ ಜನಬೆಂಬಲ ಕಡಿಮೆಯಾಗಿರುವುದು ಹಾಗೂ ಏರ್‌ಪೋರ್ಟ್‌ಗಾಗಿ ಭೂಸ್ವಾಧೀನ ವಿರೋಧಿಸಿ ಜಾಗನೂರು ಶಿರವಾರಗಳ ರೈತರ ಹೋರಾಟಗಳಿಂದ ರೆಡ್ಡಿಗಳೀಗ ತಬ್ಬಲಿಗಳಾಗಿದ್ದಾರೆ. ಹಂಪೆಯ ಕನ್ನಡ ವಿಶ್ವವಿದ್ಯಾಲಯದ ಭೂಮಿ ಕಬಳಿಸಲು ಹೋಗಿ ಎಲ್ಲರಿಂದಲೂ ಛೀಮಾರಿ ಹಾಕಿಸಿಕೊಂಡು ಸೋತ ರೆಡ್ಡಿಗಳಿಗೆ ಈಗ ತುರ್ತಾಗಿ face lift ಬೇಕಾಗಿದೆ.

ರಾಜ್ ಹಾಗೂ ವಿಷ್ಣು ಪ್ರತಿಮೆ ಸ್ಥಾಪಿಸುವ ಮೂಲಕ ಕಳೆದುಕೊಂಡ ಮಾನ ಮರ್ಯಾದೆಗಳನ್ನು ಕೊಂಚವಾದರೂ ಮತ್ತೆ ಗಳಿಸಬಹುದೆಂದು ರೆಡ್ಡಿ ಗ್ಯಾಂಗ್ ಲೆಕ್ಕ ಹಾಕಿರುವಂತಿದೆ.

ಸುಷ್ಮಾ ಸ್ವರಾಜ್ ಬರ್‍ತಾರೆ ಅಂದಿದ್ದ

ಕಳೆದ ವಾರ ಸಚಿವ ಜನಾರ್ದನ್ ರೆಡ್ಡಿ ಬೆಂಗಳೂರಿನಲ್ಲಿ ರಾಜ್ ಮನೆಗೆ ಹೋಗಿಬಂದಿದ್ದಾರೆ. ರಾಜ್ ಪ್ರತಿಮೆ ಅನಾವರಣದ ಬಗ್ಗೆ ಪ್ರಸ್ತಾಪಿಸಿ ಕಾರ್ಯಕ್ರಮಕ್ಕೆ



ಆಹ್ವಾನಿಸಿದ್ದಾರೆ. ಅವತ್ತು ಟಿವಿ ನ್ಯೂಸ್ ಚಾನಲ್ ಒಬ್ಬರೊಂದಿಗೆ ಮಾತನಾಡಿದ ರಾಘವೇಂದ್ರ ರಾಜ್‌ಕುಮಾರ್ "ಸಚಿವ ಜನಾರ್ದನ ರೆಡ್ಡಿಯವರು ಅಪ್ಪಾಜಿಯ ಪ್ರತಿಮೆ ಅನಾವರಣ ಮಾಡುವಂತೆ ನಮ್ಮ ಮನೆಗೆ ಬಂದು ಆಹ್ವಾನಿಸಿದ್ದಾರೆ. ಶಿವಣ್ಣ ಅಪ್ಪು ಈಗ ಶೂಟಿಂಗ್‌ನಲ್ಲಿದ್ದಾರೆ. ಅವರು ಬಂದ ತಕ್ಷಣ ನಮ್ಮ ಬಿಡುವು ನೋಡಿಕೊಂಡು ಬಳ್ಳಾರಿಗೆ ಹೋಗುವ ಡೇಟ್ ತೀರ್ಮಾನಿಸುತ್ತೇವೆ" ಅಂದರು.

ಇದೇನೋ ಸರಿ, ಆದರೆ ರಾಘವೇಂದ್ರ ರಾಜ್‌ಕುಮಾರ್ ಎಷ್ಟು ಮುಗ್ಧರೆಂದರೆ ರಾಜ್ ಮನೆಗೆ ಬರುವ ಮೊದಲು ಈ ಜನಾರ್ದನ ರೆಡ್ಡಿ ಏನೇನು ಹೇಳಿಕೊಂಡು ತಿರುಗುತ್ತಿದ್ದ ಎಂಬುದೇ ಅವರಿಗೆ ಗೊತ್ತಿಲ್ಲ. ಈ ರೆಡ್ಡಿಗಳಿಗೆ ಮೊದಲೆಲ್ಲಾ ರಾಜ್ ಕುಟುಂಬದ ನೆನಪೇ ಇರಲಿಲ್ಲ. ಕಳೆದ ಜೂನ್ 25 ರಂದು ಬಳ್ಳಾರಿಯಲ್ಲಿ ರೆಡ್ಡಿ ಒಂದು ಪತ್ರಿಕಾಗೋಷ್ಠಿ ನಡೆಸಿ ರಾಜ್ ಪ್ರತಿಮೆ ಅನಾವರಣದ ಬಗ್ಗೆ ಹೇಳಿಕೊಂಡಿದ್ದ. ಅವತ್ತು ರೆಡ್ಡಿ ಹೇಳಿದ್ದು "ಸುಷ್ಮಾ ಸ್ವರಾಜ್ ಆಗಸ್ಟ್ 20 ರಂದು ಬಳ್ಳಾರಿಗೆ ಬಂದು ರಾಜ್ ಪುತ್ಥಳಿ ಅನಾವರಣ ಮಾಡುತ್ತಾರೆ" ಎಂದು. ರೆಡ್ಡಿಯ ಈ ಹೇಳಿಕೆಯಿರುವ ಜೂನ್ 26 ರ 'ದಿ ಹಿಂದೂ' ಪತ್ರಿಕಾ ವರದಿಯೂ ಇಲ್ಲಿದೆ.

ಹೀಗೆ ಸುಷ್ಮಾ ಸ್ವರಾಜ್ ಕೈಲಿ ಪ್ರತಿಮೆ ಅನಾವರಣ ಮಾಡಿಸಲು ಹೊರಟಿದ್ದ ರೆಡ್ಡಿಗಳು ಈಗ ಏಕಾಏಕಿ ಸುಷ್ಮಾರಿಗೆ ಕೊಕ್ ನೀಡಿ ಪಾರ್ವತಮ್ಮ ರಾಜ್‌ಕುಮಾರ್‌ರ ಕೈಲಿ ಪ್ರತಿಮೆ ಅನಾವರಣ ಮಾಡಿಸಲು ಹೊರಟಿದ್ದು ಯಾಕೆ?

ರಾಜ್ ಬಗ್ಗೆ ಮತ್ತು ರಾಜ್ ಕುಟುಂಬದ ಬಗ್ಗೆ ಕನ್ನಡಿಗರಲ್ಲಿ ಇರುವ ಪ್ರೀತಿ ಗೌರವಗಳು ರೆಡ್ಡಿ ಗ್ಯಾಂಗ್‌ಗೆ ಗೊತ್ತಿದೆ. ರಾಜ್ ಪ್ರತಿಮೆ ನೆಪದಲ್ಲಿ ರಾಜ್ ಕುಟುಂಬದವರನ್ನು ಬಳ್ಳಾರಿಗೆ ಕರೆಸಿ ಅವರೊಂದಿಗೆ ಗುರುತಿಸಿಕೊಂಡರೆ ತಮಗೂ ಕೊಂಚ ಮರ್ಯಾದೆ ಹೆಚ್ಚಾಗುತ್ತದೆ, ಜನ ಕೊಂಡಾಡುತ್ತಾರೆಂಬ ಯೋಚನೆ ಅವರಿಗಿರುವುದು ಸ್ಪಷ್ಟ. ಜೊತೆಗೆ ಇನ್ನೇನು ಬರಲಿರುವ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಎಲೆಕ್ಷನ್ ವೇಳೆಗೆ ಅಕ್ರಮ ಗಣಿಗಾರಿಕೆ ಬಗ್ಗೆ ಇರುವ ಜನರ ಗಮನವನ್ನು ರಾಜ್ ಪ್ರತಿಮೆ, ಪಾರ್ಕು ಇತ್ಯಾದಿಗಳತ್ತ ತಿರುಗಿಸಿಬಿಡಬಹುದೆಂಬ ಆಶೆಯೂ ಅವರಿಗಿದೆ.

ರಾಜ್ ಕುಟುಂಬದವರು ಬೇಸಿಕಲಿ ಕಲಾವಿದರು. ಅವರಿಗೆ ರಾಜಕೀಯದ ಉಸಾಬರಿ ಬೇಕಿಲ್ಲ ನಿಜ. ಆದರೆ ಯಾರು ಉತ್ತಮರು, ಯಾರು ಕಳ್ಳರು ಎಂಬ ಭೇದವೇ ಮಾಡದೆ ಯಾರು ಕರೆದರೂ ಹೊರಟುಬಿಟ್ಟರೆ ಹೇಗೆ?

ಈ ರೆಡ್ಡಿಗಳು ರಾಜ್ ಪ್ರತಿಮೆ ಸ್ಥಾಪಿಸಿದರೆ "ಆಗಲಿ, ಸಂತೋಷ" ಎಂದು ಸುಮ್ಮನಾಗುವ ಬದಲಿಗೆ ಅವರೊಂದಿಗೇ ವೇದಿಕೆ ಏರಿಬಿಟ್ಟರೆ ನೋಡುವ ಜನ ಏನೆಂದುಕೊಂಡಾರೆಂದು ರಾಜ್ ಕುಟುಂಬ ಯೋಚಿಸಲಿ.

ಈ ರೆಡ್ಡಿ ಗ್ಯಾಂಗ್ ಬಗ್ಗೆ ಕರ್ನಾಟಕದ ಜನ, ಕೋರ್ಟ್‌ಗಳು, ಕಾನೂನುಗಳು, ಮಾಧ್ಯಮಗಳು ಯಾವ ಅಭಿಪ್ರಾಯ ಹೊಂದಿವೆ ಎಂಬುದನ್ನಾದರೂ ವಿಚಾರಿಸಿ ತಿಳಿದರೆ ಒಳ್ಳೆಯದಲ್ಲವೆ?

ರಾಜ್ ಜನತೆಯ ಕಣ್ಮಣಿಯಾಗಿದ್ದರು ನಿಜ.

ಆದರೆ ಜನರ ಕಣ್ಣಲ್ಲಿ ನೀರು ತರಿಸುವವರ ಜೊತೆ ಇರುತ್ತಿರಲಿಲ್ಲ ಅಲ್ಲವೆ? ●

10 ಹೆಂಡತಿ ಹೆಸರಲ್ಲಿ ಗಾಲಿ ರೆಡ್ಡಿಯ ಗಣಿದಂಧೆ!

...ತ್ತನ್ನು ವಿದೇಶಗಳಿಗೆ ಅಡ ಇಟ್ಟ ಜನಾರ್ದನ ರೆಡ್ಡಿಯ ...ತನಗಳು ದಂಗುಬಡಿಸುವಂತಿವೆ.

...ಈ ಕಂಪೆನಿ ಆರಂಭಗೊಂಡದ್ದು 2004ರಲ್ಲಿ. ಆರಂಭದ ...ಗಳಲ್ಲಿ ಇದರ ಉದ್ದೇಶ ಮನರಂಜನೆಯದ್ದಾಗಿತ್ತು. ...ರು ವರ್ಷಗಳ ಕಾಲ ಪಲ್ಟಿ ಹೊಡೆದರೂ ...ರಂಜನೆಯೆಂಬುದು ಕಾಸು ಹುಟ್ಟಿಸಲಿಲ್ಲ. ...ಿಂದಾಗಿ ತೀರಾ ಲಾಚಾರೆದ್ದು ಬೇಗ ಜಡಿಯಬೇಕೆಂಬ ...ಲ್ಲಿ ಅಂದರೆ 2007ರ ಸುಮಾರಿಗೆ ಜನಾರ್ದನ ರೆಡ್ಡಿ ಕಂಪೆನಿಗೆ ಡೈರೆಕ್ಟರಾಗಿ ವಕ್ಕರಿಸಿಕೊಂಡ. ಇದಕ್ಕೂ ...ದು ತಿಂಗಳು ಮುಂಚಿತವಾಗಿ ಈ ಕಂಪೆನಿಯ ...ರಂಜನೆ ಉದ್ದೇಶವನ್ನು ರಫ್ತು-ಆಮದು ಅಂತ ಬದಲಾಯಿಸುವ ವ್ಯವಸ್ಥೆ ಮಾಡಿಕೊಂಡಿದ್ದ.

ಈ ಕಂಪೆನಿಗೆ ಜನಾರ್ದನ ರೆಡ್ಡಿಯಲ್ಲದೆ ಇನ್ನೂ ಒಬ್ಬ ಡೈರೆಕ್ಟರ್ ಹಾಗೂ ಇಬ್ಬರು ಸೆಕ್ರೆಟರಿಗಳಿದ್ದರು. ಗಮನಿಸಬೇಕಾದ ಪ್ರಮುಖ ಅಂಶವೆಂದರೆ ಅವರೆಲ್ಲ ಸಿಂಗಾಪುರದ ನಾಗರಿಕರು! ಅರಂಗನ್ನಾಲ್ ಎಂಬಾತ ಡೈರೆಕ್ಟರ್ ಆದರೆ, ಚೆಂಗ್ ಲಿಯಾನ್ ಸಿವಾಂಗ್ ಹಾಗೂ ಫಾತಿಮಾ ಮುನೀರಾ ಅಜ್ಮಿ ಸೆಕ್ರೆಟರಿಗಳು. ತನ್ನ ನಿರ್ದೇಶಕತ್ವದ ಕಂಪೆನಿಗೆ ವಿದೇಶಿ ಪ್ರಜೆಗಳನ್ನು ಹಾಕಿಕೊಂಡು ರೆಡ್ಡಿ ಮಾಡಿದ್ದು ಮಾತ್ರ ಪಕ್ಕಾ ವಂಚನೆಯ ಕೆಲಸ.

ಮೂರು ಮಂದಿ ಸಿಂಗಾಪುರ ಪ್ರಜೆಗಳನ್ನು ತನ್ನ ಕಂಪೆನಿಗೆ ರೆಡ್ಡಿ ನೇಮಿಸಿಕೊಂಡಿದ್ದನಲ್ಲಾ? ಇದರ ಹಿಂದಿದ್ದದ್ದು ಪಕ್ಕಾ ವಂಚಕ ಉದ್ದೇಶ. ಈ ಗಾಲ ಕಂಪೆನಿಯ ಬ್ರಾಂಚೊಂದು ಈ ಸಿಂಗಾಪುರ ಪ್ರಜೆಗಳ ನೆರವಿನಿಂದ ಅಲ್ಲೂ ಖಾತೆ ತೆರೆಯುವಂತೆ ರೆಡ್ಡಿ ನೋಡಿಕೊಂಡಿದ್ದ. ಇಲ್ಲಿ ಕಡಿಮೆ ಬೆಲೆಗೆ ಕರ್ನಾಟಕದ ಅದಿರನ್ನು ಸಿಂಗಾಪುರಕ್ಕೆ ಕಳಿಸುವ ಕೆಲಸವನ್ನು ರೆಡ್ಡಿ ವ್ಯವಸ್ಥಿತವಾಗಿ ಮಾಡಿ ಮುಗಿಸಿದ. ವಂಚನೆ ಅಡಗಿರುವುದು ಇಲ್ಲೇ. ಇಲ್ಲಿಂದ ಸಿಂಗಾಪುರಕ್ಕೆ 75.50 ಡಾಲರ್‌ಗೆ ಅದಿರು ಕೊಟ್ಟರೆ, ಅಲ್ಲಿಂದ ಅದನ್ನು ಚೀನಾ ದೇಶಕ್ಕೆ 194 ಡಾಲರ್‌ಗೆ ಮಾರಲಾಗುತ್ತಿತ್ತು. ಇದು ಕರ್ನಾಟಕದ ಸಂಪತ್ತನ್ನು ವಿದೇಶಗಳ ಬಾಯಿಗಿಡುವ ದುಷ್ಟತನವಲ್ಲದೆ ಮತ್ತೇನು?

ಮೇಲ್ಕಂಡ ಅಂದಾದುಂದಿ ರೆಡ್ಡಿಯ ಅನಾಚಾರಗಳ ಒಂದು ಮಗ್ಗುಲಷ್ಟೆ. ಇದರಲ್ಲಿ ಸದ್ಯ ತನ್ನ ಹೆಂಡತಿ ಅರುಣಾ ಹೆಸರಲ್ಲಿ ನಡೆಸುತ್ತಿರುವ ಅಸೋಸಿಯೇಟೆಡ್ ಮೈನಿಂಗ್ ಕಂಪೆನಿ ರೆಡ್ಡಿಯ ಕಳ್ಳದಂಧೆಗಳನ್ನು ಸಪಾಟಾಗಿ ಬೆತ್ತಲಾಗಿಸಿದೆ. 'ಕರ್ನಾಟಕದಲ್ಲಿ ಗಣಿಗಾರಿಕೆ ನಡೆಸುತ್ತಿಲ್ಲ' ಎಂಬ ರೆಡ್ಡಿಯ ಹೇಳಿಕೆಗಳು ಶುದ್ಧ ಘಟಿಂಗತನವೆಂಬುದಕ್ಕೆ ಇದು ಉದಾಹರಣೆ.

ರೆಡ್ಡಿ ಕರ್ನಾಟಕದೊಳಗೆ ನಡೆಸುತ್ತಿರುವ ಗಣಿ ಅಕ್ರಮಗಳನ್ನು ಹೊರಗೆಡವಲು ಬೇರೇನೂ ಮಾಡಬೇಕಿಲ್ಲ. ಈತನ ಹೆಂಡತಿ ಹೆಸರಲ್ಲಿರುವ ಅಸೋಸಿಯೇಟೆಡ್ ಕಂಪೆನಿ ನಡೆಸಿದ 231 ಕೋಟಿ ವ್ಯವಹಾರಕ್ಕೆ ಅದಿರು ಎಲ್ಲಿಂದ ಬಂತೆಂಬುದರ ಬಗ್ಗೆ ತನಿಖೆ ನಡೆಸಿದರೆ ಸಾಕು.

'ಅಕ್ರಮ ಗಣಿಗಾರಿಕೆ ನಡೆಸುತ್ತಿರುವ ಯಾರನ್ನೂ ಬಿಡುವುದಿಲ್ಲ' ಎಂಬರ್ಥದಲ್ಲಿ ದಗಲ್ಬಾಜಿತನ ತೋರುವ ಯಡಿಯೂರಪ್ಪರಿಗೆ ಆ ಧೈರ್ಯವಿದೆಯೇ? ●


ದಿಢೀರ್ ಶ್ರೀಮಂತಿಕೆಯ ಅಕ್ರಮ ಹಿನ್ನೆಲೆ

ರೆಟ್ಟಿನಲ್ಲ, ಈಗ್ಗೆ ಏಳು ವರ್ಷಗಳ ಹಿಂದೆ ಜನಾರ್ದನ ರೆಡ್ಡಿ ಮತ್ತವನ ಸಹೋದರರು ಅಕ್ಷರಶಃ ಅಬ್ಬೇಪಾರಿಗಳಂತಿದ್ದರು. ...998ರಿಂದ 2003ರವರೆಗೆ ಈ ರೆಡ್ಡಿ ಬ್ರದರ್ಸ್ ಇನ್‌ಕಂ ಟ್ಯಾಕ್ಸ್ ಅನ್ನು ಕಟ್ಟುತ್ತಿರಲಿಲ್ಲ. ಕಾರಣ ಇವರ ವಾರ್ಷಿಕ ...ದಾಯ ಅಷ್ಟು ತಳಮಟ್ಟದಲ್ಲಿತ್ತು.

ಪವಾಡ ನೋಡಿ, ಈ ರೀತಿ ದೈನೇಸಿಗಳಂತಿದ್ದ ರೆಡ್ಡಿ ಗ್ಯಾಂಗು ಇಂದು ಸಾವಿರಾರು ಕೋಟಿಗಳ ಆದಾಯ ...ಹೊಂದಿ ಒಂದಿಡೀ ವ್ಯವಸ್ಥೆಯನ್ನೇ ತಿರುವುಮುರುವಾಗಿಸಬಲ್ಲ ಮಟ್ಟಕ್ಕೆ ಬೆಳೆದುನಿಂತಿದೆ. ಅದೂ ಸಹ ಕೇವಲ ಏಳು ...ವರ್ಷಗಳಲ್ಲಿ!

2002-03ರ ಅವಧಿಯಲ್ಲಿ ರೆಡ್ಡಿ ಎನ್ನೋಬಲ್ ಇಂಡಿಯಾ ಅಂತೊಂದು ಕತ್ತರಿ ಕಂಪೆನಿ ತೆರೆದಿದ್ದ. ಆದರೆ, ...ದೆಷ್ಟೇ ಟೋಪಿ ಕಾರ್ಯಕ್ರಮ ನಡೆಸಿದರೂ ಪದೇಪದೆ ಎನ್ನೋಬಲ್ ಇಂಡಿಯಾದ ಚೆಕ್ ಬೌನ್ಸ್ ಆಗಿದ್ದವು. ...ಂಥ ನೂರಾರು ಪ್ರಕರಣಗಳು ಕಂಪೆನಿಯ ವಿರುದ್ಧ ದಾಖಲಾಗಿವೆ.

ಆದರೀಗ ಅದೇ ರೆಡ್ಡಿ ಪಟಾಲಂ ಸಾವಿರಾರು ಕೋಟಿಗಳ ವ್ಯವಹಾರ ನಡೆಸುತ್ತಿದೆ. ತೀರಾ ಮೊನ್ನೆ ...ಡಿಯೂರಪ್ಪ ಆಯೋಜಿಸಿದ್ದ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ರೆಡ್ಡಿ ಹೆಂಡತಿ ಅರುಣಾ ಅಖಂಡ ...6 ಸಾವಿರ ಕೋಟಿಗಳನ್ನು ಬ್ರಾಹ್ಮಿಣಿ ಸ್ಟೀಲ್ಸ್ ಕಂಪೆನಿ ಹೆಸರಲ್ಲಿ ಹೂಡುತ್ತಾಳೆ. ಇದೇ ಬ್ರಾಹ್ಮಿಣಿ ಸ್ಟೀಲ್ಸ್ ಕಂಪೆನಿ ವತಿಯಿಂದಲೇ ಆಂಧ್ರ ಪ್ರದೇಶದ ಚಿತ್ತೂರು ಜಿಲ್ಲೆಯ ಜಮ್ಮಲಮಡಗು ಎಂಬಲ್ಲಿ 22 ಸಾವಿರ ಕೋಟಿ ಹೂಡಿಕೆ ನಡೆಯುತ್ತದೆ.



...ಗಡಿಕಲ್ಲು...

ಕೈಗಾರಿಕೆ ಮುಂತಾದವುಗಳನ್ನು ನಡೆಸಲು ಬ್ಯಾಂಕುಗಳು ಸಾಲ ಕೊಡುವುದಿಲ್ಲವೆಂದೇನಲ್ಲ. ಆದರೆ, ಹೂಡಬೇಕಿರುವ ಬಂಡವಾಳದಲ್ಲಿ ಶೇ. 25ರಷ್ಟನ್ನು ಸ್ವತಃ ಭರಿಸಬೇಕಾಗುತ್ತದೆ. ರೆಡ್ಡಿಗಳ ಬಂಡವಾಳ ಹೂಡಿಕೆಯ ಮೊತ್ತ ಗಮನಿಸಿದರೆ ಹದಿನೈದು ಸಾವಿರ ಕೋಟಿಯಷ್ಟಾದರೂ ಸ್ವತಃ ಸುರಿದಿರಲೇಬೇಕು. ಈ ಹಣವಾದರೂ ಎಲ್ಲಿಂದ ಬಂತು? ಇದಿಷ್ಟು ಪ್ರಶ್ನೆಗಳನ್ನಿಟ್ಟುಕೊಂಡು ತಲಾಶ್‌ಗಿಳಿದರೆ ರೆಡ್ಡಿ ಗಳಿಸಿದ ಸಾವಿರಾರು ಕೋಟಿಯ ಹಿಂದಿರುವ ಕರಾಳ ಕಥೆಗಳು ಬಿಚ್ಚಿಕೊಳ್ಳತೊಡಗುತ್ತವೆ.

ಇದೆಲ್ಲದರ ಮೂಲವಿರುವುದು ಜನಾರ್ದನ ರೆಡ್ಡಿ ಆಂಧ್ರಪ್ರದೇಶ ಸರ್ಕಾರದಿಂದ ಪರವಾನಗಿ ಪಡೆದು ನಡೆಸುತ್ತಿರುವ ಓಬಳಾಪುರಂ ಮೈನ್ಸ್ (ಒಎಂಸಿ)ನ ಕರ್ಮಕಾಂಡಗಳಲ್ಲಿ. ಆಂಧ್ರ-ಕರ್ನಾಟಕ ಗಡಿ ಭಾಗದಲ್ಲೇ ಒಎಂಸಿಗೆ ಭೂಮಿ ಪಡೆದ ರೆಡ್ಡಿ ಕರ್ನಾಟಕದ ಭೂಮಿಯನ್ನು ಆವರಿಸಿಕೊಂಡು ಅಕ್ರಮ ಗಣಿಗಾರಿಕೆ ನಡೆಸಹತ್ತಿದ. ಈತ ಅದಾಗಲೇ ಸುಮಾರು 20 ಎಕರೆ ಕರ್ನಾಟಕದ ಭೂಪ್ರದೇಶ ಒತ್ತುವರಿ ನಡೆಸಿ, ಸುಗ್ಗಲಮ್ಮನ ಗುಡಿ ಉಡಾಯಿಸಿ ಗಡಿಕಲ್ಲುಗಳನ್ನೇ ಬದಲಿಸಿ ಬಿಟ್ಟಿದ್ದ. 21-8-2007ರಂದು ಬಳ್ಳಾರಿ ವಿಭಾಗದ ಉಪ ಅರಣ್ಯಾಧಿಕಾರಿ ಡಾ.ಪಿ.ರಾಜಶೇಖರನ್ ರೆಡ್ಡಿಯ ಅಕ್ರಮ ಒತ್ತುವರಿಯ ಬಗ್ಗೆ ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟಿದ್ದರು.



ರೆಡ್ಡಿ ಒತ್ತುವರಿ ನಡೆಸಿ ನಿರ್ಮಿಸಿರುವ ಗುಡಿಕಲ್ಲು...


ಈ ಸಂದರ್ಭದಲ್ಲಿ ರೆಡ್ಡಿ ಪಡೆ ಅರಣ್ಯಾಧಿಕಾರಿ ರಾಜಶೇಖರನ್‌ಗೆ ಬೆದರಿಕೆ ಹಾಕಿ ಹೆಂಡತಿ ಮಕ್ಕಳನ್ನು ಕೊಲೆ ಮಾಡುವುದಾಗಿ ಧಮಕಿ ಹಾಕಿತ್ತು. ಈ ವಿಚಾರವನ್ನ ರಾಜಶೇಖರನ್ ದಾಖಲೆ ಸಮೇತ ಬಹಿರಂಗಪಡಿಸಿದ್ದರು. ಆದರೆ ರೆಡ್ಡಿಯ ಹಡಬೆ ಹಣ ಎಲ್ಲಾ ಕಾನೂನುಕಟ್ಟಲೆಗಳನ್ನೂ ಮೀರಿ ವಿಜೃಂಭಿಸಿತು. ಆದುದರಿಂದ ಆಂಧ್ರದ ಪರವಾನಗಿ ತೋರಿಸಿ ಕರ್ನಾಟಕದ ಭೂಮಿ ಬಗೆಯತೊಡಗಿದ.

ನಂತರ ಈತ ತುಮಟಿ ಪ್ರದೇಶವನ್ನು ದಾಟಿ ಸಂಡೂರು ತಾಲ್ಲೂಕನ್ನೂ ಆವರಿಸಿಕೊಂಡ. ಕರ್ನಾಟಕದಲ್ಲಿ ಅದಾಗಲೇ ಗಣಿಗಾರಿಕೆ ನಡೆಸುತ್ತಿರುವವರನ್ನು ಬೆದರಿಸಿ ಹಫ್ತಾ ವಸೂಲಿ ಮಾಡಲಾರಂಭಿಸಿದ. ಅವರಿವರನ್ನು ಬೆದರಿಸಿ ಬೇರೆಯವರ ಪರವಾನಗಿ ಪ್ರದೇಶಗಳಲ್ಲಿ ಅಕ್ರಮ ಒತ್ತುವರಿ ನಡೆಸಿ, ಅದರಲ್ಲೇ ಭೂಮಿ ಬಗೆದು ಕೊಬ್ಬುತ್ತಾ ಬಂದ.

ಈತನ ಸಾವಿರಾರು ಕೋಟಿಗಳ ಲೆಕ್ಕದ ಹಣದ ಹಿಂದಿರುವುದು ಮೇಲ್ಕಂಡ ಅಕ್ರಮಗಳೇ ಎಂಬುದರಲ್ಲಿ ಸಂಶಯವಿಲ್ಲ. ಈಗ ಈತ ಯಡ್ಡಿ ಕ್ಯಾಬಿನೆಟ್‌ನಲ್ಲಿ ಪ್ರವಾಸೋದ್ಯಮ ಖಾತೆ ಪಡೆದು ಗ್ಯಾನಂತೆ ಪೋಸು ಕೊಡುತ್ತಿರಬಹುದು. ಆದರೆ ತನ್ನ ಹಿಂದಿರುವ ಕೊಳಕು ಹಿನ್ನೆಲೆಗಳನ್ನು ಹೇಗೆ ಮರೆಮಾಚಿಕೊಂಡಾನು?

ಹಾವೇರಿ: ಟಾಟಾಗೆ ಗೂಟಾ ಜಡಿದ ರೈತರು!

ಭೂಮಿ ಮುಟ್ಟಿದರೆ ಬಾರಕೋಲದೇಟು!



ಸಮೃದ್ಧ ಫಸಲಿನ ಭೂಮಿ..

'ಜೀವಾ ಕೇಳ್ರಿ ಈಗ ಕೊಟ್ಟ ಬಿಡುತ್ತೇವಿ. ಆದ್ರ ನಮ್ಮ ಜಮೀನ ಕೇಳಿದ್ರ ಸಮಸ್ಯ ಆಗತೈತಿ. ಮುಂದ ನಮ್ಮ ಸಮಾಧಿ ಮೇಲೆ ಬೇಕಾದ್ರ ಕಾರ್ಖಾನೆ ಕಟ್ರಿ.'

ಈ ಆಕ್ರೋಶದ ನುಡಿಗಳನ್ನು ಭೂ ಸ್ವಾಧೀನ ಅಧಿಕಾರಿ ಮಹಾಂತೇಶ್ ಬೀಳಗಿ ಮತ್ತು ಹಾವೇರಿ ಉಪವಿಭಾಗಾಧಿಕಾರಿ ಸುರೇಶ್ ಇಟ್ನಾಳ್ ಕರೆದಿದ್ದ ಮೊದಲ ಸಭೆಯಲ್ಲಿ ಅಗಡಿ ಭಾಗದ ರೈತರು ಹೇಳುವ ಮೂಲಕ ಸ್ಟೀಲ್ ಕಾರ್ಖಾನೆಗೆ ತಮ್ಮ ಪ್ರಬಲ ವಿರೋಧ ವ್ಯಕ್ತಪಡಿಸಿದ್ದಾರೆ.

ಕೈಯಲ್ಲಿ ಕ್ರಿಮಿನಾಶಕ ಬಾಟಲಿ ಹಿಡಿದುಕೊಂಡು ಸಭೆಗೆ ಹಾಜರಾದ ಸುಮಾರು 355 ರೈತರು 'ನಿಮ್ಮ ಅನುಕೂಲಕ್ಕೆ ನಮ್ಮ ಬಲಿನೇ ಬೇಕಾ ಹೇಗೆ? ರೈತರ ಸಾವಿನಿಂದ ಶ್ರೀಮಂತರನ್ನ ಖುಷಿಪಡಿಸುವುದೇ ನಿಮ್ಮ ಕೆಲಸವೇನು?' ಎಂದು ಭೂ ಸ್ವಾಧೀನಾಧಿಕಾರಿ ಮಹಾಂತೇಶ ಬೀಳಗಿಯನ್ನು ಹಿಗ್ಗಾ ಮುಗ್ಗಾ ತರಾಟೆಗೆ ತೆಗೆದುಕೊಂಡಿದ್ದಾರೆ. 'ಸ್ಟೀಲ್ ಕಾರ್ಖಾನೆಗೆ ಫಲವತ್ತಾದ ಭೂಮಿನೇ ಏಕೆ ಬೇಕು? ಜಿಲ್ಲೆಯ ಬೇರೆಡೆ ಇರುವ ಜವಳು ಬಂಜರು ಭೂಮಿ ಯಾಕೆ ಬೇಡ?' ಎಂದು ಪ್ರಶ್ನಿಸಿದ ರೈತ ಸಮೂಹ ಅಗಡಿ ಸೇರಿದಂತೆ ಸುತ್ತಲ ಪ್ರದೇಶದಲ್ಲಿ ಒಂದೇ ಒಂದು ಎಕರೆ ಜವಳು ಭೂಮಿ ಇರುವುದನ್ನು ತೋರಿಸಿಕೊಟ್ಟರೆ ತಾವೇ ಖುದ್ದಾಗಿ ಭೂಮಿಯನ್ನು ಬಿಟ್ಟುಕೊಡುತೇವಿ ಎಂದು ಅಧಿಕಾರಿ ವರ್ಗಕ್ಕೆ ಸವಾಲು ಹಾಕಿದ್ದಾರೆ. ಇಲ್ಲಿ ರೈತರು ಭೂಮಿ ಜೊತೆ ಎಷ್ಟು ಅವಿನಾಭಾವ ಸಂಬಂಧ ಹೊಂದಿದ್ದಾರೆಂದರೆ, ಸಭೆಯ ಮಧ್ಯೆಯೇ ಎದ್ದು ನಿಂತ ಕರ್ಜಗಿಯ ರೈತ ಕೊಟ್ರೇಶಪ್ಪ ಭಾವೋದ್ವೇಗದಲ್ಲಿ, ಸರ್ಕಾರದ ವಿರುದ್ಧದ ಆಕ್ರೋಶದಲ್ಲಿ ಕ್ರಿಮಿನಾಶಕ ಬಾಟಲಿಯ ಮುಚ್ಚಳ ತೆಗೆದು ಕುಡಿಯಲು ಯತ್ನಿಸಿದರು. ಭೂಸ್ವಾಧೀನಾಧಿಕಾರಿ ಮಹಾಂತೇಶ ಬೀಳಗಿ ಎದ್ದು ಬಿದ್ದು ಬಂದು ಕ್ರಿಮಿನಾಶಕದ ಬಾಟಲನ್ನು ಕಿತ್ತುಕೊಳ್ಳದೆ ಇದ್ದರೆ ಕೊಟ್ರೇಶಪ್ಪರು ಬಲಿಯಾಗಿ ಬಿಡುತ್ತಿದ್ದರು.


'ಭೂ ಸ್ವಾಧೀನಕ್ಕೆ ಸಂಬಂಧಪಟ್ಟಂತೆ ಇನ್ನು ಮುಂದೆ ಸಭೆ ನಡೆಯಕೂಡದು. ನಾವು ಕಾರ್ಖಾನೆಗೆ ಭೂಮಿ ನೀಡುವುದಿಲ್ಲ, ಇದೇ ಕೊನೆ ಸಭೆಯಾಗದಿದ್ದರೆ ಮುಂದೆ ಬಾರಕೋಲ ಹಚ್ಚಬೇಕಾಗುತ್ತದೆ... ಎಚ್ಚರ, ಎಚ್ಚರ' ಎಂದು ಒಕ್ಕೊರಲಿನಿಂದ ಹೇಳುವ ಮೂಲಕ ಟಾಟಾ ಮತ್ತು ಯಡ್ಡಿ ಸರ್ಕಾರಕ್ಕೆ ಗೂಟ ಜಡಿಯಲು ರೆಡಿಯಾಗಿದ್ದಾರೆ.

ಕಳೆದ ತಿಂಗಳು ರೈತರಿಗೆ ಸರ್ಕಾರ ಏಕಾಏಕಿ ನೋಟಿಸ್ ಜಾರಿ ಮಾಡಿದಾಗಲೂ ಅವರು ತೀವ್ರವಾಗಿ ಪ್ರತಿಭಟಿಸಿದ್ದರಲ್ಲದೆ ಆಗಲೂ ಯಡ್ಡಿಯ ಚೆಡ್ಡಿ ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದರು.


"ಹುಟ್ಟಿದಾಗಿನಿಂದ ಹಿಂಟ್ಟಿಗಾಗಿ ಉಳಿಮೆ ಮಾಡಿಕೊಂತ ಬಂದೇವ್ರಿ. ಈಗ ಯಾರೋ ಟಾಟಾ ಬಂದಾನ ಅಂತಾ ಅನ್ನ ನೀಡೋ ಭೂ ತಾಯಿಯನ್ನ ಮಾರೋದು ಅಂದ್ರ ಹ್ಯಾಂಗ್‌ರ್ರಿ? ನಮಗ ಬ್ಯಾರೇ ಕೆಲಸಾ ಮಾಡಾಕ ಬರಂಗಿಲ್ಲಾ. ಭೂಮಿ ಹದ ಮಾಡಿ ಬೆಳೆ ತೆಗೆಯೋ ಕಾಯಕವೇ ಉಸಿರಾಗಿ ಹೋಗ್ಯೈತಿ. ಹಿಂದ ಅಮ್ಮ (ಅಜ್ಜ) ಅಪ್ಪ ಇದ ಹೊಲಾನ ಮಾಡಿ ನಮ್ಮನ್ನ ಸಾಕ್ಯಾರ. ಈಗ ನಾವು ನಮ್ಮ ಮಕ್ಕಳ ಮರಿ ಸಾಕೋಂತ ಬಂದೇವಿ. ಕಷ್ಟ – ಸುಖಾನೋ, ಒಟ್ಟನ್ಯಾಗ ಅನ್ನ ಗಂಜಿ ಉಂಡ ಬದಕೇವಿ...

ಯಾರೋ ಸಾವಿರ ಕೋಟಿ ಹಾಕಿ ಕಾರ್ಖಾನೆ ತೆಗಿತಾರ ಅಂತಾ ಅವರು ಕೊಡೋ ರೊಕ್ಕದ ಆಸೆಗೆ ನಮ್ಮ ಅನ್ನ ಮಾರಿಕೊಳ್ಳೋದು ಅಂದ್ರ ಹೆತ್ತ ತಾಯಿನ ಬ್ಯಾರೆದವರಿಗೆ ಮಾರಿದಾಂಗ... ಪ್ರಾಣಾ ಹೋದ್ರು ಜಮೀನು ಬಿಡಂಗಿಲ್ಲಾ, ಒಂದು ವ್ಯಾಳೆ ಭೂಮಿ ಮುಟ್ಟಿದರ ಬಾರಕೋಲ ಹಚ್ಚತೇವಿ. ಜ್ವಾಕಿ, ಹಾವೇರಿ ರೈತ್ರ ಅಂದ್ರ ಏನ್ ಹಗರ ತಿಳಿದಾರೇನ್ ಈ ಸರ್ಕಾರದವ್ರು..." ಕಳೆದ ತಿಂಗಳು ಹೀಗೆ ಮೈತುಂಬಾ ರೋಷ ತುಂಬಿಕೊಂಡು ಕ್ಷಣಾರ್ಧದಲ್ಲಿ ಕಣ್ಣು ಕೆಂಪಾಗುವಷ್ಟು ರೊಚ್ಚಿಗೆದ್ದು ಮಾತಾಡಿದವರು ಟಾಟಾ ಮೆಟಾಲಿಕ್ ಕಂಪನಿಗಾಗಿ ಭೂಮಿ ಕಳೆದುಕೊಳ್ಳುವ ಭೀತಿ ಎದುರಿಸುತ್ತಿರುವ ರೈತರು. ಹೌದು ಅವರು ಹೇಳಿದ ಹಾಗೆ ಹಾವೇರಿ ರೈತರು ಪ್ರಾಣಕ್ಕೆ ಅಂಜುವವರಲ್ಲ, ಅದಕ್ಕೆ ತಾಜಾ ನೆನಪು ಅಂದರೆ ಗೊಬ್ಬರಕ್ಕಾಗಿ ನಡೆದ ಹೋರಾಟ ಮತ್ತು ಆ ಹೋರಾಟದಲ್ಲಿ ಗೋಲಿಬಾರ್‌ನಿಂದ ಪ್ರಾಣಬಿಟ್ಟ ಇಬ್ಬರು ನೇಗಿಲ ಯೋಗಿಗಳು. ಅದು ಮಾಸುವ ಮುನ್ನವೇ ಈಗ ಮತ್ತೊಮ್ಮೆ ತನ್ನ ಭೂರಕ್ಷಣೆಗಾಗಿ ರೈತ ಬೀದಿಗಿಳಿದಿದ್ದಾನೆ. ಭೂಸ್ವಾಧೀನ ಪ್ರಕ್ರಿಯೆ ವಿರುದ್ಧ ನಿಂತಿದ್ದಾನೆ. 'ಜೀವ ಬಿಟ್ಟೇವ್ರು, ಭೂಮಿಯನ್ನ ಮಾತ್ರ ಬಿಡೆವ್ರು' ಎಂಬ ಕಹಳೆ ಮೊಳಗಿಸಿದ್ದಾನೆ.

ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಅಂತರರಾಷ್ಟ್ರೀಯ ಬಂಡವಾಳ ಹೂಡಿಕೆದಾರರ ಸಮಾವೇಶದ ಮೂಲಕ ಭೂ ಲೂಟಿ ದಂಧೆಗೆ ಹಾವೇರಿ ಹತ್ತಿರದ ಅಗಡಿ ಭಾಗದ 4 ಗ್ರಾಮಗಳ 2500 ಎಕರೆ ಜಮೀನನ್ನು ಟಾಟಾ ಮೆಟಾಲಿಕ್ ಕಂಪನಿಗೆ ನೀಡುವ ಸಂಚನ್ನು ಯಡ್ಡಿ ಸರ್ಕಾರ ಪ್ರಾರಂಭಿಸಿದೆ. ಆ ನಿಟ್ಟಿನಲ್ಲಿ ಈ ಭಾಗದ ರೈತರಿಗೆ ಕೆಐಎಡಿಬಿಯಿಂದ ಭೂಸ್ವಾಧೀನದ ನೋಟಿಸ್ ನೀಡಿತ್ತು. ಈ ಯೋಜನೆ ಬಗ್ಗೆ ಹಿಂದುಮುಂದು ಗೊತ್ತಿಲ್ಲದೆ ಏಕಾಏಕಿ ಎದುರಾದ ನೋಟಿಸ್ಸಿನಿಂದ ರೈತರು ಆತಂಕದ ಸ್ಥಿತಿ ಎದುರಿಸಿದ ರೈತರು ಒಟ್ಟಾಗಿ ನಿಂತು ಭೂಸ್ವಾಧೀನಾಧಿಕಾರಿಯ ಬೆವರು ಇಳಿಸಿ ಕಳಿಸುವ ಮೂಲಕ ಯಡ್ಡಿಯ ಲೂಟಿಕೋರ ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.



ಉದಾಸಿ




ಶ್ರೀವಾರ್

ಬಂಡವಾಳ ಹೂಡಿಕೆದಾರರ ಪರ ನಿಂತು ರಿಯಲ್ ಎಸ್ಟೇಟ್ ಏಜೆಂಟರಂತೆ ವರ್ತಿಸುತ್ತಿದೆ ರಾಜ್ಯದ ಚೆಡ್ಡಿ ಸರಕಾರ. ಯಾವುದೇ ಜಾಗೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೂ ಮುನ್ನ ಅದರ ಮಾಲೀಕರಾದ ರೈತರೊಡನೆ ಚರ್ಚಿಸಿ ಅವರ ಅಭಿಪ್ರಾಯ ಸಂಗ್ರಹಿಸಿ ನಂತರ ಮುಂದಿನ ಪ್ರಕ್ರಿಯೆಗೆ ಅಣಿಯಾಗಬೇಕಾಗುತ್ತದೆ. ಆದರೆ ಇಲ್ಲಿ ಇದ್ಯಾವುದು ನಡೆದಿಲ್ಲ, ಯಾವಾಗ ರೈತರು ಇದನ್ನೆಲ್ಲ ವಿರೋಧಿಸಿದರೋ, ಆಗ ಎಚ್ಚೆತ್ತ ಸರ್ಕಾರ ಕಳೆದವಾರ ಮೊದಲಬಾರಿ ರೈತರ ಸಭೆ ಕರೆದಿತ್ತು. ಯಾವ ಕಾರಣಕ್ಕೂ ತಮ್ಮ ಭೂಮಿ ಕೊಡುವುದಿಲ್ಲ ಎಂದು ಎಚ್ಚರಿಸಿದ ರೈತರು, ಇನ್ನುಂದೆ ಮತ್ತೆಂದೂ ಸಭೆ ಕರೆಯಕೂಡದು ಎಂದು ಯಡ್ಡಿ ಸರ್ಕಾರವನ್ನು ಎಚ್ಚರಿಸಿದ್ದಾರೆ.

ಫಲವತ್ತು ಭೂಮಿಗೆ ಟಾಟಾಬಾಯಿ!

ಹಿಂಜಿಮಾರು ಹಾವೇರಿಯಿಂದ 10ರಿಂದ 15 ಕಿ.ಮೀ. ದೂರದಲ್ಲಿರುವ ಅಗಡಿ, ಬೂದಗಟ್ಟಿ, ಮಾಚಾಪೂರ, ತಿಮ್ಮೇನಹಳ್ಳಿ ಗ್ರಾಮಗಳ ಬಳಿ ಟಾಟಾ ಕಂಪನಿಯ ಉಕ್ಕು ಕಾರ್ಖಾನೆ ಸ್ಥಾಪನೆಗೆ ಪ್ರಥಮ ಹಂತದ ತಯಾರಿ ಪ್ರಾರಂಭವಾಗಿದೆ. ಒಟ್ಟು 2500 ಎಕರೆ ಭೂ ಪ್ರದೇಶ ಈ ಕಂಪನಿ ಪಾಲಾಗಲಿದೆ. ಅಗಡಿ ಬಳಿ 1600 ಎಕರೆ, ಬೂದಗಟ್ಟಿ ಬಳಿ 290 ಎಕರೆ, ತಿಮ್ಮೇನಹಳ್ಳಿಯ 50 ಎಕರೆ ಮತ್ತು ಉಳಿದದ್ದನ್ನು ಮಾಚಾಪೂರ ಗ್ರಾಮದಿಂದ ವಶಪಡಿಸಿಕೊಳ್ಳುವುದಕ್ಕೆ ಕೆಐಎಡಿಬಿ ಅಧಿಕಾರಿಗಳು ಈ ಎಲ್ಲಾ ಗ್ರಾಮಗಳಿಗೆ ಅದ್ಯಾವಾಗ ಬಂದುಹೋದರು ಎಂಬುದು ಇಲ್ಲಿಯ ಜನರಿಗಾಗಲಿ, ರೈತರಿಗಾಗಲಿ ಗೊತ್ತೇ ಇಲ್ಲ! ಸ್ಥಳೀಯ ಚೆಡ್ಡಿ ಲೀಡರ್‌ಗಳು ತಯಾರಿಸಿದ ರಾಜಕೀಯ ನಕ್ಷೆಗೆ ಈ ಅಧಿಕಾರಿಗಳು ಜೋತು ಬಿದ್ದಿದ್ದಾರೆ. ಇದರಲ್ಲಿ ಜಿಲ್ಲಾ ಮಂತ್ರಿ ಉದಾಸಿ ಮತ್ತವನ ಮಗ ಸಂಸದ ಶಿವಕುಮಾರ ಉದಾಸಿಯ ರಿಯಲ್ ಎಸ್ಟೇಟ್ ದಂಧೆ ಅಡಗಿದೆ ಎಂದು ಇಲ್ಲಿಯ ರೈತರು ನೇರವಾಗಿ ಆರೋಪಿಸುತ್ತಾರೆ. ಇದು ಸತ್ಯ ಕೂಡ. ಶಿವಕುಮಾರ ಉದಾಸಿ ರಾಜಕೀಯಕ್ಕೆ ಕಾಲಿಟ್ಟದ್ದೇ ರಿಯಲ್ ಎಸ್ಟೇಟ್ ದಂಧೆಯಿಂದ. ಈ ಮೊದಲು ಸಜ್ಜನನಿಗೆ ಹಾವೇರಿ ಹತ್ತಿರದ 25 ಎಕರೆ ಕೊಡಿಸಿದ್ದ ಶಿವಕುಮಾರ. ನಂತರ ಶಿಗ್ಗಾಂವ ಹತ್ತಿರ ಮಡ್ಲಿ ಗ್ರಾಮದ ಬಳಿ ಗೋವಿನ ಜೋಳ ಸಂಸ್ಕರಣಾ ಕೇಂದ್ರದ ಹೆಸರಿನಲ್ಲಿ ನೂರಾರು ಎಕರೆಗೆ ಬಾಯಿ ತೆರೆದಿದ್ದಾನೆ. ಈಗ ಅಗಡಿ ಬಳಿಯ 2500 ಎಕರೆ ಭೂಪ್ರದೇಶ ಕೊಡಿಸಲು ಟಾಟಾ ಕಂಪನಿಯೊಂದಿಗೆ ನೇರವಾಗಿ ಡೀಲ್ ಕುದುರಿಸಿಕೊಂಡಿರುವ ಉದಾಸಿ ಬಾಲಂಗೋಚಿಗಳು ಇನ್ನೇನು ಸ್ವಲ್ಪೇ ದಿನದಲ್ಲಿ ಹಾವೇರಿಯನ್ನು ಹರಾಜಿಗಿಟ್ಟರೂ ಆಶ್ಚರ್ಯಪಡಬೇಕಿಲ್ಲ.



ಟಾಟಾ ಸ್ಟೀಲ್ ಕಂಪನಿಗಾಗಿ ನಿಗದಿಪಡಿಸಿರುವ ಈ ಭೂ ಪ್ರದೇಶ ವೇನೂ ಜವಳು ಅಥವಾ ಪಾಳು ಬಿದ್ದಿದ್ದಲ್ಲ, ಭಾರೀ ಫಲವತ್ತಾದ ಭೂಮಿ ಇದು. ಪ್ರತಿ ವರ್ಷ ಬಂಪರ್ ಬೆಳೆ ನೀಡುವ ಕಪ್ಪು ಎರೆಭೂಮಿ ಮತ್ತು ಕೆಂಪು ಮಸಾರಿ ಭೂಮಿ ಇಲ್ಲಿದೆ. ಸ್ವಲ್ಪೇ ಮಳೆಯಾದರೂ ಸಾಕು ಬೆಳೆಯನ್ನು ಸದಾ ಹಚ್ಚ ಹಸಿರಾಗಿಡುತ್ತದೆ ಈ ನೆಲ. ಗೋವಿನಜೋಳ, ಹತ್ತಿ ಮೆಣಸಿನ ಕಾಯಿ ಹಾಗು ಇತರೆ ಬೆಳೆಗಳನ್ನು ಈ ಭೂಮಿಯಲ್ಲಿ ಬೆಳೆಯಲಾಗುತ್ತದೆ. ವರ್ಷಕ್ಕೆ ಎರಡು ಬೆಳೆಯಂತೂ ನಿಶ್ಚಿತವಾಗಿ ರೈತನ ಕೈ ಸೇರುತ್ತದೆ. ಇಂತಹ ಜಮೀನನ್ನು ಯಾರು ತಾನೇ ಬಿಟ್ಟು ಕೊಡಲು ಒಪ್ಪುತ್ತಾರೆ?

ಪ್ರತಿ ವರ್ಷ 5 ರಿಂದ 8 ಲಕ್ಷ ಜನರಿಗೆ ಬೇಕಾಗುವಷ್ಟು ಆಹಾರ ಪೂರೈಸುವ ಈ ಭಾಗದ ರೈತರಿಗೆ ಈಗಷ್ಟೇ ಸುವರ್ಣ ಯುಗ ಪ್ರಾರಂಭವಾಗಿತ್ತು. ಕಳೆದ ಹತ್ತಾರು ವರ್ಷಗಳಿಂದ ನಡೆಯುತ್ತಿದ್ದ ತುಂಗಾ ಕಾಲುವೆ ಯೋಜನೆ ಕಳೆದ ತಿಂಗಳಷ್ಟೇ ಪೂರ್ಣಗೊಂಡು ಈ ರೈತರಿಗೆ ಸಮರ್ಪಣೆಯಾಗಿತ್ತು. ದಶಕಗಳಿಂದ ಕಾಯ್ದು ಕುಳಿತಿದ್ದ ಇವರ ಕೈಗೆ ಬಂದ ತುತ್ತು ಬಾಯಿಗೆ ಬರದಂತ ಸ್ಥಿತಿಗೆ ಈಗ ತಲಪುವಂತಾಗಿದೆ. ಇನ್ನು ಮುಂದೆ ಇನ್ನೂ ಹೆಚ್ಚು ಬೆಳೆ ಬೆಳೆಯುವ ಮೂಲಕ ತಮ್ಮ ಜೀವನಮಟ್ಟವನ್ನು ಸುಧಾರಿಸಿಕೊಳ್ಳುವ ಕನಸು ಕಾಣುತ್ತಿದ್ದ ಮುಗ್ಧ ನೇಗಿಲ ಯೋಗಿಗೆ ಭೂ ಸ್ವಾಧೀನದ ನೋಟಿಸ್ ದಿಢೀರ್ ಶಾಕ್ ನೀಡಿದೆ.


ಹೋರಾಟದ ಹಾದಿ

ಟಾಟಾ ಮೆಟಾಲಿಕ್ ಕಂಪನಿ ಸ್ಥಾಪನೆಗಾಗಿ ಕರ್ನಾಟಕ ಭೂ ಸ್ವಾಧೀನ ವಿಶೇಷಾಧಿಕಾರಿ ಕಚೇರಿಯು ಜುಲೈ 26 ರಂದು 1960 ರ ಕಲಂ 28(1)ರ ಅಡಿಯಲ್ಲಿ ಸುಮಾರು 180 ಕ್ಕೂ ಹೆಚ್ಚು ರೈತರಿಗೆ ನೋಟಿಸ್ ನೀಡಿತ್ತು. ಇದರ ಬೆನ್ನ ಹಿಂದೆಯೇ ಒಂದು ತಿಂಗಳೊಳಗಾಗಿ ತಮ್ಮ ಅಭಿಪ್ರಾಯವನ್ನು ಲಿಖಿತವಾಗಿ ನೀಡಬೇಕು, ಆಕ್ಷೇಪಣೆ ಇದ್ದಲ್ಲಿ ಸೆಪ್ಟೆಂಬರ್ 6 ರಂದು ಹಾವೇರಿಯಲ್ಲಿ ವಿಚಾರಿಸಲಾಗುವುದು ಎಂದು ರೈತರಿಗೆ ತಿಳಿಸಲಾಗಿತ್ತು. ಇದರಿಂದ ಆಕ್ರೋಶಗೊಂಡ ಸಾವಿರಾರು ರೈತರು ಪಕ್ಷಾತೀತವಾಗಿ ಹೋರಾಟಕ್ಕೆ ಮುಂದಾಗಿ, ಜಿಲ್ಲಾಧಿಕಾರಿ ಕಚೇರಿ ಎದುರು ಆಗಷ್ಟ 16 ರಂದು ಸರಕಾರದ ವಿರುದ್ಧ ಇಡೀ ದಿನ ಘೋಷಣೆ ಕೂಗಿ ಕಾರ್ಖಾನೆ ಸ್ಥಾಪನೆಗೆ ವಿರೋಧ ವ್ಯಕ್ತಪಡಿಸಿದ್ದರು. ಭೂಸ್ವಾಧೀನ ಆದೇಶ ಹಿಂದೆ ಪಡೆಯದಿದ್ದರೆ, ಕುಟುಂಬದ ಎಲ್ಲ ಸದಸ್ಯರೊಂದಿಗೆ ಡಿ.ಸಿ. ಕಚೇರಿ ಎದುರು ರಿಕಾಣಿ ಹಾಕಲಾಗುವುದೆಂದು ಎಚ್ಚರಿಸಿದ್ದರು.

ಉದಾಸಿ ಅಣತಿಯಂತೆ ನಡೆದುಕೊಳ್ಳುವ ಅಧಿಕಾರಿಗಳ ತುಂಬಿರುವ ಇಲ್ಲಿಯ ಜಿಲ್ಲಾಡಳಿತದಲ್ಲಿ ಯಾರಿಗೂ ಜನರೊಂದಿಗೆ ಸಂಪರ್ಕವೇ ಇಲ್ಲ ಎಂಬುದು ಡಿಸಿ ಶ್ರೀವ ಮಾತಾಡುವ ಶೈಲಿಯಿಂದಲೇ ಅರ್ಥವಾಗುತ್ತೆ. ಈಗ ಟಾಟಾ ಕಾರ್ಖಾನೆ ಸ್ಥಾಪನೆ ನಿಟ್ಟಿನಲ್ಲಿ ವಿವಿಧ ಬೆಳವಣಿಗೆಗಳು ತೀವ್ರಗೊಳ್ಳುತ್ತಿವೆ. ಇದನ್ನು ಕಂಡು ರೈತರಲ್ಲಿ ದಿನದಿಂದ ದಿನಕ್ಕೆ ಆತಂಕ ಹೆಚ್ಚುತ್ತಿದೆ, ಜೊತೆಗೆ ಹೋರಾಟದ ಕಿಚ್ಚೂ ಗಟ್ಟಿಗೊಳ್ಳುತ್ತಿದೆ. ಅದರ ಪರಿಣಾಮವೆಂಬಂತೆ ಮೊನ್ನೆ ನಡೆದ ರೈತರ ಸಭೆಯಲ್ಲಿ ಭೂಸ್ವಾಧೀನಾಧಿಕಾರಿಗಳ ಬೆವರು ಇಳಿ ಸರ್ಕಾರಕ್ಕೆ ಎಚ್ಚರಿಕೆ ನೀಡಲಾಗಿದೆ.

ಸಂಘಟನೆ ಒಡೆಯಲು ಚೆಡ್ಡಿಗಳ ಸಂಚು

ಟಾಟಾ ಕಂಪನಿಗಾಗಿ ಭೂ ಸ್ವಾಧೀನವನ್ನು ವಿರೋಧಿ ಹತ್ತಾರು ರೈತಪರ ಸಂಘಟನೆಗಳು ಭೂಮಿ ಕಳೆದುಕೊಳ್ಳು ರೈತರೊಂದಿಗೆ ಸೇರಿ ನಡೆಸುತ್ತಿರುವ ಹೋರಾಟವನ್ನು ಹ ಕುವ ಹಾಗೂ ಅದನ್ನು ಒಡೆಯುವ ಸಂಚನ್ನು ಜಿಲ್ಲೆಯ ಚೆಡ್ಡಿ ಶಾಸಕ-ಸಂಸದರು ನಡೆಸುತ್ತಿದ್ದಾರೆ. ಭೂಮಿ



ಭೂಸ್ವಾಧೀನ ವಿರೋಧಿಸುತ್ತಿರುವ ರೈತರು

ಕಳೆದುಕೊಳ್ಳುವ ರೈತರೊಳಗೆ ಇರುವ ಬಿಜೆಪಿ ಬೆಂಬಲಿಗರ ಗುರುತಿಸಿ ಅವರೆಲ್ಲರಿಗೆ ಹಣದ ಆಮಿಷವನ್ನು ತೋರಿಸು ತ್ತಿದ್ದಾರೆ. ಹೆಚ್ಚಿನ ಪರಿಹಾರ ಹಣದ ಜೊತೆಗೆ ಕುಟುಂ ದೊಳಗೆ 2-3 ಜನರಿಗೆ ಉದ್ಯೋಗ ನೀಡುವ ಸು ಭರವಸೆ ನೀಡಿ ಅವರನ್ನು ಹಾದಿ ತಪ್ಪಿಸುತ್ತಿದ್ದಾರೆ. ಏನ ಅರಿಯದ ಕೆಲ ಮುಗ್ಧ ರೈತರು ಚೆಡ್ಡಿಗಳ ಪೊಳ್ಳು ಭರವ ನಂಬಿ ಹೋರಾಟದಿಂದ ಹಿಂದೆ ಸರಿದು ಕಾರ್ಖಾನೆ ಜಾಗವನ್ನು ನೀಡಲು ಒಪ್ಪುತ್ತಿದ್ದಾರೆ.


ಆದರೆ ಮೊನ್ನೆ ಕ್ರಿಮಿನಾಶಕ ಬಾಟಲು ಹಿಡಿದೇ ಸಭೆ ಹಾಜರಾಗುವ ಮೂಲಕ ರೈತರು ತಮ್ಮ ಒಗ್ಗಟ್ಟನ್ನು ಪ್ರದರ್ಶಿಸಿ, ಚೆಡ್ಡಿಗಳಿಗೆ, ಅಧಿಕಾರಿಗಳಿಗೆ ಬಿಸಿ ಮುಟ್ಟಿಸಿ ದ್ದಾರೆ.

ಭೂ ಸ್ವಾಧೀನಪಡಿಸಿಕೊಳ್ಳುತ್ತಿರುವ ಈ ಭಾಗದ ಸದ್ಯ ಭೂ ತಾಯಿ ಹಚ್ಚ ಹಸಿರಿನ ಸೀರೆ ಧರಿ ಪ್ರಕಾಶಮಾನಳಾಗಿ ಕಂಗೊಳಿಸುತ್ತಿದ್ದಾಳೆ. ಇಲ್ಲಿ ಸಮೃದ್ಧವಾ ಬೆಳೆದ ಬೆಳೆಯನ್ನು ಕಂಡರೆ ಯಾರಿಗಾದರೂ ಹೊ ಕಿಚ್ಚು ಬರುವಂತಾಗಿದೆ. ಇಂತಹ ಒಂದು ಪ್ರದೇಶದ ಎಲ್ಲ ಹಸಿರನ್ನು ನಾಶಪಡಿಸಿ ಬೃಹತ್ ಕಾರ್ಖಾನೆಯೊಂದ ತಲೆ ಎತ್ತಲು ಮುಂದಾಗಿರುವುದು ಎಷ್ಟು ಸರಿ?

ಕೃಷಿ ಬಿಟ್ಟು ಬೇರೇನೂ ಗೊತ್ತಿಲ್ಲದ, ಅದನ್ನೇ ನಂ ಕಷ್ಟಾನೋ.. ಸುಖಾನೋ.. ಜೀವನ ಸಾಗಿಸುತ್ತಾ ತೃಪ್ತಿಯಿಂ ಇರುವ ರೈತರು ಯಾರೋ ಕಾರ್ಖಾನೆ ಮಾಡತೇ ಅಂತ ಬಂದರೆ ರೈತರು ನಂಬಿರುವ ಕಸಬನ್ನು ಬಿಟ್ಟು ಅವರಿಗೆ ಭೂಮಿಯನ್ನು ಧಾರೆ ಎರೆಯಬೇಕೆ? ಅವರೇನೂ ಹಣ ಕೊಡಬಹುದು, ಆದರೆ ಜೀವನ ಕೊಡಲ್ಲವಲ್ಲ ಎಲ್ಲವನ್ನೂ ಬಿಟ್ಟು ರೈತರು ಮತ್ತೊಮ್ಮೆ ಬದು ಕಟ್ಟಿಕೊಳ್ಳುವುದು ಆಗುವುದೇ ಇಲ್ಲ.

ಹಸಿರು ಶಾಲು ಹೊತ್ತು ರೈತರ ಪ್ರಾಣವನ್ನು ತೆಗೆ ಪಾಪಿ ಮುಖ್ಯಮಂತ್ರಿ ಯಡಿಯೂರಪ್ಪ ಈಗ ಟಾಟಾನಂತ ಬಂಡವಾಳಶಾಹಿಗಳಿಗಾಗಿ ರೈತರ ಭೂಮಿಯನ್ನೇ ಕಸಿ ಕೊಳ್ಳುತ್ತಿದ್ದಾನೆ. ಆದರೆ ಬಾರಕೋಲು ಜೊತೆಜೊತೆಯ ಕ್ರಿಮಿ ನಾಶಕ ಬಾಟಲುಗಳನ್ನು ಹಿಡಿದು ನಿಂತಿರುವ ರೈತರ ಎದುರಿಸುವ ಛಾತಿ ಯಡ್ಡಿ ಟಾಟಾಗಳಿಗಿದೆಯೇ?

• ಹುರುಳಿಕುಪ್ಪಿ ವಿನಯ



ನೋಟೀಸ್
ಕೆ.ಐ.ಎ.ಡಿ. ಕಾಯ್ದೆ 1966 ರ ಕಲಂ28(2) ರ ಮೇರೆಗೆ
[illegible]

ರೈತರಿಗೆ ನೀಡಿದ ನೋಟೀಸ್

್ಯಾಕ್ಟರ್ ಹೆಸರಲ್ಲಿ ಸಿದ್ದಿ ಜನಾಂಗದ ತರಿಗೆ ಸಿಂಡಿಕೇಟ್ ಬ್ಯಾಂಕ್ ವಂಚನೆ

ಕ್ಷರ ಕಲಿತ ದ್ರೋಹಿಂಗಳಿಬ್ಬರು ಸೇರಿ ಅಂಕೋಲಾ ತಾಲ್ಲೂಕಿನ ಬಡ, ಸಿದ್ದಿ ಜನಾಂಗದ ರೈತರಿಗೆ ಟ್ರ್ಯಾಕ್ಟರ್ ಹೆಸರಲ್ಲಿ ವಂಚಿಸಿದ ಪ್ರಕರಣವಿದು. ಅಂಕೋಲಾದಲ್ಲಷ್ಟೇ ಅಲ್ಲ, ಬಹುತೇಕ ಕಡೆ ಟ್ರ್ಯಾಕ್ಟರ್ ಏಜೆಂಟರು ಬ್ಯಾಂಕಿನವರು ಕೈಕೈ ಮಿಲಾಯಿಸಿ ಹೀಗೆ ರೈತರನ್ನು ವಂಚಿಸುತ್ತಲೇ ರೆ.

ಕೋಲಾದ ಸಿದ್ದಿ ರೈತರೀಗ ಟ್ರ್ಯಾಕ್ಟರ್‌ನ ಮೊದಲ ಕಂತನ್ನು ತುಂಬಬೇಕೆಂದು ಟ್ ಬ್ಯಾಂಕ್ ನೋಟೀಸ್ ನೀಡಿದ್ದು, ಇದು ಬಡರೈತರನ್ನು ಆತಂಕಕ್ಕೆ . ಏಕೆಂದರೆ ಇವರ ಬಳಿ ಕಂತಿನ ಹಣ 2 ಲಕ್ಷ ಇಲ್ಲವೇ ಇಲ್ಲ, ಕಳೆದ ಬ್ಯಾಂಕ್ ಸಾಲದಿಂದ ಪಡೆದ ಟ್ರ್ಯಾಕ್ಟರ್‌ಗಳಿಂದ ಸಿದ್ದಿ ರೈತರಿಗೆ ನಯಾಪೈಸೆ ಜನವೂ ಆಗಿಲ್ಲ. ಈ ಟ್ರ್ಯಾಕ್ಟರುಗಳು ವರ್ಷದಿಂದ ಅವರ ಮನೆ ನಿಂತಿರುವ ಶೋಕೇಸ್ ಗೊಂಬೆಗಳಂತಾಗಿವೆ.



ಷು ತುಂಬದಿದ್ದರೆ, ಬ್ಯಾಂಕಿನವರು ಟ್ರ್ಯಾಕ್ಟರ್ ಎಳೆದುಕೊಂಡು ಹೋದರೆ ಯೂ ಅಭ್ಯಂತರವಿಲ್ಲ. ಆದರೆ ಅತಿ ಅಪಾಯವಿರುವುದು, ಈ ಸಾಲದ ಬೋಜಾ ಕೂಡಿಸಿರುವುದರಿಂದ, ರೈತರ ಭೂಮಿಗೇ ಕುತ್ತು ಬರಬಹುದು.


ಹೀಗೆ ರೈತರನ್ನು ವಂಚಿಸಿದ್ದು ಯಲ್ಲಾಪುರದ ಕ್ವಾಲಿನ್ ಮೋಟಾರ್ಸ್ ಖೈತಾನ್ ಪ್ರಕಾಶ್ ಡಾಯಸ್ ಮತ್ತು ಅಂಕೋಲಾದ ಸಿಂಡಿಕೇಟ್ ಶಾಖೆಯ ಮ್ಯಾನೇಜರ್ ಚಂದ್ರಶೇಖರ್ ನಾಯಕ್ ಎಂಬ ವಂಚಕ . ಟ್ರ್ಯಾಕ್ಟರ್ ಕೊಡುವ ಮುನ್ನವೇ ರೈತರಿಂದ ಒಂದು ಲಕ್ಷ ಇಪ್ಪತ್ತು ರೂಪಾಯಿ ಪಾವತಿಸಿಕೊಂಡಿದ್ದು, ಟ್ರ್ಯಾಕ್ಟರ್‌ನ ಕೊಟೇಷನ್ ರೇಟಗಿಂತ –ಮೂರು ಲಕ್ಷ ಜಾಸ್ತಿ ಸಾಲವನ್ನು ರೈತರ ಹೆಸರಲ್ಲಿ ಡ್ರಾ ಮಾಡಿಕೊಂಡಿದ್ದ ಜೋಡಿ, ಸಾಲದ ಮೊತ್ತಕ್ಕೆ ರೈತರ ಭೂಮಿ ಮೇಲೆ ಬೋಜಾ ಕೂಡಿಸಿಬಿಟ್ಟಿತ್ತು. ಅಂಕೋಲಾ ತಾಲ್ಲೂಕು ಒಂದರಲ್ಲೇ 18 ಪ್ರಕರಣಗಳು ಬೆಳಕಿಗೆ . ರೈತರು ದೂರು ನೀಡಿದರೆ ಫಾಲ್ಸ್ ಕಂಪ್ಲೇಂಟ್ ಎಂದು ಹೇಳುತ್ತಿರುವ ಪುರ ಠಾಣೆಯ ಪಿಎಸ್‌ಐ ಪಾಟೀಲ್ ಮತ್ತು ಅಂಕೋಲಾ ಠಾಣೆಯ ಐ ಎಚ್. ಜಯರಾಜ್‌ಗಳು ಏಜೆಂಟ್ ಖೈತಾನ್ ಪ್ರಕಾಶ್ ಮತ್ತು ಮ್ಯಾನೇಜರ್ ಚಂದ್ರಶೇಖರ್ ನಾಯಕರೊಂದಿಗೆ ಕೈಜೋಡಿಸಿದ್ದಾರೆ. ಅಲ್ಲ, ಸಿದ್ದಿ ರೈತರ ಪರ ನಿಂತ ಸಿದ್ದಿ ಸಂಘದ ನಾಯಕ ಬೆನೆತ್ ಸಿದ್ದಿ ಲ್ಲೇ ಸುಳ್ಳು ಕಂಪ್ಲೇಂಟ್ ಹಾಕಿ, ಎಂಟು ದಿನ ಜೈಲಿಗೆ ದೂಡಿದ ನೀಚ ಮ್ನ ಇವರೆಲ್ಲ ಸೇರಿ ಮಾಡಿದ್ದಾರೆ.

ಸತ್ತವರ ಹೆಸರಲ್ಲೂ

ಏಜೆಂಟ್ ಖೈತಾನ್ ಪ್ರಕಾಶ್ ಮತ್ತು ಮ್ಯಾನೇಜರ್ ನಾಯಕ್ ಜೋಡಿ ಯಾವ ಯಾವ ಬಗೆಯಲ್ಲಿ ವಂಚಿಸಿದೆ ಎಂಬುದಕ್ಕೆ ಇಲ್ಲಿ ಕೆಲವು ಸ್ಯಾಂಪಲ್‌ಗಳನ್ನು ನೀಡಿದ್ದೇವೆ. ಕೆಲವರಿಗೆ ಟ್ರ್ಯಾಕ್ಟರನ್ನೇ ನೀಡದೇ ಸಾಲವನ್ನು ಸ್ವಾಹಾ ಮಾಡಿದ್ದರೆ, ಇನ್ನು ಕೆಲವರಿಗೆ ಟ್ರ್ಯಾಕ್ಟರ್ ದರಕ್ಕಿಂತ ಹೆಚ್ಚಿನ ಸಾಲ ಹೇರಿ ನುಂಗಿ ಹಾಕಿದೆ. ಸತ್ತವರೊಬ್ಬರ ಹೆಸರಲ್ಲೂ ನುಂಗಿ ನೀರು ಕುಡಿದಿದೆ ಈ ಜೋಡಿ.

ಮಳಗಾಂವ್‌ನ ಫಕೀರಾಬಾಬು ಸಿದ್ದಿ ಹೆಸರಲ್ಲಿ ಟ್ರ್ಯಾಕ್ಟರ್ ಸಾಲ ಎತ್ತಿದ ವಂಚಕ ಜೋಡಿ ಸಾಲದ ಮೊತ್ತವನ್ನು ತಾವೇ ಗುಳುಂ ಮಾಡಿವೆ. ಪಾಪ, ಫಕೀರಾಬಾಬು ಭೂಮಿಯ ಮೇಲೆ ಬೋಜಾ ಕೂಡಿಸಿದ ವಂಚನೆಯನ್ನೂ ಮಾಡಲಾಗಿದೆ. ಈಗ ನೋಡಿದರೆ, ಫಕೀರಾಬಾಬುರಿಗೆ ಸಾಲ ತುಂಬುವಂತೆ ನೋಟಿಸ್ ಬಂದಿದೆ! ಟ್ರ್ಯಾಕ್ಟರೂ ಇಲ್ಲ, ಸಾಲವೂ ಇಲ್ಲ; ನೋಟಿಸ್ ಕುರಿತು ಸಿದ್ದಿ ಸಂಘದ ಅಧ್ಯಕ್ಷ ಬೆನೆಟ್ ಸಿದ್ದಿ, ಕಾರ್ಯದರ್ಶಿ ಜಾನ್ ಸಿದ್ದಿ ಮುಂತಾದವರು 8.6.2010ರಂದು ವಿವರ ಕೇಳಿದಾಗ, ಅವರನ್ನು 16 ರಂದು ಬರಹೇಳಲಾಗಿದೆ. ಟ್ರ್ಯಾಕ್ಟರನ್ನೂ ನೀಡಿಲ್ಲ, ಸಾಲವನ್ನು ಕೊಟ್ಟಿಲ್ಲದ್ದರಿಂದ ಖೈತಾನ್ ಪ್ರಕಾಶ್ ಮತ್ತು ನಾಯಕ್ ಫಜೀತಿಗೆ ಬಿದ್ದಿದ್ದಾರೆ. ಈ ಒಂದು ಪ್ರಕರಣವನ್ನು ನಿವಾಳಿಸಿ ಒಗೆಯಲು ಪ್ಲಾನು ಹಾಕಿದ್ದಾರೆ. 16 ರಂದು ಭೇಟಿಯಾದ ಸಿದ್ದಿ ಸಂಘದವರಿಗೆ, 'ಫಕೀರಾಬಾನು ಸಾಲ ಪಾವತಿಯಾಗಿದೆ' ಎಂದಿದ್ದಾರೆ! ಫಕೀರಾಬಾನುರಿಗೆ ಸಾಲವೇ ಸಿಕ್ಕಿಲ್ಲ, ಇನ್ನು ಮರುಪಾವತಿ ಮಾಡುವುದು ಎಲ್ಲಿಂದ ಬಂತು? ಅಲ್ಲಯ್ಯಾ, ಇವರ ಸಾಲ ಮರುಪಾವತಿ ಮಾಡಿದವರಾರು ಎಂದರೆ, 'ಅದೆಲ್ಲ ನಿಮಗೇಕೆ; ತಗೊಳ್ಳಿ ತಹಶೀಲ್ದಾರ್‌ಗೆ ಈ ಪತ್ರ ಕೊಡಿ. ಅವರು ಭೂಮಿಯ ಮೇಲಿನ ಬೋಜಾ ತೆಗೆದು ಹಾಕುತ್ತಾರೆ' ಎಂದು ಸಿದ್ದಿಗಳನ್ನು ಸಾಗಹಾಕಿದ್ದಾರೆ. ಆದರೆ ಇವತ್ತಿಗೂ ಬೋಜಾ ತೆಗೆದು ಹಾಕಲಾಗಿಲ್ಲ.

ಮಳಗಾಂವನ ಗಿಡ್ಡ ಸಾಣ ಸಿದ್ದಿ ಇವರಿಂದ ಒಂದು ಲಕ್ಷ ಇಪ್ಪತ್ತು ಸಾವಿರ ಪಾವತಿಸಿಕೊಂಡು ಟ್ರ್ಯಾಕ್ಟರ್ ನೀಡಿದ್ದರು. ಟ್ರ್ಯಾಕ್ಟರ್‌ನ ಬೆಲೆ 5,60,000 ಇದ್ದು ಈ ವಂಚಕ ಜೋಡಿ ಗಿಡ್ಡ ಸಾಣ ಸಿದ್ದಿಯ ಹೆಸರಲ್ಲಿ 6 ಲಕ್ಷ 60 ಸಾವಿರ ಸಾಲ ಎತ್ತಿ ತಿಂದು, ಗಿಡ್ಡಸಾಣ ಭೂಮಿಯ ಮೇಲೆ ಅಷ್ಟು ಮೊತ್ತದ ಬೋಜಾ ಕೂಡ್ರಿಸಿದೆ. ಗಿಡ್ಡಸಾಣಗೆ ಪಾಸ್‌ಬುಕ್, ಇತ್ಯಾದಿ ಕಾಗದಪತ್ರಗಳನ್ನೇ ನೀಡಿಲ್ಲ.


ಜಾನ್ ಸಿದ್ದಿ

ಹಾಗೆಯೇ ಹಳವಳ್ಳಿಯ ನಾರಾಯಣಸುಬ್ಬ ಸಿದ್ದಿ ಅವರಿಂದ 1 ಲಕ್ಷ 20 ಸಾವಿರ ಪಾವತಿಸಿಕೊಂಡು, 5,60,000 ರೂ. ಟ್ರ್ಯಾಕ್ಟರ್ ಕೊಟ್ಟು, ಅವರ ಹೆಸರಲ್ಲಿ 6,85,000 ರೂ. ಎತ್ತುವಳಿ ಮಾಡಿದ್ದಾರೆ.


ಬೆನೆತ್ ಸಿದ್ದಿ

ಹಳವಳ್ಳಿಯ ಸಣ್ಣ ಅಂತು ಸಿದ್ದಿ ಅವರ ಹೆಸರಲ್ಲಿ ಟ್ರ್ಯಾಕ್ಟರ್ ಸಾಲ ಎತ್ತಿದ ಜೋಡಿ, ಅವರಿಗೆ ಬರೀ ಟಿಲ್ಲರ್ ನೀಡಿ ಕೈತೊಳೆದುಕೊಂಡಿದೆ.

ಹೀಗೆ ಟ್ರ್ಯಾಕ್ಟರ್‌ನ ಮೂಲದರಕ್ಕಿಂತ ಹೆಚ್ಚಿನ ಸಾಲ ಎತ್ತಿ ಸ್ವಾಹಾ ಮಾಡಿದ್ದಲ್ಲದೇ, ರೈತರಿಂದ ಒಂದು ಲಕ್ಷ ಇಪ್ಪತ್ತು ಸಾವಿರ ಪಾವತಿ ಮಾಡಿಸಿಕೊಂಡು, ರೈತರ ಭೂಮಿಗೇ ಕುತ್ತು ತಂದಿದ್ದಾರೆ ಖೈತಾನ್ ಪ್ರಕಾಶ್ ಮತ್ತು ನಾಯಕ್. ಇದೆಲ್ಲದರ ನಡುವೆ ಸತ್ತವರ ಹೆಸರಲ್ಲೂ ಸಾಲ ಎತ್ತಿ ನುಂಗಿ ಹಾಕಲಾಗಿದೆ. 2005 ರಲ್ಲೇ ನಿಧನರಾದ ಹಳವಳ್ಳಿಯ ಕಲಿಯಾ ಸಿದ್ದಿ ಅವರ ಹೆಸರಲ್ಲಿ 2009 ರಲ್ಲಿ ಟ್ರ್ಯಾಕ್ಟರ್ ಸಾಲ ಎತ್ತಿ ಲಬಕ್ ಮಾಡಿದೆ ಈ ಜೋಡಿ!

ಇಷ್ಟಲ್ಲದೇ ಈಗ ಇದರ ವಿರುದ್ಧ ಧ್ವನಿ ಎತ್ತಿದ ಸಿದ್ದಿ ಸಂಘದವರು, ಡಿಎಸ್‌ಎಸ್‌ನವರ ಮೇಲೆ ಸುಳ್ಳು ಕಂಪ್ಲೇಂಟ್ ಕೊಟ್ಟು ಅವರನ್ನು ಜೈಲಿಗೆ ಹಾಕಿಸುತ್ತಿರುವ ಈ ಜೋಡಿಗೆ ಯಲ್ಲಾಪುರ, ಅಂಕೋಲಾ ಪಿಎಸ್‌ಐಗಳು ನೆರವು ನೀಡುತ್ತಿದ್ದಾರೆ. ಇವರೆಲ್ಲ ಸೇರಿ ಸಿದ್ದಿಗಳನ್ನು ಹೊಲೆಯರು, ಕೊಳಕರು ಎಂದು ಜಾತಿನಿಂದನೆ ಮಾಡಿ ಬೆದರಿಕೆ ಹಾಕುತ್ತಿದ್ದಾರೆ. ಸಿದ್ದಿ ಸಂಘದ ಅಧ್ಯಕ್ಷ ಬೆನಿತ್ ಸಿದ್ದಿಯೇ ತನಗೆ ಹಣದ ವಂಚನೆ ಮಾಡಿದ್ದಾರೆಂದು ಖೈತಾನ್ ಪ್ರಕಾಶ್ ನೀಡಿದ ಸುಳ್ಳು ದೂರನ್ನು ಒಪ್ಪಿದ ಪೊಲೀಸರು ಬೆನೆತ್‌ರನ್ನು ಎಂಟು ದಿನ ಜೈಲಿಗೆ ದೂಡಿಬಿಟ್ಟು, ತಾವೂ ರೊಕ್ಕಸ್ಥರ ಪರ ಎಂಬುದನ್ನು ಸಾಬೀತುಮಾಡಿದ್ದಾರೆ. ಬೆನೆತ್ ಜೈಲಲ್ಲಿರುವಾಗಲೇ ಇನ್ನೊಂದು ದೂರು ದಾಖಲಿಸಿದ ವಂಚಕ ಬ್ಯಾಂಕ್ ಮ್ಯಾನೇಜರ್ ನಾಯಕ್ 'ಬೆನೆತ್ ಸಹಚರರು ಬ್ಯಾಂಕಿಗೆ ಬಂದು ಚಾಕು ತೋರಿಸಿ, ತನ್ನಿಂದ 4 ಲಕ್ಷ ರೂ.ಗಳ ಚೆಕ್‌ಗೆ ಸಹಿ ಪಡೆದರು' ಎಂದು ಇನ್ನೊಂದು ಸುಳ್ಳು ದೂರು ನೀಡಿದ್ದಾನೆ. ಮಾನವಹಕ್ಕು ರಕ್ಷಣಾ ಆಯೋಗಕ್ಕೂ ದೂರು ನೀಡಿರುವ ಬೆನೆತ್ ಸಿದ್ದಿ ಹಾಗೂ ಇತರರು ತಮ್ಮ ರೈತರಿಗಾದ ಅನ್ಯಾಯ ಸರಿಪಡಿಸಿ ಎಂದು ಕೇಳುತ್ತಿದ್ದಾರೆ. ಅಮಾಯಕ, ಬಡ ಸಿದ್ದಿಗಳನ್ನು ವಂಚಿಸಿದ ಏಜೆಂಟ್ ಖೈತಾನ್ ಪ್ರಕಾಶ್, ಬ್ಯಾಂಕ್ ಮ್ಯಾನೇಜರ್ ಚಂದ್ರಶೇಖರ್ ನಾಯಕ್‌ರಂತಹ ಮನೆಹಾಳರಿಗೆ ಶಿಕ್ಷೆಯಾಗಿ, ಸಿದ್ದಿ ರೈತರಿಗೆ ನ್ಯಾಯ ಕೊಡಿಸುವ ಜವಾಬ್ದಾರಿ ಜಿಲ್ಲಾಡಳಿತ ಮತ್ತು ಸಿಂಡಿಕೇಟ್ ಬ್ಯಾಂಕ್‌ನವರ ಮೇಲಿದೆ.

• ಪಿ.ಕೆ. ಮಲ್ಲನಗೌಡರ್

ಯಾದಗಿರಿ ಮರ್ಡರ್: ಯಾರದೋ ಮನೆಗೆ ಬೆಂಕಿ ಇಟ್ಟು ಮೈ ಕಾಯಿಸಿಕೊಳ್ಳುವ ದರ್ಶನಾಪುರ?

ಕಳೆದ ಬಾರಿ ಪ್ರಕಟಗೊಂಡ ಯಾದಗಿರಿಯ ರಾಜಕೀಯ ಕೊಲೆಯ ಇನ್ನೂ ತಣ್ಣಗಾಗಿಲ್ಲ, ಇಲ್ಲಿ ಈಗ ಕೊಲೆ ಹಿಂದಿನ ರಾಜಕೀಯದ ಚರ್ಚೆ ಸುತ್ತಿದೆ.

ಯಾವುದೋ ಒಂದು ಸಂದರ್ಭದಲ್ಲಿ ಶೇಖರಗೌಡ ಹೊಸ್ಮನಿ ಕಾಂಗ್ರೆಸ್ ಕಾರ್ಯಕರ್ತನಾಗಿ ದರ್ಶನಾಪುರ ಅಂದು ಪ್ರತಿನಿಧಿಸುತ್ತಿದ್ದ ಜೆಡಿಎಸ್ ನ್ನು ವಿರೋಧಿಸಿರಬಹುದು, ವ್ಯಕ್ತಿಗತವಾಗಿಯೂ ಶೇಖರಗೌಡ ಹೊಸ್ಮನಿ ದರ್ಶನಾಪುರರಿಗೆ ಹಿಡಿಸಲಿಕ್ಕಿಲ್ಲ, ಅಂದಮಾತ್ರಕ್ಕೆ ಅವರ ಊರಲ್ಲಿಯೇ ಗೆ ಬತ್ತಿ ಇಟ್ಟು, ಅದರಲ್ಲಿ ತಮ್ಮ ಮೈ ಕಾಯಿಸಿಕೊಳ್ಳುವುದು ಎಷ್ಟು


ದರ್ಶನಾಪುರ್

ಏಕೆಂದರೆ ಆರು ತಿಂಗಳ ಹಿಂದೆ ಸಿಂದಗಿಯ ಮುಖ್ಯ ರಸ್ತೆಯಲ್ಲಿ ಶೇಖರಗೌಡನ ಇನ್ನೊಬ್ಬ ಮಗ ಶರಣಗೌಡ ಕೊಲೆಯಾದಾಗಿನಿಂದ ಒಂದೇ ಸಮ ದರ್ಶನಾಪುರರ ಕೈಕಾಲು ಹಿಡಿದು ಅವಲತ್ತುಕೊಂಡು ಹೇಗಾದರೂ ಸೈ ಕಾಂಪ್ರೋಮೈಜ್ ಮಾಡಿಸಿ ಎಂದು ಶೇಖರಗೌಡ ಗೋಗರೆದಿದ್ದರು. ಕೊನೆಗೆ ಗುಲಬರ್ಗಾದಲ್ಲಿ ಸಭೆ ಸೇರಿದ ಹೊಸ್ಮನಿ ಕುಟುಂಬ ದರ್ಶನಾಪುರರನ್ನು ಎದುರಿಗಿಟ್ಟುಕೊಂಡು ಕೊನೆಯದಾಗಿ ಮುತ್ತಿನಂಥ ಒಂದು ಮಾತನಾಡಿದ್ದರು. "ನಾವೆಲ್ಲ ಕುಂತಾಗ ಅಮೀನರೆಡ್ಡಿ ಮಾಲಿ ಪಾಟೀಲ ಮುಂತಾದವರನ್ನು ಕರಸ್ರೀ. ಆತ ಒಪ್ಪದೇ ಹೋದ್ರ ಇನ್ನು ಮುಂದೆ ನಮ್ಮ ಜೊತೆ ನಿಮ್ಮ ಸಂಬಂಧ ಇಟ್ಟುಕೊಳ್ಳುವುದಿಲ್ಲ ಅಂತ ಖಂಡತುಂಡವಾಗಿ ಹೇಳಿಬಿಡಿ" ಎಂದು ಅವರು ಹೇಳಿದ್ದರು. ಅದಕ್ಕೆ ದರ್ಶನಾಪುರ: "ಹಂಗಂತ ನಾನ್ಯಾಕ ಹೇಳ್ಲಿ ಇಬ್ರೂ ಕಾಂಪ್ರೋಮೈಸ್ ಆಗ್ರಿ ಅಂತ ಮಾತ್ರ ಹೇಳ್ತೀನಿ. ಉಳದದ್ದು ನನಗ ಗೊತ್ತಿಲ್ಲ" ಎಂದು ಜಾರಿಕೊಂಡಿದ್ದರು.

ಶಾಸಕತ್ವದಂಥ ಜವಾಬ್ದಾರಿಯ ಸ್ಥಾನದಲ್ಲಿರುವ ವ್ಯಕ್ತಿಯೋರ್ವ ಅತ್ಯಂತ ತೂಕಬದ್ಧವಾದ ಮಾತುಗಳನ್ನು ಆಡಬೇಕೆಂದು ಬಯಸುವುದು ತಪ್ಪೇ?

ಇದಕ್ಕಿಂತಲೂ ಮತ್ತೊಂದು ಅನುಮಾನಾಸ್ಪದ ಸಂಗತಿಯೆಂದರೆ 16-5-2010 ರಂದು ನೇರ ಯಾಳಗಿ ಗ್ರಾಮಕ್ಕೆ ಬಂದಿಳಿದ 21 ಜನ ನಟೋರಿಯಸ್ ಕಿಲ್ಲರ್‌ಗಳನ್ನು ಅಲ್ಲಿನ ಪಿಎಸ್‌ಐ ಎಲ್.ಸಿ.ಕೋಲ್ಕರ್ ಬಂಧಿಸಿದಾಗ ಇದೇ ದರ್ಶನಾಪುರ ಕೋಲ್ಕರ್‌ಗೆ ಫೋನಾಯಿಸಿ "ಅವರೆಲ್ಲ (ಹಂತಕರೆಲ್ಲ) ಅಮೀನರೆಡ್ಡಿ ಮಾಲೀ ಪಾಟೀಲರಿಗೆ ಬೀಗರು ಆಗಬೇಕು. ಸುಮ್ನೆ ಅವ್ರನ್ನೆಲ್ಲ ಬಂಧಿಸಿ, ಇಲ್ಲದ ತ್ರಾಸ್ ಕೊಟ್ರ ಹೆಂಗರ್ರೀ.... ಅವ್ರು ಯಾಳಗಿ ಜಾತ್ರಿಗಿ ಬಂದಾರ... ಮುಂದ ಏನಾದರೂ ಅನಾಹುತ ಆದ್ರ ನೀವೇ ಅದಕ್ಕೆ ಜವಾಬ್ದಾರಿ ಆಗಬೇಕಾಗತಾದ..." ಎಂದು ಎಚ್ಚರಿಕೆಯ ಧ್ವನಿಯಲ್ಲಿ ಧಮಕಿ ಹಾಕಿದ್ದರು. ಆದರೆ ಇದಕ್ಕೆ ಸೊಪ್ಪು ಹಾಕದ ಕೋಲಕರ್ "ಸರ್ ನಾನು ಹಿಡದ ಇಪ್ಪತ್ತೊಂದು ಮಂದ್ಯಾಗ ಒಬ್ರೂ ರೆಡ್ಡಿ ಜನಾಂಗದವರಿಲ್ಲ, ಅವರೆಲ್ಲ ಕುಂಚಿಗೋರು, ಬಾಟ್ರು, ಈಡಿಗರು ಇದ್ದಾರ್ರೀ..... ಅಲ್ದೇ ಯಾಳಗ್ಯಾಗ ಈಗ ಯಾವುದೇ ಜಾತ್ರಿ ಗೀತ್ರಿ ಇಲ್ಲ! ಇವ್ರೆಲ್ಲರಲ್ಲಿ ತಪಾಸಣೆ ಮಾಡಿದಾಗ ಕಾರಪುಡಿ, ಮಚ್ಚುಗಳು ಸಿಕ್ಯಾವ. ಅಲ್ದೇ ಈ ಜನ ಈಗಾಗಲೇ ಬಿಜಾಪುರ, ಹುಬ್ಬಳ್ಳಿ, ಧಾರವಾಡದ ಪೋಲಿಸರಿಗೆ ಬೇಕಾಗ್ಯಾರ...." ಎಂದು ಫೋನಿಟ್ಟಿದ್ದರು.


ಈಗ ಕೋಲಕರ್ ಅವರು ಈ ಸುಪಾರಿ ಕಿಲ್ಲರ್‌ಗಳ ಮೇಲೆ 307 ಕೇಸ್ ಹೆಟ್ಟಿ ಜೈಲಿಗೆ ಕಳುಹಿಸಿದ್ದರು. ಆದರೆ ಇವರಲ್ಲಿ ಯಾವಾಗ ಹತ್ತೆಂಟು ಮಂದಿ ಬೇಲ್ ಮೇಲೆ ಹೊರಬಂದರೋ ಆಗಲೇ ಯಾದಗಿರಿಯ ಪ್ರಮುಖ ರಸ್ತೆಯಲ್ಲಿ ರಾಜುಗೌಡ ಯಾಳಗಿಯ ಕೊಲೆ ನಡೆದುಹೋಯಿತು.

ಇನ್ನಾದರೂ ದರ್ಶನಾಪುರ ಶರಣಬಸಪ್ಪಗೌಡ ಹಿಂದೆ ಆಗಿರುವ ಕಹಿ ಘಟನೆಯನ್ನೆಲ್ಲ ಮರೆತು ಹೃದಯ ವೈಶಾಲ್ಯತನ ತೋರಿ ಎರಡು ಕುಟುಂಬಗಳನ್ನು ಒಂದು ಮಾಡುವ ಮೂಲಕ ಹೊಸ ಇತಿಹಾಸಕ್ಕೆ ನಾಂದಿ ಹಾಡಲಿ ಎಂದು ಪತ್ರಿಕೆ ಆಶಿಸುತ್ತದೆ.

ಇಲ್ಲದೆ ಹೋದರೆ ಕೆಲವೇ ತಿಂಗಳುಗಳಲ್ಲಿ ಬಾಪುಗೌಡ ಅಗತೀರ್ಥ ಎಂಬ ಮತ್ತೊಬ್ಬ ಯುವಕ(ರಾಜುಗೌಡನ ಗೆಳೆಯ)ನ ದುರ್ಮರಣದ ವಾರ್ತೆಯನ್ನು ಎಲ್ಲರೂ ಕೇಳಬೇಕಾಗುತ್ತದೆ. ಇದೆಲ್ಲ ದರ್ಶನಾಪುರಗೆ ಕಳಂಕ ಅಲ್ಲವೇ?

• ವರದಿಗಾರ

ಕಾಳಿಂಗರಾವ್ ಗೆಳತಿಯರ ಬದುಕು ಉದಯವಾಗಲೇ ಇಲ್ಲ...



ಕಲಾವಿದರ ಬದುಕು ಯಾಕೆ ಕೆಲವೊಮ್ಮೆ ಹೀಗಾಗಿ ಬಿಡುತ್ತೆ? – ಹಲವು ಕಲಾವಿದರ ಬದುಕಿನ ಘೋರತೆಯನ್ನು ಕಂಡ ಯಾರಿಗಾದರೂ ಹೀಗನ್ನಿಸದೇ ಇರಲಾರದು.

ಬಹುಶಃ ಅರವತ್ತು ಮತ್ತು ಎಪ್ಪತ್ತರ ದಶಕದ ಸಿನಿಮಾ ಅಭಿಮಾನಿಗಳು, ಕಲಾರಾಧಕರಿಗೆ ಪಿ. ಕಾಳಿಂಗ ರಾವ್ ಮತ್ತು ಅವರ ಎಡಬಲಕ್ಕೆ ಕೂತು ಸಂಗೀತ ಕಛೇರಿ ನಡೆಸಿ ಕೊಡುತ್ತಿದ್ದ ಸೋಹನ್ ಕುಮಾರಿ ಮತ್ತು ಮೋಹನ್ ಕುಮಾರಿ ಎಂಬ ಕಲಾವಿದೆಯರ ಪರಿಚಯವಿದ್ದೇ ಇರುತ್ತದೆ.

ಕರ್ನಾಟಕದ ಕೋಗಿಲೆ ಪಿ. ಕಾಳಿಂಗರಾವ್ ಕಣ್ಮರೆಯಾಗಿ ಈಗ್ಗೆ ಇಪ್ಪತ್ತೊಂಭತ್ತು ವರ್ಷಗಳೇ ಕಳೆದುಹೋಗಿವೆ. ಆದರೆ ಅವರನ್ನೇ ನಂಬಿ, ಅವರನ್ನೇ ಆರಾಧಿಸಿಕೊಂಡು ಎರಡು ಜೀವಗಳಿದ್ದವು. ಆ ಎರಡು ಜೀವಗಳಲ್ಲಿ ಒಂದು ಜೀವ ಮೊನ್ನೆಯಷ್ಟೇ ಉಸಿರು ನಿಲ್ಲಿಸಿದೆ.


ಹೌದು, ಕಲಾವಿದ ಸಹೋದರಿಯರಾದ ಸೋಹನ್ ಕುಮಾರಿ ಮತ್ತು ಮೋಹನ್ ಕುಮಾರಿಯರಲ್ಲಿ ಕಿರಿಯರಾದ ಮೋಹನ್ ಕುಮಾರಿ ಮೊನ್ನೆಯಷ್ಟೇ ತೀರಿಕೊಂಡರು.

ಒಂದು ಕಾಲಕ್ಕೆ ತಮಿಳು, ತೆಲುಗು ಸೇರಿದಂತೆ ಭಾರತದ ಹಲವಾರು ಭಾಷೆಯ ಚಿತ್ರರಂಗದಲ್ಲಿ ತಮ್ಮ ಮೈಮರೆಸುವ ಕಂಠದಿಂದ ಹಾಡುತ್ತಿದ್ದ, ಒಂದಷ್ಟು ಚಿತ್ರಗಳಲ್ಲಿ ನಟಿಸಿದ್ದ, ತಮ್ಮ ನೃತ್ಯದಿಂದ ಅಪಾರ ಪ್ರೇಕ್ಷಕರನ್ನು ಸೆಳೆದಿಟ್ಟುಕೊಂಡಿದ್ದ ಈ ಸಹೋದರಿಯರ ಇವತ್ತಿನ ಕಡುಕಷ್ಟದ ಬದುಕನ್ನು ನೋಡಿದರೆ ಎಂಥವರ ಮನಸ್ಸೂ ಆರ್ದ್ರಗೊಳ್ಳುತ್ತದೆ.

ಹಿಂದಿಯ 'ಪ್ರೇಂಸಾಗರ್' ಚಿತ್ರದಿಂದ ಸಂಗೀತ ನಿರ್ದೇಶಕರಾಗಿ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿದ ಕಾಳಿಂಗ ರಾವ್ ಬಾಲನಟನಾಗಿಯೇ ಹಲವಾರು ನಾಟಕಗಳಲ್ಲಿ ನಟಿಸಿದ್ದರು. ನಂತರ ಕೊಲ್ಹಾಪುರದಲ್ಲಿ ಶಾಸ್ತ್ರೀಯ ಸಂಗೀತ ಕಲಿತು ಕೊಲ್ಹಾಪುರ ಅರಮನೆಯಲ್ಲಿ ಕಛೇರಿ ನಡೆಸಿದ ಹೆಗ್ಗಳಿಕೆ ಅವರದ್ದು. 1941ರಲ್ಲಿ ಬಂದ 'ವಸಂತ ಸೇನೆ' ಚಿತ್ರದಲ್ಲಿ ಜೈಲು ಸನ್ಯಾಸಿಯ ಪಾತ್ರದಲ್ಲಿ ನಟಿಸಿದ್ದ ಕಾಳಿಂಗರಾವ್ ಅದೇ ಚಿತ್ರದ ನಾಲ್ಕು ಹಾಡುಗಳಿಗೆ ಸಂಗೀತವನ್ನೂ ನೀಡಿದ್ದರು. ನಂತರ ಕೆಂಪರಾಜ್ ಅರಸ್ ನಿರ್ದೇಶನದ 'ಕೃಷ್ಣಲೀಲೆ', 'ಭಕ್ತ ರಾಮದಾಸ', ಕಲ್ಯಾಣ್ ಕುಮಾರ್ ನಾಯಕನಾಗಿ ನಟಿಸಿದ ಮೊದಲ ಚಿತ್ರ 'ನಟ ಶೇಖರ' ಸೇರಿದಂತೆ ಕನ್ನಡದ ಹಲವಾರು ಚಿತ್ರಗಳಿಗೆ ಸಂಗೀತ ನಿರ್ದೇಶನ ಮಾಡಿ ತಮ್ಮದೇ ಕಂಠದಲ್ಲಿ ಹಾಡಿದ್ದರು ಕಾಳಿಂಗ ರಾವ್. ಕುವೆಂಪು ಕಾವ್ಯಗಳಿಗೆ, ರಾಜರತ್ನಂರ ಸಾಲುಗಳಿಗೆ ತಮ್ಮ ಸ್ವರ ಸಂಯೋಜನೆಯಿಂದ ಜೀವ ತಂದುಕೊಟ್ಟವರು ಕಾಳಿಂಗ ರಾವ್.

ಮಹಾರಾಷ್ಟ್ರ ಮೂಲದ ಮೋಹನ್ ಕುಮಾರಿ ಮತ್ತು ಸೋಹನ್ ಕುಮಾರಿ ಇಬ್ಬರೂ ಕಾಳಿಂಗ ರಾವ್ ಅವರ ಸಂಪರ್ಕಕ್ಕೆ ಬಂದ ಮೇಲಂತೂ ಅತಿಹೆಚ್ಚು ಸಮಯವನ್ನು ಅವರೊಂದಿಗೇ ಕಳೆಯುತ್ತಿದ್ದರು. ಕನ್ನಡವೇ ಗೊತ್ತಿರದ ಈ ಮಹಾರಾಷ್ಟ್ರ ಮೂಲದ ತಿವಾರಿ ಹೆಣ್ಣುಮಕ್ಕಳಿಗೆ ಸ್ಪಷ್ಟವಾಗಿ ಕನ್ನಡ ಕಲಿಸಿ, ಅವರಿಗೆ ಸಂಗೀತ ಕಲಿಸಿ ತಮ್ಮ ಆಪ್ತ ಶಿಷ್ಯೆಯರನ್ನಾಗಿಸಿಕೊಂಡಿದ್ದರು. ಅವರು ಕಛೇರಿಗಳಲ್ಲಿ ಹಾಡುವಾಗ, ರೆಕಾರ್ಡಿಂಗ್‌ನಲ್ಲಿರುವಾಗ ಜೊತೆಯಾಗೇ ಇರುತ್ತಿದ್ದರು ಈ ಸಹೋದರಿಯರು.

ಅಸಲಿಗೆ ಈ ಮೋಹನ್ ಮತ್ತು ಸೋಹನ್ ಸಹೋದರಿಯರಿಗೂ ಕಾಳಿಂಗ ರಾವ್‌ಗೂ ಏನು ಸಂಬಂಧ ಎನ್ನುವ ಪ್ರಶ್ನೆಗೆ ಈ ಕ್ಷಣದವರೆಗೂ ಸ್ಪಷ್ಟವಾದ ಉತ್ತರ ಯಾರಲ್ಲೂ ಇಲ್ಲ. "ಕಾಳಿಂಗರಾವ್‌ಗೆ ಆದಾಗಲೇ ಮದುವೆಯಾಗಿ ಮಡದಿ ಮಕ್ಕಳಿದ್ದೂ ಈ ಸಹೋದರಿಯರೊಂದಿಗೇ ಜೀವನ ನಡೆಸುತ್ತಿದ್ದರು" ಎಂಬುದು ಚಿತ್ರರಂಗದ ಆಳಅಗಲ ಬಲ್ಲವರ, ಕಾಳಿಂಗ ರಾವ್‌ರನ್ನು ತೀರಾ ಹತ್ತಿರದಿಂದ ಅರಿತವರ ಸ್ಪಷ್ಟ ಮಾತು. ಆದರೆ ಸೋಹನ್ ಕುಮಾರಿ ಹೇಳುವ ಪ್ರಕಾರ ಕಾಳಿಂಗ ರಾವ್ ಈ ಸಹೋದರಿಯರಿಗೆ 'ಅಂಕಲ್' ಮಾತ್ರ ಆಗಿದ್ದರು. "ಅಂಕಲ್ ನಮಗೆ ಯಾವ ಕೊರತೆಯನ್ನೂ ಮಾಡಲಿಲ್ಲ, ತಮ್ಮ ಕಣ್ಣಿನಲ್ಲಿಟ್ಟುಕೊಂಡು ನಮ್ಮನ್ನು ಸಾಕಿದರು.



ಮೋಹನ್ ಕುಮಾರಿ ಅಂದು ಮತ್ತು ಸಾಯುವ ಮುನ್ನ

ನಮ್ಮಿಬ್ಬರಿಗೂ ಮದುವೆ ಮಾಡುವುದಕ್ಕೆ ಸಾಕಷ್ಟು ಪ್ರಯತ್ನಪಟ್ಟರು. ಆದರೆ ಅದು ಕೈಗೂಡಲೇ ಇಲ್ಲ. ಕಾಳಿಂಗ ರಾವ್ ಅವರು ಹೋದ ಮೇಲೆ ನಮ್ಮ ಬದುಕೇ ನಶ್ವರವಾಗಿ ಹೋಯಿತು" – ಇದು ಸೋಹನ್ ಹೇಳುವ ಮಾತು.

ಇರಲಿ, ಸದ್ಯಕ್ಕೆ ಕಾಳಿಂಗ ರಾವ್‌ಗೂ ಈ ಮೋಹನ್ ಮತ್ತು ಸೋಹನ್ ಸಹೋದರಿಯರಿಗೂ 'ಅದೆಂಥ ಸಂಬಂಧವಿತ್ತು?' ಅನ್ನೋದನ್ನು ಸಂಶೋಧಿಸುವ ತುರ್ತೂ ಇಲ್ಲ, ಅದರ ಅಗತ್ಯವೂ ಅಲ್ಲ.

ಈ ಸಹೋದರಿಯರು ಕಾಳಿಂಗ ರಾವ್‌ರೊಂದಿಗೆ ಗುರುತಿಸಿಕೊಂಡಿದ್ದರು ಎಂಬುದು ಒಂದೆಡೆಯಾದರೆ ಇವರಿಬ್ಬರೂ ಅಪ್ರತಿಮ ಕಲಾವಿದೆಯರಾಗಿದ್ದರು ಎಂಬ ಕಾರಣಕ್ಕಾದರೂ ನಮ್ಮ ಸರ್ಕಾರಗಳು, ಸಂಘಸಂಸ್ಥೆಗಳು ಅವರ ಬಗ್ಗೆ ಒಂದಿಷ್ಟು ಕಾಳಜಿ ವಹಿಸಬೇಕಿತ್ತು.

ಕಾಳಿಂಗರಾವ್ ನಿಧನದ ನಂತರ ಅಕ್ಷರಶಃ ಬೀದಿಗೆ ಬಿದ್ದಂತಾಗಿದ್ದ ಇವರ ಬದುಕಿಗೆ ಒಂದಿಷ್ಟಾದರೂ ಸಹಾಯಹಸ್ತ ನೀಡಿದವರು ಅಂದರೆ ವಾಟಾಳ್ ನಾಗರಾಜ್. ಕಾಳಿಂಗರಾವ್ ಅವರ ಆಪ್ತ ವಲಯದಲ್ಲಿ ವಾಟಾಳ್ ಕೂಡಾ ಒಬ್ಬರಾಗಿದ್ದರು. ಸಂಜೆಯ ಖರ್ಚಿಗೆ ಕಾಸಿಲ್ಲದಿದ್ದಾಗ ಸೀದಾ ವಾಟಾಳ್ ಬಳಿ ಹೋಗಿ ಅವರ ಜೇಬಿಗೆ ಕೈಹಾಕಿ ಐವತ್ತು, ನೂರು ರೂಪಾಯಿ ತೆಗೆದುಕೊಳ್ಳುವ ಧೈರ್ಯವಿದ್ದದ್ದು ಕಾಳಿಂಗ ರಾವ್‌ಗೆ ಮಾತ್ರ. "ಸರ್ಪ ಬಂತು ದುಡ್ಡು ಕೊಟ್ಟುಬಿಡಬೇಕು. ಇಲ್ಲದಿದ್ದರೆ ಕಚ್ಚುವುದು ಗ್ಯಾರಂಟಿ" ಎಂದು ವಾಟಾಳ್ ಕಾಳಿಂಗ ರಾವ್‌ಗೆ ಸ್ನೇಹಪೂರ್ವಕವಾಗಿಯೇ ಸಹಕರಿಸುತ್ತಿದ್ದರಂತೆ. ಇನ್ನೂ ಕೆಲವೊಮ್ಮೆ ಪ್ರೊ. ಕೆ.ಎಸ್. ನಿಸಾರ್ ಅಹಮದ್ ಪಾಠ ಹೇಳಿಕೊಡುತ್ತಿದ್ದ ಕಾಲೇಜಿಗೇ ಹೋಗಿ "ಮಿ. ನಿಸಾರ್, ಪ್ಲೀಸ್ ಕಮ್ ಔಟ್‌ಸೈಡ್. ಗೀವ್ ಮಿ ಸಮ್ ಮನಿ" ಎಂದು ಕೇಳಿ ಹಣ ಪಡೆಯುತ್ತಿದ್ದರಂತೆ ಕಾಳಿಂಗ ರಾವ್. ಸಾಂಸ್ಕೃತಿಕ ನಂಟೇ ಅಂಥಾದ್ದು....


ಮೊನ್ನೆ ಮೋಹನ್ ಕುಮಾರಿ ನಿಧನರಾದಾಗಲೂ ಅದೇ ವಾಟಾಳ್ ಬಂದು ಎಲ್ಲ ಕಾರ್ಯಗಳಿಗೂ ನೆರವಾಗಿ ಸೋಹನ್‌ರ ಮುಂದಿನ ಬದುಕಿಗೆ ಒಂದಿಷ್ಟು ಸಹಾಯ ಮಾಡುವ ಮಾತಾಡಿದ್ದಾರೆ.

ಕನ್ನಡ ಸಾಂಸ್ಕೃತಿಕ ಲೋಕದ ಏಳ್ಗೆಗೆ ಶ್ರಮಿಸಿರುವ ಈ ಕಲಾವಿದೆಯರಿಗೆ ಹಣಕಾಸಿನ ವಿಚಾರದಲ್ಲಿ ತೀರಾ ಕೆಟ್ಟ ಬಡತನವಂತೂ ಇಲ್ಲ. ಆದರೆ ಇವರಿಗೆ ಆಸರೆಯದ್ದೇ ಕೊರತೆ. ಬೆಂಗಳೂರಿನ ಶೇಷಾದ್ರಿಪುರಂನಲ್ಲಿ ಸ್ಲಂಬೋರ್ಡ್ ಇದೆ. ಅದರ ಪಕ್ಕಕ್ಕೆ ಎರಡು ರಸ್ತೆ ದಾಟಿದರೆ ಸಣ್ಣದೊಂದು ರಸ್ತೆ ಸಿಗುತ್ತದೆ. ಆ ರಸ್ತೆಯ ಎರಡನೇ ಅಂತಸ್ತಿನ ಸಣ್ಣದೊಂದು ಮನೆಯಲ್ಲಿ ಇವರು ಭೋಗ್ಯಕ್ಕಿದ್ದಾರೆ. ಇಷ್ಟು ವರ್ಷ ಆರೋಗ್ಯವಾಗೇ ಇದ್ದ ಮೋಹನ್ ಕುಮಾರಿ ಎರಡು ತಿಂಗಳ ಹಿಂದೆ ಮನೆಯ ಒದ್ದೆ ನೆಲದ ಮೇಲೆ ಜಾರಿಬಿದ್ದು ಕಾಲು ಮತ್ತು ಸೊಂಟಕ್ಕೆ ಪೆಟ್ಟು ಮಾಡಿಕೊಂಡಿದ್ದರು. ವಯಸ್ಸು ಅರವತ್ತೈದಾಗಿದ್ದರಿಂದ ಮತ್ತು ಆಸರೆಗೆ ಯಾರೂ ಇಲ್ಲದ್ದರಿಂದ ಉಸಿರು ನಿಲ್ಲುವ ಕೊನೇ ಘಳಿಗೆಯ ತನಕ ಮೋಹನ್ ಕುಮಾರಿ ನರಳಿದ್ದಾರೆ. ಅಕ್ಕ ಸೋಹನ್‌ಗೆ ಕೂಡಾ ಕಾಲು ಬಾವು ಬಂದು, ಕೀವು ತುಂಬಿಕೊಂಡಿದೆ. ಮೆಟ್ಟಲಿಳಿದು ಎರಡು ಹೆಜ್ಜೆ ಇಡುವುದೂ ಅವರಿಂದ ಕಷ್ಟ ಎಂಬ ಸ್ಥಿತಿಯಲ್ಲಿ ಅವರಿದ್ದಾರೆ. ಹೀಗಾಗಿ ಮನೆ ಮಾಲೀಕ ರಾಜೇಂದ್ರ ಮತ್ತು ಅವರ ಪತ್ನಿ ಸುಮತಿ ದಿನಕ್ಕೆರಡು ಹೊತ್ತು ಊಟ ನೀಡಿ ಈ ಹಿರಿಯ ಜೀವಗಳನ್ನು ಪೋಷಿಸಿದ್ದಾರೆ.



ಸೋಹನ್ ಈಗ ಹೀಗಿದ್ದಾರೆ....

ಇಂಥಾದ್ದರಲ್ಲಿ ಮೊನ್ನೆ ಮೋಹನ್ ಕುಮಾರಿ ಪ್ರಾಣ ಬಿಟ್ಟಾಗ ಅವರೊಂದಿಗೆ ಸೋಹನ್ ಬಿಟ್ಟರೆ ಬೇರೆ ಯಾರೂ ಇರಲಿಲ್ಲ. ಸಣ್ಣ ವಯಸ್ಸಿನಿಂದಲೂ ಒಟ್ಟೊಟ್ಟಿಗೇ ಬದುಕಿದ್ದ ಜೋಡಿ ಜೀವಗಳಿವು. ತನ್ನ ಕಣ್ಣೆದುರೇ ತನ್ನ ಪ್ರೀತಿಯ ತಂಗಿ ಜೀವ ತೊರೆದದ್ದನ್ನು ಕಂಡು ಸೋಹನ್‌ಗೆ ದಿಕ್ಕೇ



ಕಾಳಿಂಗರಾವ್ ಜೊತೆ ಮೋಹನ್ ಮತ್ತು ಸೋಹನ್...

ತೋಚಲಿಲ್ಲವಂತೆ. ಯಾರಿಗಾದರೂ ಫೋನ್ ಮಾಡೋ ವೆಂದರೆ ಮನೆಯ ದೂರವಾಣಿ ಸಂಪರ್ಕವೂ ಕಡಿ ಹೋಗಿತ್ತಂತೆ. ಪಕ್ಕದ ಮನೆಯವರ ಮೊಬೈಲಿನಲ್ಲಿ ಕರೆನ್ಸಿ ಇರಲಿಲ್ಲವಂತೆ. ಕಡೆಗೆ ಇನ್ಯಾರದ್ದೋ ಮೊಬೈಲ್ ಪಡೆ ಸೋಹನ್ ತಂಗಿಯ ಸಾವಿನ ವಿಚಾರವನ್ನು ತವ ಹಿತೈಷಿಗಳಿಗೆ ತಿಳಿಸಿದ್ದಾರೆ. ನಂತರ ಸಿ.ವಿ. ಶಿವಶಂಕರ ವಕೀಲ ಬಸವರಾಜು, ಪಾರ್ಥಸಾರಥಿ, ಹೊಂಬಾಳೆ ಫಲ್ಗು ವಾಟಾಳ್‌ರಂಥವರೆಲ್ಲಾ ಬಂದು ಸೋಹನ್‌ರಿಗೆ ನೆರವಾ ಮೋಹನ್‌ರಿಗೆ ಅಂತಿಮ ಗೌರವ ಸಲ್ಲಿಸಿದ್ದಾರೆ.

ಕಳೆದ ತಿಂಗಳು ಮೋಹನ್ ಮ ಸೋಹನ್ ಇಬ್ಬರೂ ಒಂದೊಂದು ಆಸ್ಪತ್ರೆಗೆ ದಾಖಲಾಗಿದ್ದರಂತೆ. ಮೋಹ ರನ್ನು ನೋಡಿಕೊಳ್ಳಲು ಆಯ ಒಬ್ಬಾಕೆಯನ್ನು ನೇಮಿಸಿದ್ದರಂತೆ. ಅಬಿ ಎನ್ನುವ ಆ ಹೆಣ್ಣು 'ಹೇಗೂ ವ ಹೆಂಗಸರು. ಏನು ಮಾಡಿದರೂ ನಡೆ ತ್ತದೆ' ಎಂದು ಲೆಕ್ಕಹಾಕಿ ಮನೆಯಲ್ಲಿ ನೂರು ಗ್ರಾಂ ತೂಕದ ಬೆಲೆಬಾಳು ಚಿನ್ನದ ಒಡವೆಗಳನ್ನು ಹೊತ್ತೊಯ್ದ ಬಿಟ್ಟಳಂತೆ. ಈ ವಯಸ್ಸಿನಲ್ಲಿ ಸೋಹ ಆ ಒಡವೆಗಳನ್ನು ಬಳಸುವುದಿ ವಾದರೂ, ಅವರ ಆರ್ಥಿಕ ಸಂಕಷ್ಟದ ಆ ಬಂಗಾರ ಉಪಯೋಗಕ್ಕೆ ಬರುತ್ತಿ ಆದರೆ ಅವರಿವರ ನೆರವಿನಿಂದ ಸೋಹ ಶೇಷಾದ್ರಿಪುರಂ ಠಾಣೆಗೆ ವಿಷಯ ಮುಟ್ಟಿಸಿದರೂ ಪೊಲೀಸರು ಈವರೆಗೂ ಯಾವ ಕ್ರಮವನ್ನೂ ತೆಗೆ ಕೊಂಡಿಲ್ಲ.

ಒಂದು ಕಾಲಕ್ಕೆ ಬೆಳಗ್ಗೆ ಎದ್ದು ರೇಡಿಯೋ ಆ ಮಾಡಿ, ಆಕಾಶವಾಣಿ ಹಾಕಿದರೆ ಕಾಳಿಂಗ ರಾವ್ ಹಾಡಿ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಹಾ ಕೇಳಿಬರುತ್ತಿತ್ತು. ಆದರೆ ಸಾವಿರಾರು ರಾತ್ರಿ ಕಳೆದು ಬೆಳಗ್ಗೆ ಹರಿದಿದ್ದರೂ ಕಾಳಿಂಗ ರಾವ್ ಅವರನ್ನೇ ನಂಬಿದ್ದ ಮೋಹ ಮತ್ತು ಸೋಹನ್ 'ಕುಮಾರಿ'ಯರ ಬದುಕು ಉದ ವಾಗಲೇ ಇಲ್ಲ...

• ಅರುಣ್ ಕುಮಾರ್.
arunodayagc@gmail.co

ಮರಳ ಕವಿ

• ಸುಮಾ ಎಂಬಾರ್

"ಕವನ ಓದು" ಎಂದು ಅಪ್ಪಣೆ ಕೊಟ್ಟೆ ಕವಿಗೆ.
"ಇಡು ಅಕ್ಷರಲಕ್ಷವ" ಅಂದ.
ಎಲಾ ಇವನ ಧಿಮಾಕೆ?!
"ನಡಿ ಅಲೆಗಳ ತೀರಕ್ಕೆ ಮೊದಲು.
ಅಕ್ಷಯವಾಗಲಿ ಕಲ್ಪನೆ" –ಅಂದೆ.
"ಏನು?! ಮರಳಿನ ಕಣವಾ? ಅದರಲ್ಲೇ ಎಲ್ಲ ಕಾಣಬೇಕಾ?
ಮರಳ ಮೇಲೆ ಬರೆಯಬೇಕು. ಏರಿ ಬರುವ ನೀರು
ತೊಳೆವ ಅಕ್ಷರಕ್ಕೂ ಲಕ್ಷ ನೀಡು" ಅಂದ.
"ಅಶಾಂತ ಉದ್ಯಮಿ ನೀರು ; ನಿರಂತರ ಕಡೆದಿದೆ ಮರಳ:
ಅನಿವಾರ್ಯ ಕರ್ಮವೆಂದು.
ಒಂದು ಕಣ ಮಾಡಲು ಸಾಧ್ಯವೇ ನಿನಗೆ ಮರುಳ?"
–ಅಲೆಯಲೆಯುಲಿಯುವ ನಲಿವಿನ ಪದ್ಯ ಕಿವಿಯಲಿ ನಿಲಿಸಿದ:
ಈ ಚಿಪ್ಪಿನೊಳಗೆ ಹೊರಳಿ ಹೊರಳಿ ಮುತ್ತಾಯಿತು.
–ಸಹಜದ ಕವಿಗೆ ಧನ್ಯವಾದ.



...ದ್ದಿಕೆ ಕರ್ನಾಟಕದ ಪ್ರಾಬ್ಲಮ್ಮು ಟೋಟಲ್ಲಿ ಮೂರು!

...ಳಿ ನಂಬಿಕೆ ಕಳೆದುಕೊಂಡಿತ್ತು, ಈಗ ಗೇಣುದ್ದ ...ಪ ಪೈರಿಗೆ ಗೊಬ್ಬರ ಹಾಕುವುದೊ ಬಿಡುವುದೊ ...ನ್ಯಾಚಾರದಲ್ಲಿ ತೊಡಗಿದ್ದವರಿಗೆ ಯಾರೂ ಧೈರ್ಯ ...ಚಿರಲಿಲ್ಲ. ಒಂದು ವೇಳೆ ಸೀಮೆ ಗೊಬ್ಬರ ...ಬರಚಿದ ನಂತರ ಮಳೆಯಾಗದೇ ಹೋದರೆ ...ಕಾರಕ್ಕೆ ಪೈರು ಉರಿದು ಹೋದರೇನು ಗತಿ ...ನ್ನುಲ್ಲೇ ಗೊಣಗುತ್ತಿದ್ದವರ ಮಾತು ಕೇಳಿಸಿಕೊಂಡ

...ನ್ಮ ಪಜೀತಿ ನೋಡಿದ್ರೆ ಕಡೂರು,

...ಮ ಲು ಸೀ ಮೆ

...ಷ್ಟೆಪುರಾಣ

▶▶ ಬಿ. ಚಂದ್ರೇಗೌಡ

...ದಲ್ಲಿರೊ ಕ್ಯಾಂಡೇಟುಗಳು ಗ್ಯಾಪುಕ್ಕೆ ಬತ್ತಾ ಅವುರೆ"

...ನ್ಯಾಕ್ಲ ಅಂಗಂತಿ. ಅದ್ಕು ಇದ್ಕು ಏನು ಸಮಂದ?" ...ಳಮಾವ.

...ಂದದೆ ಕಣಮಾವ. ಅಲ್ಲಿ ಬಿಜೆಪಿಗಳೇನೊ ... ಸುರುವಾದಾಗ್ಲಿಂದ ಬಟಾವಡೆ ಮಾಡ್ತಯಿದ್ದಂತೆ. ...ಎಸ್‌ನೋರು, ಕಾಂಗ್ರೆಸ್‌ನೋರು ಬರೀ ...ಗಿರದು ಅಲ್ದೆ ಓಟು ಕೊಡೋರಿಗೆ ದುಡ್ಡು ... ಬ್ಯಾಡವೊ ಅಂತ ಯೇಚನೆ ಮಾಡ್ತ ...ಂತೆ."

...ಡದಿದ್ರೆ ಕೊಟ್ಟತ್ತಗೆ ಕೈತ್ವಳಕಂಡು ಬರಕ್ಯೇನ್ಲ?" ...ರ ಸರಾಗವಾಗಿ.

...ವಷ್ಟು ಸುಲಬಲ್ಲ ಕಣೊ. ಬಿಜೆಪಿಗಳು ...ದು ಸವುರ ಕೊಟ್ರೆ ಇವುರು ಐನೂರನಾರ ...ಕಾಯ್ತದೆ. ಕೊಟ್ರು ಓಟಾಕ್ತರೆ ಅನ್ನದೇನು ...?"

...ತ ಅನುಮಾನಿದ್ರೆ ಬರಿ ಬಾಸಣ ಮಾಡಿ ..." ಎಂದ ಕಾಳಮಾವ.

...ಸಣ ಮಾಡಿ ಓಟು ತಗತಿದ್ದ ಕಾಲಹೋಯ್ತು ...ವ."

...ಯಪ್ಪ ಪರೀಕ್ಷೆ ಮಾಡಕ್ಯೇನ್ಲ?"

...ಮ ನಿಜವೆ ಬುಡು. ಕಾಂಗ್ರೆಸ್ ಕ್ಯಾಂಡೇಟ್ ...ರ್ಣರದೆದುರು ಒಂದು ಸೀಟು ಜಾಸ್ತಿ ಬತ್ತು ..., ಇನ್ನು ಜೆಡಿಎಸ್ ಹಣೆಬರನೂ ಅಷ್ಟೆ. ಆದ್ರಿಂದ ...ಎದ್ರಿಗೆ ಬರೀಜೇಬಿನ ರಾಜಕಾರಣ ಮಾಡಿದ್ರೆ ...ದು ಬ್ಯಲೆ ಬತ್ತದೆ ಕಣಮಾವ."

...ವಿ ಕಂಡ್ಯ ನಾನೇಳಿದ್ದು."

...ಗ್ಯಾವ ಯಲಕ್ಷನ್ ಬಂದದ್ದ?" ಎಂದಳು ಜುಮ್ಮಿ.

...ನ್ಯಾವ ಸೀಮೆ ರಾಜಕಾರಣೆನೆ? ಕಡೂರಲ್ಲಿದ್ದ ...ರ್ಟಿ ಕೃಷ್ಣಮೂರ್ತಿ, ಅಮ್ಯಾಲೆ ಗುಲಬರ್ಗದ ಬಿಜೆಪಿ ಎಂಎಲ್ಲೆ ತೀರಿಕಂದ್ರಲ್ಲಾ, ಆ ಯಲಕ್ಷನ್ ನ್ಯಡೀತಾ ಅವೆ."

"ಓ ಅದ್ಕೆ ಏನೊ ವಾಟಿಸ್ನೆ ಈಗೊಂದು ವಾರದಿಂದ ಊರಲ್ಲಿಲ್ಲ."

"ನಿನಿಗೇಳಿ ಹೋಗಲಿಲವೇನೆ?"

"ಅವುನು ಯಾವತ್ತು ಹೇಳಿಹೋದನ್ನ? ಯಾರದೊ ಗಾಡಿ ಸಿಕ್ಕಿದ್ರೆ ಸಾಕು ಕಣ್ಣಿಗೆ ಕಾಣದಂಗೋಯ್ತನೆ" ಎಂದು ಜುಮ್ಮಿ ಹೇಳುತ್ತಿರುವಾಗ ಕೂಗಳತೆಯಲ್ಲಿ ಹೋಗುತ್ತಿದ್ದ ಮಂಜಯ್ಯನನ್ನು ನೋಡಿದ ಉಗ್ರಿ,

"ಮಂಜಯ್ಯ ಬಾರೊ ಇಲ್ಲಿ" ಎಂದ. ಅವನು ಬಂದಕೂಡಲೇ,

"ಚಿಕ್ಕಣ್ಣ ಮಂಜಯ್ಯನಿಗೆ ವಳ್ಳೆ ಟೀ ಕೊಡು" ಎಂದ. ಮಂಜಯ್ಯನ ಲೋಟ ತೊಳೆಯುವ ಸಮಸ್ಯೆಯಿಂದ ಪಾರಾಗಲು ಚಿಕ್ಕಣ್ಣ ಒಂದಿಷ್ಟು ಪ್ಲಾಸ್ಟಿಕ್ ಲೋಟ ತಂದಿಟ್ಟುಕೊಂಡಿದ್ದು ಅದರಲ್ಲೇ ಟೀ ಕೊಟ್ಟ. ಮಂಜಯ್ಯ ಟೀ ಹೀರುವಾಗ ಉಗ್ರಿ,

"ಏನಪ್ಪ ಮಂಜಯ್ಯ, ಪೇಜಾವರಸ್ವಾಮಿ ಹುಡಿಕ್ಯಂಡು ಬಂದಿದ್ರಂತಲ್ಲೊ" ಎಂದ.

"ಬಂದಿದ್ರು ನಮ್ಮೊರಿಗೆ, ಅದ್ಯಂತದೊ ವೈಷ್ಣವ ದೀಕ್ಷೆ ಕೊಡ್ತಿನಿ ಅಂತ ಹೇಳಿದ್ರು."

"ಅದಕೆ ನೀವೇನಂದ್ರಿ?"

"ಅದೇನು ಕೊಡ್ತಿಯೋ ಕೊಡ್ರಪ್ಪ ಅಂದೊ. ನಮ್ಮೋರ ಮನಿದೇವರಿಗೆ ಪೂಜೆ ಮಾಡಿ ಗಂಧಕಡ್ಡಿ ಹಚ್ಚಿ ಹೋದ್ರತ್ತಗೆ."

"ಅಂತೂ ನೀವ್ಯಲ್ಲ ಮಾದ್ವರಾಯ್ತಾಯಿದ್ದೀರಿ."

"ಮದ್ವರಾಗದಲ್ಲಿರ್ಲಿ ಕಣೋ ಉಗ್ರಿ, ಅವಯ್ಯ ನೀವ್ಯಲ್ಲ ಮಾಂಸ ಮದ್ಯ ಬುಡಿ ಅಂತನಲ್ಲಾ? ಬುಟ್ಟುಬುಟ್ಟು ಅವುನಂಗಾಗಬೇಕು ಅಂತ್ಲಾ? ಅದ್ಯಾಕಂತ ಸರೀಳಮಡಿಕಂಡವುನೆ ಆವಯ್ಯ? ಮಾತಾಡಕ್ಕೂ ಮುಕುಳಿಲಿ ದಮ್ಮಿರಲಿಲ್ಲ ಕಣೊ ಉಗ್ರೀ. ಬಾಡು ಬಳ್ಳೆ ತಿಂದು ಸರೀಳ ಚನ್ನಾಗಿ ಮಡಿಕಳದ ಬುಟ್ಟು ಗುಳ್ಳೆನರಿ ಬುದ್ಧಿ ಹೇಳಿದಂಗೆ ನಮಿಗೆ ಬುದ್ಧಿ ಹೇಳಕ್ಕೆ ಬಂದವುನಲ್ಲಾ, ಇದಕೇನೇಳನಾ ಅಂತಿ."

"ಅಂತಾ ಸ್ವಾಮಿಯ ಗುಳ್ಳೆನರಿ ಅಂತಿಯಲ್ಲಾ ಮಂಜಯ್ಯ?" ಎಂದಳು ಜುಮ್ಮಿ.

"ಅವುನೇಳಿರದು ಕರಟ್ ಕಣಕ್ಕ" ಎಂದು ವಾಟಿಸ್ಸೆ ಬಂದ.

"ನೀನೊಬ್ಬ ಕಡಿಮಾಗಿದ್ದೆ ನೋಡು."

"ಯಾವುದೇ ಮ್ಯಾಟ್ರು ಎಂಡಾಗದು ನನ್ನಿಂದ್ಲೆ ಅಲವೇನಕ್ಕ, ಅದಿರ್ಲಿ, ಪೇಜಾವರನಂಥೋರು ಇದ್ದಕ್ಕಿದ್ದಂಗೆ ಮಠ ಬಿಟ್ಟು ದಲಿತ್ರ ಕೇರಿ ಹುಡಿಕಂಡೋಯ್ತರೆ ಅಂದ್ರೆ ಉಷಾರಾಗಿರಬೇಕು."

"ಅದ್ಯಾಕುಸಾರಾಗಿರಬೇಕು? ಅವುರೇನು ಮಾಡಿದ್ರು ಪಾಪ?"

"ಪಾಪ ಅಂತಿಯಲ್ಲಕ್ಕ ನೀನು. ಅಂಗೆ ನೋಡಿದ್ರೆ ಎದ್ದೂಬಿದ್ದೂ ಅವುರ ಮಾಡದು ಪಾಪನೇ ವರತೂ ಪುಣ್ಯದ ಕ್ಯಲಸ ಒಂದೂ ಇಲ್ಲ ಗೊತ್ತೆ?"

"ಇಂತ ಅನ್ಯಾಯದ ಮಾತಾಡಬಾರ್ದು ಗುರುಗೋಳು ಮ್ಯಾಲೆ."

"ಆಹಹ ಗುರುಗೋಳಂತೆ ಗುರುಗೋಳು. ಆ ನಿನ್ನ ಗುರುಗೋಳು ಗ್ವಲ್ಲರ ಕಿಷ್ಣನ ತಗಂಡೋಗಿ ಗುಡಿವಳಗಿಟ್ಟಗಂಡು ಶೂದ್ರ ಜನಾಂಗ ಗುಡಿವಳಿಕೆ ಬುಟಗತ್ತಯಿಲ್ಲ. ಕ್ಷತ್ರಿಯರ ರಾಮನ್ನ ತಗಂಡೋಗಿ ದೇವ್ರುರು ಮಾಡಿಕಂಡು ನಮ್ಮುನ್ನೇ ವಳಿಕೆ ಸೇರುಸ್ತಯಿಲ್ಲ ಗೊತ್ತೆ?" ಎಂದ ವಾಟಿಸ್ನೆ.

"ನಮ್ಮೊರ ತಗಂಡೋಗಿ ಅಂಗೆ ಪೂಜೆ ಮಾಡ್ತರೆ ಅಂದ್ರೆ ಅದ ಗೌರವುಸಬೇಕು ಕಂಡ್ರ" ಎಂದ ಕಾಳಮಾವ.

"ಗೌರವುಸಬೇಕು ಸರಿ ದ್ವಡಪ್ಪ, ನಮ್ಮನ್ನೇ ಗುಡಿವಳಿಕೆ ಬುಟಗಳದಿಲ್ಲವಲ್ಲಾ? ಇನ್ನ ಅವುರ ಧೀಕ್ಷೆ ನಂಬಬವುದೆ? ಅವುರ್ಯಾಕೆ ಧೀಕ್ಷೆ ಕೊಡಕ್ಕೆ ಬಂದಿದ್ದ ಗೊತ್ತೇನೊ ಮಂಜಯ್ಯ?"

"ಗೊತ್ತಿಲ್ಲ ಹೇಳೊ."



"ಈಗಾಗ್ಲೆ ಸಿಟಿಕಡೆ ದಲಿತರ್ಯಲ್ಲ ಕ್ರಿಶ್ಚಿಯನ್ನರಾಯ್ತಾ ಅವುರೆ. ಹಿಂದುಗಟ್ರೆ ಬೌದ್ಧರಾಗಕ್ಕೆ ರೆಡಿಯಾಯ್ತಾ ಅವುರೆ. ಅದು ಗೊತ್ತಾದೇಟಿಗೆ ಪೇಜಾವರ ಶ್ರೀಗಳು ದಲಿತ್ರ ಕೇರಿ ಹುಡಿಕ್ಯಂಡುವಂಟವುರೆ."

"ಸ್ವಾಮಿಗಳ ಪೈಕಿ ಅವುನೊಬ್ಬನಾರ ಏನೊ ಮಾಡ್ತ ಅವುರಲ್ಲ ಅದೇಳ್ರ" ಎಂದ ಕಾಳಮಾವ.

"ಆ ನಡವಳಕೆಲಿ ಪ್ರಾಮಾಣಿಕತೆ ಇಲ್ಲ ದ್ವಡಪ್ಪ. ಅದೇ ಚಿತ್ರದುರ್ಗದ ಮುರುಗರಾಜೇಂದ್ರ ಸ್ವಾಮಿ ಏನೇ ಮಾಡ್ಲಿ ಜನ ನಂಬತರೆ. ಜನಗಳ ಜ್ವತೆ ಕುತಗಂಡು ಊಟ ಮಾಡ್ತರೆ. ಇದೇ ಪೇಜಾವರ ನಾನು ಸತ್ರ ಊಟ ಮಾಡದಿಲ್ಲ ಅಂತರೆ ಗೊತ್ತೆ?"

"ಜ್ವತೆಲಿ ಉಂಡುಬುಟ್ರೆ ವಳ್ಳೆ ಸ್ವಾಮಿನೆ?"

"ನಿಜವಾಗ್ಲು ವಳ್ಳೆಸ್ವಾಮಿ. ಯಾಕಂದ್ರೆ ಸಾಪಂಕ್ತಿ ಭೋಜನ ಸಣ್ಣ ಮ್ಯಾಟ್ರಲ್ಲ ದ್ವಡಪ್ಪ ಇದೇ ಪೇಜಾವರ ಸಾಪಂಕ್ತಿ ಕೂರದಿಲ್ಲ ಅಂತನೆ. ದಲಿತ್ರ ಹಿಂದೂ ಧರಮದಲ್ಲೇ ಇರಿ ಅಂತನೆ. ಗರ್ಭಗುಡಿ ಅತ್ರ ಬರಬ್ಯಾಡಿ ಅಂತನೆ. ಹಿಂಸೆ ವಳ್ಳೆದಲ್ಲ ನಾನು ಸಹಿಸದಿಲ್ಲ ಅಂತನೆ. ಹಿಂದೂ ಧರ್ಮದ ಉಳಿವಿಗೆ ಏನ್ನಾರ ಮಾಡಿ ಅಂತನೆ. ರಾಂಮದ್ರ ಕೆಡವದ ತಡಿಯಕ್ಕೊಗಿದ್ದೆ ಅಂತನೆ. ಕೆಡವಿದ ಮ್ಯಾಲೆ ಅಲ್ಲಿ ಏನೇನು ಸಿಕ್ಕಿದೊ ಅಂತನೆ. ಅದೇ ಜಾಗದಲ್ಲಿ ರಾಮಮಂದಿರ ಕಟ್ಟುತಿವಿ ಅಂತನೆ. ರಾಮನಬುಟ್ಟು ಹನುಮಂತನ್ನ ಹಿಡಕತ್ತಿವಿ ಅಂತನೆ. ಇಂತ ಸ್ವಾಮಿಯ ನಂಬಬವುದೆ ನೀನೆ ಹೇಳೊ ಮಂಜಯ್ಯ"

"ನಾನ್ಯಾವತ್ತು ನಂಬಿದ್ದಿನೊ? ಅದ್ಯಲ್ಲ ನಿಮ್ಮ ಸಮಸ್ಯೆ" ಎಂದ ಮಂಜಯ್ಯ.

"ನಮ್ಮ ಸಮಸ್ಯೆ ಈಗ ಟೋಟಲ್ಲಿ ಮೂರವೆ ಗೊತ್ತೆ?"

"ಅದ್ಯಾವಪ್ಪ?"

"ಧಾರ್ಮಿಕವಾಗಿ ಪೇಜಾವರ, ಸಾಹಿತ್ಯಕವಾಗಿ ಸಂತೆಶಿವುರದ ಭೈರ, ರಾಜಕೀಯವಾಗಿ ಜವರ. ಇವುರನ್ಯಲ್ಲ ಗೌರವವಾಗಿ ಕರಿಯದೆ ಆದ್ರೆ, ಪೇಜಾವರ ಶ್ರೀ, ಭೈರಪ್ಪ ಜವರೇಗೌಡ ಅಂತ ಕರೀಬೇಕು. ಸದ್ಯಕ್ಕೆ ಈ ಮೂರು ಸಮಸ್ಯೆ ಕರ್ನಾಟಕದ ಮೂಲ ವ್ಯಾಧಿತರ ಹಕನಾಯಿಸಿಗಂಡವೆ. ಅದ್ಯಾರು ಈ ಪ್ರಾಬ್ಲಮ್ಮನ ಸಾಲು ಮಾಡ್ತರೊ ಆ ದೇವರಿಗೇ ಗೊತ್ತು."

"ಮತ್ತೆ ದೇವರೆ ಇಲ್ಲ ಅಂತಿಯಲ್ಲಾ?" ಎಂದಳು ಜುಮ್ಮಿ.

"ನಾನು ನಂಬೋ ದೇವರೇ ಬ್ಯಾರೆ ಕಣಕ್ಕ. ಆ ದೇವರ ಯಾವ ಗುಡಿಲೂ ಕೂಡಕ್ಕಾಗದಿಲ್ಲ."

"ಅದೇನೊ, ನಿನ್ನ ಮೂರು ಸಮಸ್ಯೆ ನಿನಿಗೇ ಗೊತ್ತಾಗಬೇಕು."

"ನೋಡ್ರಪ್ಪ, ಒಂದನೇದಾಗಿ ಎಸ್.ಎಲ್. ಭೈರಪ್ಪ ಹೋದಲ್ಲಿಬಂದಲ್ಲಿ ನನ್ನ ಕವಲು ಕಾದಂಬರಿಯ ಯಾರೂ ಸರಿಯಾಗಿ ಓದಿಲ್ಲ, ವಿಮರ್ಶೆ ಮಾಡಿಲ್ಲ ಅಂತ ತಿರುಗ್ತಾ ಅವುನೆ. ಯಾಕೆ ಅಂದ್ರೆ ಓದಿರೊ ಲೇಡೀಸು ಅವುನಿಗೆ ಸರಿಯಾಗಿ ಮಕ್ಕುಗದವುರೆ. ಆದ್ರು ಮಂಡಬಿದ್ದು ತಿರುಗ್ತಾ ಅವುನೆ. ಇನ್ನೊಬ್ಬ ಜವರೇಗೌಡ ಅಂತ. ಅವುನು ಮಗ ಒಂದು ನೂರ ಅರವತ್ತು ನಾಲ್ಕು ಜನಗಳನ್ನು ಅಕ್ರಮ ನೇಮಕ ಮಾಡಿಕೊಂಡು ಅದು ತನಿಖೆಲಿ ಸಾಬೀತಾಗಿದ್ರೂ ನನ್ನ ಮಗ ಲೋಹಿತಾಶ್ವ, ನಾನೇ ಹರಿಶ್ಚಂದ್ರ, ಕುವೆಂಪುನೇ ವಿಶ್ವಾಮಿತ್ರ ಅಂತ ಹ್ವಟಿಗೆ ಏನೂ ತಿನ್ನದೆ ಅಳತ ಕುಂತವುನೆ. ಇನ್ನ ಪೇಜಾವರ. ಬಾಲ ಕಳಕಳ್ಕೊ ನರಿತರ ದಲಿತ್ರ ಕೇರಿಗೋಗಿ ನೀವ್ಯಲ್ಲ ಇನ್ನಮ್ಯಾಲೆ ಮಾದ್ವರು, ಮಾಂಸ ತಿನ್ನಬ್ಯಾಡಿ, ಮದ್ಯ ಮುಟ್ಟಬ್ಯಾಡಿ, ಬರೀ ನಾನು ಕೊಡೋ ತೀರ್ಥ ಕುಡಕಂಡು ನಿಮ್ಮ ಕೇರಿಲೇ ಇರಿ ಅಂತ ಹೇಳಿಕಂಡು ದಲಿತ್ರ ಕೇರಿಯಿಂದ ಬಂದಕೂಡ್ಲೆ ಪುಣ್ಯ ಮಾಡಿಕತ್ತರಂತೆ. ಈ ಮೂರು ಪ್ರಾಬ್ಲಮ್ಮು ಸದ್ದಿಕ್ಕೆ ಸುಮ್ಮನಾದ್ರೆ ನಾವು ರಾಜಕಾರಣ ಮಾತಾಡಬವುದು. ಇಲ್ಲ ಅಂದ್ರೆ ತಲಿಕೆಟ್ಟ ಭಟ್ಟನಂಗೆ ತೌಡು ಕುಟ್ಟಬವುದು."


"!?" ●

...ಾತ್ಯತೀತತೆಯ ವಿಲಕ್ಷಣ ಗುಣ



...ಶಿವರು ಕೂತಿದ್ದರು. ನಾನು ಯಾರನ್ನೂ ನೋಡುವ ಮನಸ್ಥಿತಿಯಲ್ಲಿಲ್ಲ ಎಂಬುದು ಅವರಿಗೆ ...ತ್ತು, ಅನೇಕ ರೀತಿಯಲ್ಲಿ ಇದನ್ನು ಅವರಿಗೆ ತಲುಪಿಸಿದ್ದೆ. ಆದರೂ ನನ್ನ ...ನ್ನು ಅವರು ಕೇಳಿರಲಿಲ್ಲ. "ನೋಡಿ, ಮನುಷ್ಯರಾದವರು ತುಂಬ ವಿಷಯಗಳನ್ನು ...ಗ, ಅತ್ಯಂತ ಕೋಮಲಮನಸ್ಕರಾದಾಗ ಮಾತ್ರ ಹೊಸ ಅನುಭವಗಳು ಬರುತ್ತವೆ. ... ಒಬ್ಬ ಬರೆಯುವವನಿಗೂ ಬರೆಯದೆ ಆರಾಮವಾಗಿ ಬದುಕುವವನಿಗೂ ... ವ್ಯತ್ಯಾಸ. ನಾನು ಇವತ್ತು ಬೆಳಗ್ಗೆಯಿಂದ ಒಂದು ಪುಟ್ಟ ಕನ್ನಡ ಕಾದಂಬರಿ ... ಬರೀ ಐವತ್ತು ಪುಟಗಳ, ಹಿಂದೂ ಹುಡುಗನೊಬ್ಬ ಮುಸ್ಲಿಂ ಗೆಳೆಯನೊಬ್ಬನನ್ನು ... ಬರೆದದ್ದು; ತನ್ನ ಒಳಗೇ ಆಗುತ್ತಿರುವುದನ್ನು ನೋಡಿಕೊಂಡು ಈ ಪರಿಸ್ಥಿತಿಯಲ್ಲಿ ...ಸುವ ಕಷ್ಟದ ಬಗ್ಗೆ ಬರೆದಿದ್ದು. ಅದನ್ನು ಓದಿ ಮುಗಿಸಿದಾಗ ನನ್ನ ಕಣ್ಣಲ್ಲಿ ನೀರು ...ತ್ತು ಆದರೆ ಎಲ್ಲೋ ಅರೆಕೊರೆಯಾದಂತೆ ಅನ್ನಿಸಿತು. ಜಾತಿಧರ್ಮಗಳ ಬಗ್ಗೆ ... ಗಂಭೀರವಾಗಿ ಸಂವೇದಿಸುವವ ಸ್ವಲ್ಪ ಹೆಚ್ಚುಕಮ್ಮಿಯಾದರೂ ಜಾತಿವಾದಿಯಾಗಿ ...ತ್ತಾನೆ. ಆದ್ದರಿಂದಲೇ ಇದನ್ನೆಲ್ಲ ತಲೆಗೆ ಹಚ್ಚಿಕೊಳ್ಳದ ಗಟ್ಟಿಗರು (robust ...ple) ತಮಾಷೆಯಾಗಿ, ಪ್ರೀತಿಪಾತ್ರರಾಗಿ ಇದ್ದುಬಿಡ್ತಾರೆ. ಈ ದೇಶದಲ್ಲಿ ಅಳುತ್ತಾ ...ರು ಬಗ್ಗೆ ಯೋಚಿಸಬೇಕೋ ನಗುತ್ತಾ ರೇಗುತ್ತಾ ಸ್ಪಂದಿಸಬೇಕೋ? ತೇಜಸ್ವಿ ...' ಡೇವಿಲ್ ಮುಸ್ತಾಫಾ' ಎನ್ನುವ ಕಥೆಯಲ್ಲಿ (ಸ್ವಲ್ಪ ಅಸೂಕ್ಷ್ಮ ಅನ್ನಿಸಿದರೂ) ...ಗಿಯೂ ಜಾತ್ಯತೀತರಾಗಿದ್ದಾರೆ... ಕ್ಷಮಿಸಿ. ವಿಷಯ ಮರೆತೆ. ಕೃತಿಯೊಬ್ಬರನ್ನು ... ಭೇಟಿಯಾದಾಗಲೂ ಅವರೊಂದಿಗೆ ಮಾತಾಡುವುದಕ್ಕಾಗಿಯೇ ಶಕ್ತಿಯನ್ನು ...ಿಕೊಳ್ಳಬೇಕಾಗುತ್ತೆ, ಸಿದ್ಧತೆ ಮಾಡಿಕೊಳ್ಳಬೇಕಾಗುತ್ತೆ... ನಿಮಗೆ ಹೇಗನ್ನಿಸುತ್ತೋ ಏನೋ..."

ಅದೃಶ್ಯ ಸೂಜಿಗಲ್ಲು




ವರ್ಷಗಳುರುಳಿದಂತೆ ನಮ್ಮೆಲ್ಲ ಬದುಕಿನ, ಸೌಂದರ್ಯದ, ಆಕರ್ಷಣೆಯ ಕಲ್ಪನೆ ಬದಲಾಗುತ್ತಾ ಹೋಗುತ್ತದೆ. ರೋಮಿಯೋ ಮತ್ತು ಜೂಲಿಯಟ್ ತುಂಬ ಸುಂದರರಾಗಿದ್ದರು, ಹದಿಹರೆಯದ ಮಿಂಚುಗಳಂತಿದ್ದರು ಎಂದು ಕಲ್ಪಿಸಿಕೊಳ್ಳುವ ನಾವು ಬೇರೆ ಸಾಧ್ಯತೆಗಳನ್ನೇ ಯೋಚಿಸುವುದಿಲ್ಲ. ಒಬ್ಬ ದೈಹಿಕವಾಗಿ ಅಪಾಲೋ ತರಹ ಸುಂದರನಾಗಿರಬಹುದು. ಆದರೆ ಆತ ಅಷ್ಟು ಸೂಜಿಗಲ್ಲಿನ ವ್ಯಕ್ತಿತ್ವದವನಲ್ಲದೆ ಇರಬಹುದು. ಹಾಗೆಯೇ ಕೆಟ್ಟದಾಗಿ ಕಾಣುವವ ನಿಜಕ್ಕೂ ಕೆಟ್ಟವನಾಗಿರಬಹುದು. ಸಾವಿರಾರು ಸಾಧ್ಯತೆಗಳಿರುವ ಈ ಬದುಕಿನಿಂದ ಮೊನ್ನೆ ಅಮೆರಿಕಾದಲ್ಲಿ ಒಂದು ಸಂಗೀತ ನಾಟಕ ಆರಂಭವಾಯಿತು. ಅದನ್ನು ಬರೆದಾತ ಪ್ರಸಿದ್ಧ ನಾಟಕಕಾರ ಸ್ಟೀಫನ್ ಸೋಂಧೀಮ್. 'ನೀನು ತೀವ್ರ ಭಾವನೆಯ ನಾಟಕಗಳನ್ನೇ ಬರೆಯೋಲ್ಲ' ಎಂದು ಎಲ್ಲರೂ ಟೀಕಿಸುತ್ತಿದ್ದರು. ಈತ ಅದಕ್ಕೆ ಉತ್ತರವಾಗಿ ಬರೆದ. ನಾಟಕದ ಕೇಂದ್ರ ಪಾತ್ರ ಒಬ್ಬಳು ರೋಗಿ. ಅವಳಿಗೆ ಒಬ್ಬ ಇಟಾಲಿಯನ್ ಸೈನಿಕನನ್ನು ಪರಿಚಯಿಸಿ ಅವಳನ್ನು ನೋಡಿಕೊಳ್ಳಲು ಹೇಳುತ್ತಾರೆ. ನೋಡಲು ಅಸಹ್ಯವಾಗಿರುವ ಈ ಹೆಂಗಸನ್ನು ಆತ ಆದಷ್ಟೂ ನೋಡದಿರಲು ಯತ್ನಿಸುತ್ತಾನೆ- ಆದರೆ ಆಕೆಯ ನೋವು, ವಿನಯ, ಧ್ವನಿ ಎಲ್ಲವೂ ಕ್ರಮೇಣ ಅವನನ್ನು ಆಕರ್ಷಿಸುತ್ತವೆ. ಆಕೆ ಅವನನ್ನು ಪ್ರೀತಿಸುವುದಕ್ಕಿಂತ ಹೆಚ್ಚಾಗಿ ಆತ ಅವಳ ವ್ಯಕ್ತಿತ್ವದಿಂದ ಸೆಳೆಯಲ್ಪಡುತ್ತಾನೆ. ಈ ವಿಲಕ್ಷಣ ಆಕರ್ಷಣೆಯಿಂದ ಆತ ಹೆದರುತ್ತಾನೆ-ಆದರೆ ಇದು ಬಂಧನ, ಗುಹಾಮಾನವನ ಕಾಲದಿಂದ ಬಂದಿರುವ ಬಂಧನ. ಆಕೆಯ ಕಾಯಿಲೆ ತೀವ್ರವಾಗುತ್ತದೆ, ಇವನ ಆತಂಕ ಕೂಡ. ಅವನು ಪೂರ್ತಿ ಅವಳವನಾಗಿರುವಾಗ ಆಕೆ ತೀರಿಕೊಳ್ಳುತ್ತಾಳೆ. ಅವನು ಹುಚ್ಚನಾಗಿ ಅಡ್ಡಾಡಬೇಕಾಗುತ್ತದೆ.

ಮಾನವನ ಸೂಜಿಗಲ್ಲುಗಳ ಬಗ್ಗೆ ಹೀಗೇ ಎಂದು ಯಾರೂ ಹೇಳಲಾಗಿಲ್ಲ. ನಿಜವಾದ ಕವಿ ಸೃಷ್ಟಿಸಿದ ಪಾತ್ರ, ಪ್ರಕೃತಿ ತನ್ನ ತಾಜಾ moodನಲ್ಲಿ ಸೃಷ್ಟಿಸಿದ ವ್ಯಕ್ತಿ-ಚರ್ಮದಾಚೆಗಿನ ನಗೂರಿಗಳನ್ನು ಬಾರಿಸಿ ಆಕರ್ಷಿಸುತ್ತವೆ.... ● ಜೂನ್ 1, 1994

ಕತ್ತೆಗಳು ಸಾರ್ ಕತ್ತೆಗಳು

ತುರುವೇಕೆರೆ ಜನ ಹೊಸ ಬಸ್ ನಿಲ್ದಾಣ ಬರ್ಲಿ ಅಂತ ಜಪ ಮಾಡ್ತಿದ್ರು. ಕೊನೆಗೂ ಫಲಿಸಿತು ಅವರ ಪೂಜಾಫಲ. ಬಸ್ ನಿಲ್ದಾಣ ನಿರ್ಮಾಣ ಆಗಿಯೇ ಹೋಯಿತು. ಚೆಕ್ಕಸಬೆರಗಾಗಿ ಅದ ನೋಡ್ತ ನೋಡ್ತ ಟೋ ಕುಸಿಯಾಯ್ತು ಜನ ಅನ್ನೋದು. ಆದರೆ ಏನಾಯ್ತು ಅಂದ್ರೆ ಬಸುಗಳೇ ನಿಲ್ದಾಣದ ಒಳಕ್ಕೆ ಬರುತ್ತಿರಲಿಲ್ಲ, ಬಸ್ ಬಾರದ ಬಸ್ ನಿಲ್ದಾಣ ಅದಾಗಿತ್ತು! ಯಾಕೆ ಹಿಂಗಾಗಿತ್ತು ಅಂದ್ರೆ 'ಅಮೃತಹಸ್ತ' ದೊರೆತಿರಲಿಲ್ಲ

ಅಣಕ




▸ ಎಚ್.ಎಲ್. ಕೇಶವಮೂರ್ತಿ

ಉದ್ಘಾಟನೆ ಮಾಡೋಕೆ! ಯಾರದ್ದು 'ಅಮೃತಹಸ್ತ' ಎನ್ನುವ ತಕರಾರು ಶುರುವಾಯ್ತು. ಜಾತ್ಯತೀತ ಜನತಾದಳದ ಶಾಸಕ ಇದ್ದ ಮೇಲೆ ಅದು ಅವರ ಶಾಗೀರ್ದು ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿದ್ದೇ 'ಅಮೃತಹಸ್ತ' ಅಂತ ಅವರು. ಅದೆಂಗಾಯ್ತದೆ ಭಾರತೀಯ ಜನತಾಪಕ್ಷ ರಾಜ್ಯದಲ್ಲಿ ಅಧಿಕಾರ ಹಿಡ್ದದೆ ಅಂದ್ಮೇಲೆ ಎಲ್ಲ ನಮ್ಮ ಶಾಗೀರ್ದು ಅಂತ ಇವರು. ಅದೂ ಅಧಿಕಾರ ಇಲ್ಲದ ಮೇಲೆ ಅಮೃತಹಸ್ತ ಹೆಂಗಿರ್ತದೆ ಅನ್ನೋ ಕೊಶ್ಚನ್ ಹಾಕಿದ್ರು. ಇದು ನಮ್ಮ ಘನತೆಯ ಪ್ರಶ್ನೆ ಹಾಂಗಾಗಾಕಿಲ್ಲ ಅಂತ ಶಾಸಕರು ಏನು ಮಾಡಿದ್ರು.... ಜುಲೈ 12ನೇ ತಾರೀಖು ಮಾಜಿ ಮುಖ್ಯಮಂತ್ರಿ ಕೈಲಿ ಉದ್ಘಾಟನೆ ಮಾಡ್ಸೇಬಿಟ್ಟರು! ಅರೆರೆ ಅದೆಂಗಾಯ್ತದೆ ನಾವು ಅಧಿಕಾರದಲ್ಲಿರೋರು, ಈಗಾಗಿರೋ ಉದ್ಘಾಟನೆ ಅನಧಿಕೃತ, ಅಧಿಕೃತವಾಗಿ ಉದ್ಘಾಟನೆ ಆಗೋಗಂಟ ಹರ್‌ಗೀಜ ಬಸ್ಸುಗಳು ಇಲ್ಲಿಗೆ ಬರಬಾರ್ದು ಅಂತು ಭಾಜಪ. ಹಂಗೆ ಮಾಡಕೆ ಬರೂದಿಲ್ಲ ಉದ್ಘಾಟನೆ ಆಗಿರೋದ್ನ ತಿರ್‍ಗ ಹೆಂಗೆ ಮಾಡ್ತೀರಿ, ಇದು ಆಗೋಕೆ ಬಿಡಾಕಿಲ್ಲ ತಡೀತೀವಿ ಅಂತ ಗುಟುರು ಹಾಕಿದರು ಶಾಸಕರು. ಇದ್ಕೆ ಕೇರೇ ಮಾಡ್ದೆ ಡೇಟ್ ಫಿಕ್ಸ್ ಮಾಡಿದ್ರು ಸಾರಿಗೆ ಮಂತ್ರಿ ಅಶೋಕರು. ಇದು ನ್ಯಾಯ ಅಲ್ಲ ಕಣ್ರಿ ಅಶೋಕರೆ, ನೀವು ಹೆಂಗಿದ್ರೂ ಅಕ್ರಮ ಸಕ್ರಮ ಮಾಡೋದರಲ್ಲಿ ಎಕ್ಸ್‌ಪರ್ಟ್ ಅಲ್ವ ಅನಧಿಕೃತ ಉದ್ಘಾಟನೇನ ಅಧಿಕೃತ ಮಾಡಿಬಿಡ್ರಿ ಅಂದಿರಬೇಕು ಶಾಸಕರು. ಅದೆಂಗಾಯ್ತದೆ ಮಾಡೋ ಕಡೆ 'ಅಕ್ರಮ'ನ 'ಸಕ್ರಮ' ಮಾಡಿದ್ರೆ ಕೋಟ್ಯಂತರ ರೂಪಾಯಿ ಬಂದು ಬೀಳ್ತದೆ. ಇದ ಸಕ್ರಮ ಮಾಡಿದ್ರೂ ಬದನೆಕಾಯೂ ಸಿಗಾಕಿಲ್ಲ ಅಂತೇನೋ ಹೇಳಿರಬಹುದು ಮಂತ್ರಿಗಳು. ಹೋಗ್ಲಿ ಕಣ್ರಿ ನಾವೆಲ್ಲ ಜೊತೇಲಿದ್ದೋರಲ್ವ ಮುಂಭಾಗದಿಂದ ನಾವು ಉದ್ಘಾಟನೆ ಮಾಡಿದ್ದೀವಿ, ಹಿಂಭಾಗದಿಂದ ನೀವು ಉದ್ಘಾಟನೆ ಮಾಡ್ಕೊಳ್ರಿ ಅಂತಾನೂ ಹೇಳಿರಬಹುದು. ಮಾನ್ಯ ಮಂತ್ರಿಗಳು ಇದಕ್ಕೆ ಒಪ್ಪದೆ ಇರಬಹುದು. ಅದು ಸರಿಯಾಗಿ ಗೊತ್ತಿಲ್ಲ, ಅಂತೂಇಂತೂ ಶುಕ್ರವಾರ ಮುಕ್ತಿ ತೋರಲು ಸಮಯ ನಿರ್ಧಾರ ಆಯ್ತು.

ಶಾಸಕರ ಘನತೆ ಪ್ರಶ್ನೆ ಅನ್ನೋದು ಎದ್ದೆದ್ದು ಕುಣಿತು. 'ಮರ್ಯಾದೆ ಪ್ರಶ್ನೆ ಕಣ್ರಲಾ... ಇದ ಏನಾದರೂ ಮಾಡಿ ನಿಲ್ಲುಸ್ಬೇಕು. ಬುಧವಾರದಿಂದಲೇ ಸ್ಟ್ರೈಕ್ ಮಾಡಾನ' ಅಂದಿರ್ಬೇಕು ತಮ್ಮ ಹಿಂಬಾಲಕರ ಮುಂದೆ. 'ಮಾಡೋದು ಸರಿ ಕಣಣ್ಣ ಆದ್ರೆ ಕಳೆ ಕಟ್ಟಕಿಲ್ಲ' ಎಂದಿರಬೇಕು ಯಾರೋ ಒಬ್ಬ 'ಯಾಕ್ಲಾ?' ಅಂದಿರಬೇಕು ಇವ್ರು. 'ಬರೀ ಜನ ಬಂದ್ರೆ ಅಟ್ರಾಕ್ಷನ್ ಇರಕಿಲ್ಲ ಕಣಣ್ಣ ವಾಟಾಲು ಮಾಡ್ದಂಗೆ ಮಾಡ್ಬೇಕು' ಅಂದಿರ್ಬೇಕು ಅವ್ನು. 'ಸರಿ ತರ್ರುಲಾ ಕತ್ತೆಗಳ' ಅಂದಿರಬೇಕು ಶಾಸಕರು. ಹೆಂಗೋ ಒಟ್ನಲ್ಲಿ ಕತ್ತೆ ತಡಕ್ಕೊಂಡು ಹೊಂಟ್ರು. ಯಾರೋ ಒಬ್ಬ 'ನನ್ಹತ್ರ ಇಪ್ಪತ್ತವೆ' ಅಂದ್ನಂತೆ. ಅವ ತುಂಬಕೊಂಡು ಬಂದ್ರು. ಅವ್ಕೆ ಮುಖ್ಯಮಂತ್ರಿ ಸಾರಿಗೆ ಮಂತ್ರಿ ಫೋಟೋ ಹಾಕಿ ಅಲಂಕಾರ ಮಾಡಿದ್ರು. ಪಾಪ ಕತ್ತೆಗಳಿಗೇನು ಗೊತ್ತು 'ನಾನು ಮುಖ್ಯಮಂತ್ರಿ ಆಗಿವ್ನಿ', 'ನಾನು ಸಾರಿಗೆ ಮಂತ್ರಿ ಆಗಿವ್ನಿ' ಅಂತಾವ. ಸಿಕ್ಕಿಸಿಕ್ಕಿದ್ದನ್ನೆಲ್ಲ ತಿಂತಾ, ಅರುಚಾಡ್ತಾ, ಒದರಾಡ್ತಾ ಮೊದಲಿದ್ದಂಗೇ ಇದ್ವೊ!

ಪೊಲೀಸ್ನೋರ್ಗೆ ಪೀಕಲಾಟ ಶುರು ಆಯ್ತು. ಮುಖ್ಯಮಂತ್ರಿ ಕೈಲಿ 'ಕತ್ತೆ ಕಾಯ್ತಿದೀರಾ' ಅಂತ ಉಗಿಸಿಕೊಂಡಾಗಿತ್ತು, ಇನ್ನು ಸಾರಿಗೆ ಮಂತ್ರಿ ಕೈಲೂ 'ನೀವು ಕತ್ತೆ ಕಾಯಕ್ಕೇ ಲಾಯಕ್ಕು' ಅನ್ನಿಸಿಕೋಬೇಕಾಯ್ತದೆ ಅಂತ ಒದ್ದಾಡೋದ್ರು. ಎರಡು ದಿನ ಮುಂಚೇನೆ ಕತ್ತೆಗಳ ಜೊತೆ ಪ್ರತಿಭಟನೆ ನಡೀತಿತ್ತಲ್ಲ, ಆ ಜಾಗಕೋದ್ರು. ಮುಖ್ಯಮಂತ್ರಿ, ಸಾರಿಗೆ ಮಂತ್ರಿ ಅನ್ನೋ ಬಿರುದಾಂಕಿತ ಕತ್ತೆಗಳ ಅರೆಸ್ಟ್ ಮಾಡಿ ತಮ್ಮ ಸುಪರ್ದಿಗೆ ತಗಂಡ್ರು. ಪೊಲೀಸ್ ಸ್ಟೇಷನ್ನಿಗೂ ಹೊಡ್ಕೊಂಡೋದ್ರು. ಎಂತಹ ದಿವಿನಾದ ಮೆರವಣಿಗೆ ಅಂತೀರಿ. ಮುಂದೆ ಕತ್ತೆಗಳು, ಹಿಂದೆ ಪೊಲೀಸ್ನೋರು! ನೋಡೋಕೆ ಒಂದು ಚಂದದ ನೋಟ ಅದು.

ಸ್ಟೇಷನ್ನಿಗೇನೋ ತಂದ್ರು. ಅವ ಲಾಕಪ್ಪಲಿ ಹಾಕಿ ಬೀಗ ಜಡಿಯೋ ಹಂಗಿದ್ರೆ ಚಿಂತೆ ಇರಲಿಲ್ಲ, ಆದ್ರೆ ಹಂಗೆ ಮಾಡಲು ಆಗ್ತಿರಲಿಲ್ಲ, ಹೊರಗಡೇನೆ ಬಿಡೋ ಹಂಗೂ ಇಲ್ಲ, ಕಳೆದೋದ್ರೆ 'ಎಲ್ಲಿವೆ ಕತ್ತೆ' ಅಂತಾನೋ 'ಪೈರು ತಿಂದಾಕಿ ಲುಕ್ಸಾನ್ ಮಾಡವೆ' ಅಂತಾನೋ ಜನ ಅವುರಿಕೋಬೌದು. ಅವಕಾಯಕ್ಕೆ ಪೊಲೀಸ್ನೋರ



ನೇಮಿಸಬೇಕಾಯ್ತದೆ. ಹೆಂಗಾದ್ರೂ ಸಾಗಾಕಿದ್ರೆ ಸಾಕು ಅಂತಾವ ಅವ ಮಾಯಸಂದ್ರದ ಕಲ್ಪತರು ಆಶ್ರಮಕ್ಕೆ ತಂದ್ರು. ಅಲ್ಲಿ 'ಗೋ ಆಶ್ರಮ' ಇತ್ತಲ್ಲ ಅಲ್ಲಿ ಇಟ್ಕಳಿ ಇವ ಅಂತಾವ ಕೇಳಿದ್ರು. ಇದು 'ಗೋ ಆಶ್ರಮ', 'ಕತ್ತೆಗಳ ಆಶ್ರಮ' ಅಲ್ಲ, ಇಲ್ಲಿ ಇಟ್ಕೊಳ್ಳೋಕೆ ಆಗಾಕಿಲ್ಲ; ಇಲ್ಲಿರೋ ದನಗಳಿಗೆ ಮೇವು ಒದಗ್ಸೋದೆ ಅರುಮ ಸಂಕ್ಟ ಅ... ಇನ್ನು ಇವಕ್ಕೆ ಬ್ಯಾರೆ ಎಲ್ಲಿಂದ ತರಾನ ಅಂದ್ರು. ಯಾ... ಆಶ್ರಮದೋರು. ಈ ಕತ್ತೆಗಳ ಕಟ್ಕೊಂಡು ಎಲ್... ಸಾಯಾನ ಅನ್ಕೊಂಗಾದ್ರು ಪೊಲೀಸ್ನೋರಲ್ವ..... ಚೆಳವರಿ... ವ್ಯಾನಲ್ಲಿ ತುಂಬ್ಕೊಂಡೋಗಿ ದೂರದಲ್ಲೆಲ್ಲೋ ಬಿಟ್ಟು ಬ... ಹಂಗೇ ದಾರೀಲಿ ಬಿಟ್ಟು ಕೈತೊಳ್ಕಂಡ್ರು.

ಕತ್ತೆಗಳ ಶಾಸಕರು ಮರುತ್ರು. ಪೊಲೀಸ್ನೋರೂ ಮರು... ಮಾಲೀಕ ಮರೆಯೋ ಹಂಗಿರಲಿಲ್ವಲ್ಲ. ಅಯ್ಯೋ ... ಮುದ್ದು ಕತ್ತೆಗಳ ಗತಿ ಏನಾಯ್ತೊ... ಮೂರ್ದಿನ ಆ... ಬರ್ಲಿಲ್ವಲ್ಲ ಹಾಳು ಬಸ್ತೀವು... ಅನ್ಕೊಂಡು ಶಾಸಕರ ಬ... ಬಂದ. ಶಾಸಕರು ಪೊಲೀಸ್ನೋರ ಕಡೆ ಕೈಮಾಡಿ... ಅಲ್ಲಿಗೆ ಬಂದ. ಅವ್ರು ಮಾಯಸಂದ್ರದ ಕಡೆ ಕೈ ತೋರಿ...

ಕತ್ತೆ ಕೊಟ್ಟ ತಪ್ಪಿಗೆ ಮಾಲೀಕ ಅವ ತಡುಕ್ಕೊ... ಹೊಂಟ. ಹೋಗಂದ ಹೋಗಂದ ಅವು ಒ... ಹೊಲದಲ್ಲಿ ಕಂಡೊ. ಯಾರೋ ಪುಣ್ಯಾತ್ಮರು ಎ... ಹೋಗದಂಗೆ ಕಟ್ಟಾಕಿ ಹುಡ್ಕೋ ತೊಂದ್ರೆ ತಪ್ಪಿಸವ... ಅಂತಾವ ಅವುರ್‍ನ ಮನಸ್ಲೇ ವಂದುಸ್ತಾ ಸುತ್ತಾ ನೊ... ಬಳಿಪಂಚೆ ಯಜಮಾನ ಕಣ್ಣಿಗೆ ಬಿದ್ದ. 'ನಿನ್ನವಾ...' ಅಂದ್ರು. 'ಹೂಂ ಗೌಡ್ರೆ' ಅಂದ ಮಾಲೀಕ. 'ಹಂಗ... ಎತ್ತಾಕು ಐದ್ದಾನ್ರವ' ಅಂದ ಅವ್ನು. 'ಯಾಕೆ ಗೌಡ್ರೆ ಐದ್ದ...' ಅಂದ ಇವ್ನು. 'ಟಮಾಟಾ ಹೊಲವ ತುಳ್ದು ತಿ... ಹಾಳು ಮಾಡಿದ್ಕೆ' ಅಂದ ಅವ್ನು. ಸಾವಿರದ ಸುದ್ದಿ ಕೇಳ್ತಿದ್ದ... ಎದೇನೆ ಹೊಡ್ಡೋದಂಗಾಯ್ತು. ಈ ತರಕೆ ಈ ತರ ಆ... ತನ್ನ ಕಷ್ಟಾನೆಲ್ಲ ಆದ್ಯಂತವಾಗಿ ತೋ... ಕೊಂಡ. ಈ ಪಾಯಿ ಕಷ್ಟ ಕೇಳಿ ಅ... ಕರುಳೂ ಚುರುಕ್ ಅಂದಿರಬೇಕು. '... ಸಟ್ಗೆ ಹೊಡ್ಕಂಡು ಹೋಗತ್ಲಾಗಿ' ಅ...

ಮಾಲೀಕನ ಸಂಕಟ ಇಲ್ಗೇ ಕ... ಮುಟ್ಟಲಿಲ್ಲ. ತಂದಿದ್ದು ಇಪ್ಪತ್ತು ಕತ್ತೆಗ... ಈಗ ನೋಡಿದ್ರೆ ಹದಿನೇಳವೆ. ಉ... ಹಾಳು ಬಸ್ತೀವು ಎಲ್ಲೊದ್ವೋ ಕಾಣ್ದಾ... ಅಂತಾವ ತದಕಿದ್ರೆ... ತೋಳಗಳಿಗೆ ಭ... ಭೋಜನ ಆಗಿದ್ವೊ!

ಹಿಂಗಿಂಗಂತಲ್ಲ ಶಾಸಕರೆ ಅ... ಅವ್ರು 'ಇದು ಪೊಲೀಸ್ನೋರ ತ... ಅಂತಾರೆ. ಅದೆಂಗೆ ಅಂದ್ರೆ 'ಅ... ನ್ನ ಬಿಟ್ಟು ಕತ್ತೆ ಯಾಕೆ ಅರೆಸ್ಟ್ ಮಾಡಿ... ಅಂತಾರೆ! 'ಏನ್ರಿ ಪೊಲೀಸ್ನೋರೆ' ಅಂದ್ರೆ 'ಅದೆಂಗಾ... ಸಾ... ಸಾಸಕರನ್ನ ಅರೆಸ್ಟ್ ಮಾಡಾ ಕಾಯ್ತದ... ಯ... ಸುಲಭವಾಗಿ ಸಿಕ್ತೊ ಅದ ಮಾಡ್ದೋ' ಅಂತಾರೆ!

ಇದಪ್ಪ ನ್ಯಾಯ ಅಂದ್ರೆ!

ಸತ್ಯವನ್ನು ಎದುರಿಸಲಾರದ ಹುಂಬರ ಸುಳ್ಳಿನ ಮೊರೆ

'ಪೇಜಾವರರ ಪ್ಲಾನು-ದಲಿತರಿಗೆ ಹೊಸ ವೈಷ್ಣವ ಜೈಲು' ಎಂಬುದು ತಾವೆಂದಂತೆ ನಿಜ (ಲಂಕೇಶ್ 15.9.2010). ಅದು ಕಾವಲಿಯಿಂದ ಹಾರಿ ಬೆಂಕಿಗೆ ಬಿದ್ದಂತೆ.

ಆದರೆ ದಲಿತರಿಗೆ ಮದ್ಯ ಸೇವಿಸಬಾರದು ಎಂಬ ಪೇಜಾವರ ಕಂಡೀಷನ್ ಸರಿ. ಕಾರಣ ಈಗ ದಲಿತರ ಮೊದಲನೇ ವೈರಿ ಸವರ್ಣೀಯರಲ್ಲ ಒಂದನೇ ವೈರಿ ಶರಾಬು. ಸಾರಾಯಿಯಿಂದಾಗಿ ದಲಿತ ಗಂಡಸರು ಇನ್ನೂ ಹೆಚ್ಚು ಅಧಃಪತನಕ್ಕೆ ಸರಿಯುತ್ತಿರುವುದು ನಿಜ. ಆದರೆ ಮಾಂಸ ಸೇವಿಸಬಾರದು ಎನ್ನುವ ಪೇಜಾವರರ ಕಂಡೀಷನ್ ಅರ್ಥಹೀನ. ಕಾರಣ ಅವರ ಆರಾಧ್ಯದೈವ ಶ್ರೀಕೃಷ್ಣ ಹಾಗೂ ಲಕ್ಷ್ಮಿಯ ಅವತಾರ ರುಕ್ಮಿಣಿ ಇವರೆಲ್ಲಾ ಪೂರ್ಣ ಮಾಂಸಾಹಾರಿಗಳಾಗಿದ್ದರು ಹಾಗೂ ಕೃಷ್ಣನು ಅರ್ಜುನನೊಂದಿಗೆ ಕಾಡಿಗೆ ಬೇಟೆಗೆ ಹೋಗಿ ತಿನ್ನಲೋಸುಗವೇ ಕಾಡು ಪ್ರಾಣಿಗಳನ್ನು ಕೊಂದು ತರುತ್ತಿದ್ದರೆಂದು ಮೂಲ ಮಹಾಭಾರತದಲ್ಲೇ ಉಲ್ಲೇಖವಿದೆ. ದೇವರು ಮಾಂಸಾಹಾರಿ, ಸಂಸಾರಿ, ಭಕ್ತರೇಕಿರಬೇಕು ಶಾಖಾಹಾರಿ-ಬ್ರಹ್ಮಚಾರಿ ಎಂದು ಕೆಲ ಮಠಾಧೀಶರೇ ಕೇಳುತ್ತಿದ್ದಾರಂತೆ.

ಇದು 15 ವರ್ಷಗಳ ಹಿಂದೆ ನಡೆದ ಪ್ರಸಂಗ. ಉಡುಪಿಯ ಹತ್ತಿರ ಮೀನುಗಾರರ ಕಾಲನಿಯಲ್ಲಿ ಧಾರ್ಮಿಕ ಕಾರ್ಯಕ್ರಮವೊಂದಲ್ಲಿ ಇದೇ ಪೇಜಾವರರು ಹೇಳಿದ್ದು ಹೀಗಿತ್ತು: "ವೈಷ್ಣವರೆಲ್ಲಾ ಒಂದೇ ಕುಲ, ಮೊಗವೀರರೂ (ಮೀನುಗಾರರು) ವೈಷ್ಣವರೇ. ವಾದಿರಾಜ ಸ್ವಾಮಿಗಳ ಕಾಲದಲ್ಲಿ ಬಹಳಷ್ಟು ಮೊಗವೀರರು ಮಾಧ್ವಪಂಥಕ್ಕೆ ಮತಾಂತರ ಹೊಂದಿದ್ದರು. ಹಾಗಾಗಿಯೇ ಮಾಧ್ವಬ್ರಾಹ್ಮಣ ವಧು-ವರರು ಮದುವೆಯಾದ ತಕ್ಷಣ ಸಮುದ್ರ ಅಥವಾ ನದಿಗಿಳಿದು ಬರಿ ಕೈಯಲ್ಲಿ ಮೀನು ಹಿಡಿಯುವ ವಿಧಿ ಇಂದಿಗೂ ಮಾಧ್ವರಲ್ಲಿ ಕಡ್ಡಾಯವಾಗಿ ಅನುಸರಿಸಿಕೊಂಡು ಬರಲಾಗುತ್ತಿದೆ. ಬ್ರಾಹ್ಮಣರಾಗಿ ಮತಾಂತರ ಹೊಂದಿದ ಮೊಗವೀರರಿಗಾಗಿಯೇ ವಾದಿರಾಜರು 500 ವರ್ಷ ಹಿಂದೆಯೇ ಮೀನಿನ ರುಚಿ ಹೊಂದಿರುವ 'ಗುಳ್ಳ-ಬದನೆಕಾಯಿ' ಗಿಡವನ್ನು ಸೃಷ್ಟಿಸಿ ನವಬ್ರಾಹ್ಮಣರು ಮೀನು ತಿನ್ನುವುದನ್ನು ನಿಲ್ಲಿಸಲು ಪ್ರೇರೇಪಿಸಿದ್ದರು."

ಮಾಧ್ವ ಬ್ರಾಹ್ಮಣರೆಲ್ಲಾ ಮೂಲತಃ ಕೆಳಜಾತಿಯ ಮೀನುಗಾರರೆಂಬ ಸಾರ್ವತ್ರಿಕ ಅಭಿಪ್ರಾಯ ಸೃಷ್ಟಿಯಾಗಬಾರದೆಂದು ಮುಂಜಾಗ್ರತೆಯಾಗಿ ಅದೇ ಸಭೆಯಲ್ಲಿ ಪೇಜಾವರರು ಹೇಳಿದ್ದ ಇಬ್ಬಂದಿ ಮಾತು ಹೀಗಿತ್ತು: "ಮೊಗವೀರರು ಮಾತ್ರವಲ್ಲ ಮೇಲ್ಜಾತಿ ಜೈನರೂ, ಬಂಟರೂ, ವೈಷ್ಣವ ಮಾಧ್ವ ಮತಕ್ಕೆ ವಾದಿರಾಜರ ಸಮಯದಲ್ಲಿ ಮತಾಂತರವಾಗಿದ್ದರು. ಹಾಗಾಗಿಯೇ ಜೈನರ, ಬಂಟರ, ಮೂಲ ಕುಲನಾಮಗಳಾದ ಬಲ್ಲಾಳ, ಅಧಿಕಾರಿ, ಭಂಡಾರಿ, ಹೆಗ್ಗಡೆ ಇವೇ ಕುಲನಾಮಗಳು ಮಾಧ್ವಬ್ರಾಹ್ಮಣರಿಗೂ ಬಂದಿದ್ದು."

ಅದೇ ಸಮಯ ಆ ಸಭೆಯಲ್ಲಿನ ವಿದ್ಯಾವಂತ ಸಭ್ಯ ಮೊಗವೀರ ಯುವಕನೊಬ್ಬ ಎದ್ದು ನಿಂತು ಧೈರ್ಯವಾಗಿ ಪೇಜಾವರರನ್ನು ಕೇಳಿಯೇ ಬಿಟ್ಟ: "ಸ್ವಾಮೀಜೀ, ನಾನು ಒಂದು ಮಾಧ್ವ ವೈಷ್ಣವ ಹೆಣ್ಣನ್ನು ಪ್ರೀತಿಸಿದ್ದೇನೆ. ಅವಳ ಮನೆಯವರು ಜಾತಿಯ ಕಾರಣ ನೀಡಿ ಅಡ್ಡಿಪಡಿಸುತ್ತಿದ್ದಾರೆ. ಈಗ ತಾವೇ ಹೇಳಿದ್ದು ಮೊಗವೀರರೂ ವೈಷ್ಣವರು, ವೈಷ್ಣವರೆಲ್ಲಾ ಒಂದೇ ಕುಟುಂಬ ಎಂದು. ಹಾಗಿರುವಾಗ ನಾವಿಬ್ಬರೂ ಮದುವೆಯಾಗಲು ಅನುಮತಿ ಕೊಡುವಂತೆ ಆ ವೈಷ್ಣವ ಬ್ರಾಹ್ಮಣ ಕುಟುಂಬವನ್ನು ತಾವು ಮನವೊಲಿಸಬೇಕೆಂದು ವಿನಂತಿ."

ಇದಕ್ಕೆ ಉತ್ತರ ಕೊಡುವ ಬದಲು ಪೇಜಾವರರು ಸ್ವಯಂಸೇವಕರಿಗೆ ಆ ತರುಣನನ್ನು ಹೊರಗೆ ಸಾಗಿಸುವಂತೆ ಸನ್ನೆ ಮಾಡಿದ್ದರು.

ಹೀಗಿದೆ ಪೇಜಾವರರ ದ್ವಂದ್ವ ನೀತಿ!

-ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು

ಕಳೆದ ಸಂಚಿಕೆಯಲ್ಲಿ ಪ್ರಕಟಗೊಂಡ ಶೆಣೈ ಅವರ 'ವಿಷ್ಣು ಬರ್ತ್‌ಡೇ: ನೆನೆದವರು ಮರೆತವರು' ಅರ್ಥಪೂರ್ಣವಾಗಿತ್ತು, ವಿಷ್ಣು ಮನೆಯವರು ಅವರ ಹುಟ್ಟುಹಬ್ಬವನ್ನು ಸರಳವಾಗಿ ವಿಶಿಷ್ಟ ರೀತಿಯಲ್ಲಿ ಆಚರಿಸಲು ನಿರ್ಧರಿಸಿದ್ದು ಸ್ವಾಗತಾರ್ಹ. ಆದರೆ ಫಿಲ್ಮ್ ಚೇಂಬರ್ ಮತ್ತು ಉದ್ಯಮದವರು ಈ ಕುರಿತು ಇನ್ನೂ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳದಿರುವುದು ಬೇಸರ ತರಿಸಿದೆ.

ಸೆಪ್ಟೆಂಬರ್ 18ಕ್ಕೆ ಹುಟ್ಟುಹಬ್ಬವಿರುವುದರಿಂದ ಇನ್ನೂ ಕಾಲಾವಕಾಶವಿದೆ ಸಂಬಂಧಿಸಿದವರು ವಿಷ್ಣು ಜನ್ಮ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಿ

-ಎಸ್. ಲಕ್ಷ್ಮಿನರಸಿಂಹ, ಚಾಮರಾಜನಗ...

ಗೌರಿ ಗಣೇಶ ಹಬ್ಬದ ಶುಭಾಷಯಗಳು.

ದಿನಾಂಕ 15.09.2010ರ ತಮ್ಮ ಪತ್ರಿಕೆಯ ಪುಟ ಸಂಖ್ಯೆ 4ರಲ್ಲಿ 'ಬಿಜೆಪಿ ವಿರುದ್ಧ ರೊಚ್ಚಿಗೆದ್ದ ಮಲ್ಲೇಶ್ವರಂ ಬ್ರಾಹ್ಮಣರು' ಎಂಬ ಲೇಖನದಲ್ಲಿ ಮಲ್ಲೇಶ್ವರದಲ್ಲಿ ಕೆಲವು ಬ್ರಾಹ್ಮಣ ಸಂಘಟನೆಗಳು ಮಲ್ಲೇಶ್ವರ ಶಾಸಕರಾದ ಡಾ.ಅಶ್ವತ್ಥನಾರಾಯಣ್ ವಿರುದ್ಧವಾಗಿ ಬಹಿರಂಗವಾಗಿ ಕಿಡಿಕಾರಿರುತ್ತಾರೆ ಎಂದಲ್ಲದೆ ಆ ವರದಿಯಲ್ಲಿ ವಿದ್ಯಾರಣ್ಯ ಬ್ರಾಹ್ಮಣ ಸಂಘವನ್ನೂ ಉಲ್ಲೇಖ ಮಾಡಿರುತ್ತೀರಿ.

ಹೊಗಳಿಕೆ ತೆಗಳಿಕೆ

ಲೇಖನದ ಬಗ್ಗೆ ವಿದ್ಯಾರಣ್ಯ ಬ್ರಾಹ್ಮಣ ಸಂಘ ಯಾವುದೇ ಪ್ರತಿಕ್ರಿಯೆ ವ್ಯಕ್ತಪಡಿಸುವುದಿಲ್ಲ, ಆದರೆ ತಮ್ಮ ಗಮನಕ್ಕೆ ತರಬಯಸುವುದೇನೆಂದರೆ ವಿದ್ಯಾರಣ್ಯ ಬ್ರಾಹ್ಮಣ ಸಂಘ ಯಾವುದೇ ರಾಜಕಾರಣಿ/ರಾಜಕೀಯ ಪಕ್ಷದ ಪರ ಅಥವಾ ವಿರೋಧವಾಗಿ ಯಾವುದೇ ಅಭಿಪ್ರಾಯ ಇಲ್ಲಿಯವರೆಗೂ ವ್ಯಕ್ತಪಡಿಸಿರುವುದಿಲ್ಲ. ಸಭಾದ ಎಲ್ಲಾ ಕಾರ್ಯಕ್ರಮಗಳಲ್ಲಿ ಎಲ್ಲಾ ಪಕ್ಷದ ಬೇರೆ ಬೇರೆ ಜಾತಿಯ ರಾಜಕಾರಣಿಗಳು ಭಾಗವಹಿಸಿದ್ದಾರೆ. ಪತ್ರಿಕೆಯವರು ವಿದ್ಯಾರಣ್ಯ ಬ್ರಾಹ್ಮಣ ಸಭಾವನ್ನು ಸದರೀ ಲೇಖನದ ನಿಟ್ಟಿನಲ್ಲಿ ಸಂಪರ್ಕ ಮಾಡಿರುವುದಿಲ್ಲ.

ಪತ್ರಿಕಾ ಧರ್ಮವನ್ನು ಕಾಪಾಡುವುದರಲ್ಲಿ/ಎತ್ತಿ ಹಿಡಿಯುವುದರಲ್ಲಿ ಪತ್ರಿಕೆಯು ಇಲ್ಲಿಯವರೆಗೂ ಬೇರೆ ಪತ್ರಿಕೆಯವರಿಗೆ ಮಾರ್ಗದರ್ಶನ ಹಾಕಿಕೊಟ್ಟಿರುವುದು ಶ್ಲಾಘನೀಯವಾಗಿದೆ. ಆದುದರಿಂದ ಈ ಪತ್ರವನ್ನು ಪ್ರಕಟಿಸಲು ಕೋರುತ್ತೇನೆ.

- ಆನಂದ ಟಿ.ಆರ್, ಪ್ರಧಾನ ಸಂಚಾಲಕ, ಶ್ರೀ.ವಿದ್ಯಾರಣ್ಯ ಬ್ರಾಹ್ಮಣ ಸಭಾ, ಶ್ರೀರಾಂಪುರ, ಬೆಂಗಳೂರು-560021

ಸತ್ಯವನ್ನು ಎದುರಿಸಲಾರದ ಹುಂಬರು ಮಾತ್ರ ಸುಳ್ಳಿನ ಮೊರೆಹೋಗುತ್ತಾರೆ.

ಹಾಗೆಯೇ ಪಾರ್ವತೀಶ್‌ರ ಮೇಲೆ ಸುಳ್ಳಿನ ಆರೋಪ ಹೊರಿಸಿರುವವರೂ ಇಂತಹದ್ದನ್ನೇ ಮಾಡಿದ್ದಾರೆ. ಆದ್ದರಿಂದ ಈಗ ಸತ್ಯ ಏನೆಂದು ಎಲ್ಲರಿಗೂ ತಿಳಿದಿದೆ.

ಪಾರ್ವತೀಶ್‌ರ ನ್ಯಾಯದ ಹೋರಾಟಕ್ಕೆ ನನ್ನ ಹೃತ್ಪೂರ್ವಕ ಬೆಂಬಲವಿದೆ.

ನಿಮ್ಮ ವಿಶ್ವಾಸಿ,

- ಫಕೀರ್ ಮುಹಮ್ಮದ್ ಕಟ್ಪಾಡಿ, ಬೆಂಗಳೂರು

...ಂಭ್ರಮ, ಸಂಕಟಗಳ ವಾರ!

...ಂದಿನ ಒಂದು ವಾರದಲ್ಲಿ ಕನ್ನಡ ಚಿತ್ರರಂಗದಲ್ಲಿ ಎರಡು ಹಬ್ಬ ...ಿ. ಮೊದಲನೆಯದು ಇಪ್ಪತ್ತೈದು ವಾರಗಳ ಪ್ರದರ್ಶನ ಕಂಡ 'ಆಪ್ತರಕ್ಷಕ' ...ಜತ ಮಹೋತ್ಸವ ಸಮಾರಂಭ. ಮತ್ತೊಂದು ಪ್ರಕಾಶ್ ರೈ ನಿರ್ದೇಶನದ ...ನ್ನ ಕನಸು' ಚಿತ್ರದ ಶತದಿನೋತ್ಸವ ಸಮಾರಂಭ. ...ಡೆ 'ಕೃಷ್ಣನ ಲವ್ ಸ್ಟೋರಿ' ಎಂಬ ಚಿತ್ರವೂ ...ು ಘಟ್ಟ ತಲುಪಿದೆ. ವಿಷ್ಣು ಹುಟ್ಟುಹಬ್ಬದ ...ಸೆಪ್ಟೆಂಬರ್ 18ರಂದೇ ನಗರದ ಕಂಠೀರವ ...ಣದಲ್ಲಿ ಅದ್ದೂರಿಯಾದ ಸಮಾರಂಭವನ್ನು ...ು ನಿರ್ಮಾಪಕ ಕೃಷ್ಣಕುಮಾರ್ ಓಡಾಡುತ್ತಿದ್ದಾರೆ. ...ಹಬ್ಬದ ಮರುದಿನ ಅಂದರೆ ಭಾನುವಾರ ... ಪ್ರಕಾಶ್ ರೈ ತನ್ನ ಚೊಚ್ಚಲ ಸೆಂಚುರಿ ...ವವನ್ನು ಇಟ್ಟುಕೊಂಡಿದ್ದಾರೆ. 'ಆಪ್ತರಕ್ಷಕ' ವಿಷ್ಣು ...ತ್ತಿ ಜೀವನದ ಕೊನೆಯ ಚಿತ್ರವಾದರೆ, 'ನಾನು ...' ರೈ ನಿರ್ದೇಶನದ ಮೊದಲ ಚಿತ್ರ.

... ವಾರ ನಾಲ್ಕು ಚಿತ್ರಗಳು ಬಿಡುಗಡೆಯಾದಾಗ ..., ಕರಿ ಚಿರತೆ, ಒಂಟಿ ಮನೆ, ನಾರದ ವಿಜಯ) ...ರಂಗ ಒಂದು ವಿಶಿಷ್ಟ ದಾಖಲೆಯನ್ನು ಮಾಡಿದ ...ಳಗಾಯಿತು. ಅದೇನೆಂದರೆ ಈ ವರ್ಷ ನೂರು ... ಬಿಡುಗಡೆ ಮಾಡಿದ ಮೊದಲ ರಾಜ್ಯ ಎಂಬ ...ಾರತೀಯ ಚಿತ್ರರಂಗದಲ್ಲಿ ನಮಗೆ ದೊರಕಿತು. ...ಅಂದಾಜಿನ ಪ್ರಕಾರ ಡಿಸೆಂಬರ್ ಕೊನೆಯ ...ಬಿಡುಗಡೆಗೊಂಡ ಕನ್ನಡ ಚಿತ್ರಗಳ ಸಂಖ್ಯೆ ...ರ ಗಡಿ ದಾಟಬಹುದು. ಹಾಗಾದರೆ, ಅದೂ ...ಹೊಸ ದಾಖಲೆಯಾಗಲಿದೆ.

...ರತೀಯ ಚಿತ್ರರಂಗದಲ್ಲೇ ಈ ವರ್ಷ ನೂರರ ...ಟಿದ ಮೊದಲ ರಾಜ್ಯ ನಮ್ಮದು" ಎಂದು ...ಮಾತಿನ ಮಲ್ಲ ಫಿಲ್ಮ್ ಚೇಂಬರ್ ಅಧ್ಯಕ್ಷ ...ಕುಮಾರ್ ಪಾಟೀಲ್ ಹೋದಲ್ಲೆಲ್ಲಾ ...ದ ಭಾಷಣ ಬಿಗಿಯುತ್ತಿದ್ದಾರೆ. ಗಾಂಧಿನಗರದ ...ನ್ನ ಕ್ವಾಲಿಟಿ ಬಗ್ಗೆ ತಲೆಕೆಡಿಸಿಕೊಳ್ಳದೆ ಕ್ವಾಂಟಿಟಿ ...ನಾಡುತ್ತಿರುವುದನ್ನು ನೋಡಿದರೆ ಕನ್ನಡ ಚಿತ್ರರಂಗ ...ಾಗುವ ಸಾಧ್ಯತೆಯೇ ಕಾಣಿಸುತ್ತಿಲ್ಲ.

...ಾಗಲೇ ಬಿಡುಗಡೆಗೊಂಡಿರುವ ನೂರು ...ಲ್ಲಿ ಎರಡೇ ಎರಡು ಚಿತ್ರಗಳು ಮಾತ್ರ ...ಹಿಟ್ ಆಗಿವೆಯೆಂದರೆ ಕನ್ನಡ ಚಿತ್ರರಂಗ ಎಂತಹ ...ವುಲ್ಲಿದೆ ಎಂಬುದನ್ನು ಸುಲಭವಾಗಿ ...ಬಹುದು. 'ಆಪ್ತರಕ್ಷಕ' ಸುಮಾರು ಇಪ್ಪತ್ತೈದು ...ಪ್ಪಳ ಲಾಭ ಮಾಡಿದ್ದು ನಿಜಕ್ಕೂ ಒಂದು ...ದ ಸಾಧನೆ. ಪ್ರಕಾಶ್ ರೈ ಚಿತ್ರ ಅಷ್ಟೊಂದು ...ಾಡದೇ ಇದ್ದರೂ ನೂರು ದಿನ ತಲುಪಿದ್ದೂ ...ಸಾಧನೆಯೇ ಸರಿ. ಈ ಮಧ್ಯೆ ದಿನೇಶ್ ಬಾಬು ...ದ 'ಎರಡನೇ ಮದುವೆ' ಚಿತ್ರ ಬಾಕ್ಸಾಫೀಸ್‌ನಲ್ಲಿ ...ಾಗಿ ಹಣಮಾಡಿದ್ದನ್ನು ಇಲ್ಲಿ ನೆನಪಿಸಿಕೊಳ್ಳಲೇ ... ನಾಲ್ಕು ಚಿತ್ರಗಳು ವಿಜಯ ಪತಾಕೆ ಹಾರಿಸಿ, ...ಲ್ಲಿ ಚೇತೋಹಾರಿ ವಾತಾವರಣ ಸೃಷ್ಟಿಯಾಗಲು ...ಗಿವೆ.

...ರಡು ಚಿತ್ರಗಳು ತುರ್ತು ಚಿಕಿತ್ಸಾ ಘಟಕದಿಂದ ಹೊರಬಂದಿದ್ದೇ ದೊಡ್ಡ ... ಪುನೀತ್ ರಾಜ್‌ಕುಮಾರ್ ನಟಿಸಿದ 'ಪೃಥ್ವೀ' ಮತ್ತು ದರ್ಶನ್ ...ಪೋರ್ಕಿ' ಬಾಕ್ಸಾಫೀಸ್‌ನಲ್ಲಿ ಗೆಲ್ಲಬಹುದೆಂದು ಗಾಂಧಿನಗರದ ಪಂಡಿತರು ಲೆಕ್ಕಹಾಕಿದ್ದರು. ಆದರೆ ಈ ಚಿತ್ರಗಳು ನಿರೀಕ್ಷಿಸಿದಷ್ಟು ಗೆಲುವನ್ನು ಸಾಧಿಸಲಿಲ್ಲವಾದರೂ ನಿರ್ಮಾಪಕರು ಹಾಕಿದ್ದ ಹಣಕ್ಕೆ ಮೋಸವೇನೂ ಆಗಲಿಲ್ಲ.



ಹೀಗೆ ನೂರರಲ್ಲಿ ಒಟ್ಟು ನಾಲ್ಕು ಚಿತ್ರಗಳ ನಿರ್ಮಾಪಕರು ಮಂದಹಾಸ ಬೀರುತ್ತಿದ್ದರೆ ಉಳಿದೆರಡು ಚಿತ್ರದ ನಿರ್ಮಾಪಕರು ಬದುಕಿದೆಯಾ ಬಡಜೀವ ಎಂದು ನಿಟ್ಟುಸಿರು ಬಿಡುತ್ತಿದ್ದಾರೆ. ಇದು ನಮ್ಮ ಕನ್ನಡ ಚಿತ್ರರಂಗದ ಈ ವರ್ಷದ ಸಾಧನೆ.

ಅದೇನೇ ಇರಲಿ, ಈ ಸಂದರ್ಭದಲ್ಲಿ ಮತ್ತೆ ದಿವಂಗತ ವಿಷ್ಣುವರ್ಧನ್ ಅವರ ಮಾತುಗಳು ನೆನಪಾಗುತ್ತವೆ. "ನಾನು ಹೇಗೆ ಮೊದಲ ಚಿತ್ರದಲ್ಲಿ ವೈಭವೋಪೇತವಾಗಿ ಮೆರೆದೆನೋ ಅದೇರೀತಿ ನನ್ನ ಕೊನೆಯ ಚಿತ್ರದಲ್ಲೂ ನಾನು ಮೆರೆಯಬೇಕೆಂಬುದು ನನ್ನ ಆಸೆ" ಎಂದು ಅವರು ಅನೇಕ ಸಂದರ್ಭಗಳಲ್ಲಿ ಹೇಳುತ್ತಿದ್ದರು. ಈಗ 'ಆಪ್ತರಕ್ಷಕ' ಅವರ ಆಸೆಯನ್ನೂ ಈಡೇರಿಸಿದೆ. ವಿಷ್ಣು ವೃತ್ತಿಜೀವನದ ಆರಂಭದ ಚಿತ್ರ 'ನಾಗರಹಾವು' ಕೂಡಾ ಆ ಕಾಲಘಟ್ಟದಲ್ಲಿ ದಾಖಲೆ ನಿರ್ಮಿಸಿತ್ತು.

ಶತದಿನೋತ್ಸವ ಸಮಾರಂಭಗಳೇ ಅಪರೂಪವಾಗುತ್ತಿರುವ ಕನ್ನಡ ಚಿತ್ರರಂಗದಲ್ಲಿ 'ಆಪ್ತರಕ್ಷಕ' ನಾಲ್ಕು ಕೇಂದ್ರಗಳಲ್ಲಿ ರಜತ ಮಹೋತ್ಸವ ಆಚರಿಸುತ್ತಿದೆಯೆಂದರೆ ನಿಜಕ್ಕೂ ಅದೊಂದು ದೊಡ್ಡ ಸಾಧನೆಯೇ ಸರಿ. ಇತ್ತೀಚಿನ ದಿನಗಳಲ್ಲಿ 'ದಾಖಲೆ'ಯ ಕಾರಣಕ್ಕಾಗಿ ಚಿತ್ರದ ನಿರ್ಮಾಪಕರು ಕುಂಟುತ್ತಾ ತೆವಳುತ್ತಾ ತಮ್ಮ ಚಿತ್ರಗಳನ್ನು ಒಂದೆರಡು ಥಿಯೇಟರ್‌ಗಳಲ್ಲಿ ಮಾತ್ರ ನೂರು ದಿನ ಓಡಿಸುತ್ತಾರೆ. ಆದರೆ 'ಆಪ್ತರಕ್ಷಕ' ಚಿತ್ರ ಸುಮಾರು 18 ಕೇಂದ್ರಗಳಲ್ಲಿ ಭರ್ಜರಿ ಸೆಂಚುರಿಯನ್ನು ಬಾರಿಸಿದೆ.

'ಆಪ್ತರಕ್ಷಕ'ನ ಯಶಸ್ಸು ಕನ್ನಡಚಿತ್ರರಂಗದ ನಿರ್ಮಾಪಕರ ಪಾಲಿಗೆ ದಾರಿ ದೀಪವಾಗಬೇಕಿದೆ. ನಿರ್ದೇಶಕ ವಾಸು ಈ ಚಿತ್ರಕ್ಕಾಗಿ ಸುದೀರ್ಘವಾದ ಸಮಯವನ್ನೇ ತೆಗೆದುಕೊಂಡಿದ್ದರು. ಹಾಗಾಗಿ ನಿರ್ಮಾಣ ಹಂತದಲ್ಲೇ ಇದೊಂದು ಉತ್ತಮ ಚಿತ್ರವಾಗಬಹುದೆಂಬ ಮಾತುಕತೆ ಎಲ್ಲೆಡೆ ಕೇಳಿಬರುತ್ತಿತ್ತು, ಅದೇ ಮಾತು ಪ್ರಕಾಶ್ ರೈ ನಿರ್ದೇಶನದ 'ನಾನು ನನ್ನ ಕನಸು' ಚಿತ್ರಕ್ಕೂ ಅನ್ವಯಿಸುತ್ತೆ, ನಿರ್ಮಾಣದ ಮೌಲ್ಯಗಳು, ನಿರ್ಮಾಪಕನ ಅಭಿರುಚಿ ಒಂದು ಚಿತ್ರವನ್ನು ಯಾವ ಎತ್ತರಕ್ಕೆ ಏರಿಸಬಹುದು ಎಂಬುದನ್ನು ಸೂಚಿಸುತ್ತದೆ.


ಈಗ ಈ ಎಲ್ಲಾ ಕಾರಣಗಳಿಗಾಗಿಯೇ 'ನಾವು ನೂರು ಚಿತ್ರ ಬಿಡುಗಡೆ ಮಾಡಿದ್ದೇವೆ' ಎಂದು ಹೆಮ್ಮೆಯಿಂದ ಬೀಗುವುದು ಅಜ್ಞಾನದಂತೆ ಕಾಣಿಸುತ್ತಿದೆ. ಏಕೆಂದರೆ ಚಿತ್ರಗಳ ಸಂಖ್ಯೆ ಹೆಚ್ಚಾದಂತೆ ಕಲಾವಿದರ ಬೇಡಿಕೆ, ಸಂಭಾವನೆ ಜಾಸ್ತಿಯಾಗುತ್ತದೆ; ಥಿಯೇಟರ್ ಸಮಸ್ಯೆ ಇನ್ನಷ್ಟು ಬಿಗಡಾಯಿಸುತ್ತದೆ... ಎಂಬಿತ್ಯಾದಿ ವಿಷಯಗಳು ಚೇಂಬರ್ ಅಧ್ಯಕ್ಷ ಪಾಟೀಲರಿಗೆ ಯಾಕೆ ಅರ್ಥವಾಗುವುದಿಲ್ಲವೋ ಏನೋ?

ನಮ್ಮ ಗಾಂಧಿನಗರದಲ್ಲಿ ಬಿಡುಗಡೆಯಾಗಿ ತೋಪಾದ ಅರ್ಧಕ್ಕರ್ಧ ಚಿತ್ರಗಳು ಸೆಟ್ಟೇರದೇ ಇದ್ದಿದ್ದರೆ ಅನೇಕ ಸಮಸ್ಯೆಗಳು ತನ್ನಿಂದ ತಾನೇ ಪರಿಹಾರವಾಗುತ್ತಿದ್ದವು. ಹೀಗಾಗಿ ಅನೇಕರು ಸಿನಿಮಾ ಮಾಡದೇ ಇದ್ದರೆ ನಮ್ಮ ಚಿತ್ರರಂಗ ಉದ್ಧಾರವಾಗುತ್ತದೆ. ಇದರತ್ತ ಪಾಟೀಲರು ಗಮನಹರಿಸಲಿ....

• ಶೆಣೈ

shenoylankesh@gmail.com

'ಆಪ್ತರಕ್ಷಕ' ಸಮಾರಂಭಕ್ಕೆ ಸೂತಕದ ಛಾಯೆ



'ಆಪ್ತರಕ್ಷಕ' ರಜತಮಹೋತ್ಸವ ಆಚರಿಸುತ್ತಿರುವುದು ಅತ್ಯಂತ ಸಂತೋಷದ ವಿಷಯ. ಆದರೆ ಈ ಚಿತ್ರದ ಯಶಸ್ಸಿಗೆ ಕಾರಣೀಭೂತರಾದ ವಿಷ್ಣು ಈಗ ನಮ್ಮ ನಡುವೆ ಇಲ್ಲದಿರುವುದು ನೋವಿನ ವಿಷಯ. ಒಂದು ವೇಳೆ ವಿಷ್ಣು ಬದುಕಿದ್ದಿದ್ದರೆ ಈ ಚಿತ್ರದ ಶತದಿನೋತ್ಸವ ಮತ್ತು ವಿಷ್ಣು ಅವರ 60ನೇ ಹುಟ್ಟುಹಬ್ಬ ಅತ್ಯಂತ ವಿಜೃಂಭಣೆಯಿಂದ ನಡೆಯುತ್ತಿತ್ತು ಎಂಬುದರಲ್ಲಿ ಸಂಶಯವೇ ಇರಲಿಲ್ಲ.

ಆದರೆ ವಿಷ್ಣು ಚಿತ್ರದ ಯಶಸ್ಸಿಗೂ ವಿವಾದಕ್ಕೂ ಯಾವಾಗಲೂ ಎಲ್ಲಿಲ್ಲದ ನಂಟು. ಈ ಹಿಂದೆ 'ಆಪ್ತಮಿತ್ರ' ಚಿತ್ರ ಗೆದ್ದಾಗಲೂ ವಿಷ್ಣು ಮತ್ತು ದ್ವಾರಕೀಶ್ ನಡುವಿನ ವೈಮನಸ್ಸು ತಾರಕಕ್ಕೆ ತಲುಪಿತ್ತು, ಕೊನೆಗೆ ಇಬ್ಬರೂ ತಮ್ಮದೇ ಆದ ಶೈಲಿಯಲ್ಲಿ 'ಆಪ್ತಮಿತ್ರ' ಶತದಿನೋತ್ಸವವನ್ನು ಆಚರಿಸಿದ್ದರು. ಅದಕ್ಕಿಂತಲೂ ಮೊದಲು ವಿಷ್ಣು ನಟಿಸಿದ 'ಯಜಮಾನ' ದಾಖಲೆಯ ಸುರಿಮಳೆಯನ್ನು ಸುರಿದಾಗಲೂ ಇದೇ ರೀತಿ ಆಗಿತ್ತು, ಆ ಚಿತ್ರದ ನಿರ್ದೇಶಕ ಹಾಗೂ ಭಾರತಿಯವರ ಸಹೋದರ ಚಿತ್ರ ಬಿಡುಗಡೆ ಮೊದಲೇ ನಿಧನ ಹೊಂದಿದ್ದರಿಂದ ವಿಷ್ಣುಗೆ ಮೂಡ್ ಆಫ್ ಆಗಿತ್ತು, ಆದ್ದರಿಂದ 'ಯಜಮಾನ' ಚಿತ್ರದ ಯಶಸ್ಸನ್ನು ವಿಷ್ಣು ವಿಜೃಂಭಣೆಯಿಂದ ಆಚರಿಸಲಿಲ್ಲ.




ಅದೇರೀತಿ ಈಗ 'ಆಪ್ತರಕ್ಷಕ'ನ ಯಶಸ್ಸಿನ ಸಂದರ್ಭದಲ್ಲಿ ಮತ್ತೆ ನೋವಿನ ಛಾಯೆ ಎಲ್ಲೆಡೆ ಹರಡಿದೆ. ಇದರ ಜೊತೆಗೆ ನಿರ್ಮಾಪಕರ ಕೃಷ್ಣಕುಮಾರ್ ಮತ್ತು ಭಾರತಿ ವಿಷ್ಣುವರ್ಧನ್ ನಡುವೆ ಏನೋ ಮನಸ್ತಾಪ ಇದ್ದಂತೆ ಕಾಣಿಸುತ್ತಿದೆ. ಸೆ.18ರಂದು ನಡೆಯಲಿರುವ 'ಆಪ್ತರಕ್ಷಕ'ದ ಸಮಾರಂಭದಲ್ಲಿ ಭಾರತಿ ವಿಷ್ಣುವರ್ಧನ್ ಭಾಗವಹಿಸುವ ಸಾಧ್ಯತೆಯೇ ಇಲ್ಲ! ಯಾಕೆಂದರೆ ಅಂದು ವಿಷ್ಣು ಸಮಾಧಿ ಬಳಿ ಇಡೀ ದಿನ ಅಭಿಮಾನಿಗಳೊಂದಿಗೆ ಕಾಲಕಳೆಯುವ ತನ್ನ ಇಚ್ಛೆಯನ್ನು ಭಾರತಿಯವರು ಮೊದಲೇ ಪ್ರಕಟಿಸಿದ್ದಾರೆ.

ಈಗ ಕಂಠೀರವದಲ್ಲಿ ನಡೆಯಲಿರುವ 'ಆಪ್ತರಕ್ಷಕ'ನ ಸಮಾರಂಭದಲ್ಲಿ ಭಾರತಿ ವಿಷ್ಣುವರ್ಧನ್ ಭಾಗವಹಿಸದಿದ್ದರೆ ಆ ಸಮಾರಂಭಕ್ಕೆ ಕಳೆ ಬರಲಾರದು. ಈ ಕಾರಣಕ್ಕೆ ಭಾರತಿಯವರಿಗೆ ಅನುಕೂಲಕರವಾದ ಮತ್ತೊಂದು ದಿನಾಂಕದಲ್ಲಿ ಕೃಷ್ಣಕುಮಾರ್ ಈ ಸಮಾರಂಭವನ್ನು ನಡೆಸಬಹುದಿತ್ತು, ಆದರೆ ವಿಷ್ಣುಗೂ ವಿಜಯೋತ್ಸವಕ್ಕೂ ಯಾವತ್ತೂ ಕೂಡಿಬರುವುದಿಲ್ಲ ಎಂಬ ಅವರದೇ ಮಾತು ಈಗ 'ಆಪ್ತರಕ್ಷಕ' ವಿಷಯದಲ್ಲೂ ಕೂಡಾ ನಿಜವಾಗುತ್ತಿರುವುದು ವಿಷಾದನೀಯ. ●

...ಆಯ್ಕೆ ಸಮಿತಿಗೆ ಚೆಡ್ಡಿ ಶ್ರೀನಾಥ್!


...ಪ್ಪಿ ನೇತೃತ್ವದ ಬಿಜೆಪಿ ಸರ್ಕಾರ ಇಡೀ ...ಗರವನ್ನು ಕೇಸರಿಮಯ ಮಾಡಲು ...ರುವುದು ಸ್ಪಷ್ಟವಾಗಿ ಗೋಚರವಾಗುತ್ತಿದೆ. ...ಸರ್ಕಾರದ ಎಲ್ಲಾ ನಿಯಮ ಮತ್ತು ...ಗಳನ್ನು ಗಾಳಿಗೆ ತೂರಿಬಿಡುವ ಮೂಲಕ ...ೂ ಒಂದು ದೊಡ್ಡ ದುರಂತ.

...ಡು ತಿಂಗಳ ಹಿಂದೆ ... ಮತ್ತು ಪ್ರಚಾರ ... ರಾಜ್ಯ ಚಲನಚಿತ್ರ ...ಆಯ್ಕೆ ಸಮಿತಿಯನ್ನು ...ು. ಅದರಂತೆ ...ಹೆಚ್ಚು ಚಿತ್ರಗಳನ್ನು ...ಿಸಿದ 'ಕನ್ನಡದ ...ಶ' ಭಾರ್ಗವ ..., ಆಯ್ಕೆ ಸಮಿತಿಯ ...ನ್ನಾಗಿ ...ಾಗಿತ್ತು ...ರೆ ಈಗ




ಬಂದಿರುವ ಒಂದು ಆಘಾತಕಾರಿ ಸುದ್ದಿಯೆಂದರೆ ಭಾರ್ಗವ ಅವರನ್ನು ಅಧ್ಯಕ್ಷ ಸ್ಥಾನದಿಂದ ಎತ್ತಂಗಡಿ ಮಾಡಿ ಅವರ ಸ್ಥಾನಕ್ಕೆ ಹಿರಿಯ ನಟ ಶ್ರೀನಾಥ್ ಅವರನ್ನು ನೇಮಿಸುವ ಆದೇಶವನ್ನು ಸರ್ಕಾರ ಹೊರಡಿಸಲಿದೆಯಂತೆ!

ಆಯ್ಕೆ ಸಮಿತಿ ಪ್ರಕಟವಾದ ನಂತರ ಯಾವುದೇ ಕಾರಣಗಳನ್ನು ನೀಡದೆ ಏಕಾಏಕಿಯಾಗಿ ಸರ್ಕಾರ ಈ ರೀತಿ ಅಧ್ಯಕ್ಷರನ್ನು ಬದಲಾಯಿಸುತ್ತಿರುವುದು ಇದೇ ಮೊದಲಬಾರಿ. ಎಲ್ಲರಿಗೂ ಗೊತ್ತಿರುವಂತೆ ಈಗ ಹೊಸದಾಗಿ ಅಧ್ಯಕ್ಷ ಸ್ಥಾನವನ್ನಲಂಕರಿಸಲು ಬರುತ್ತಿರುವ ನಟ ಶ್ರೀನಾಥ ಬಿಜೆಪಿಯ ಅತ್ಯಂತ ಸಕ್ರಿಯ



ಕಾರ್ಯಕರ್ತ ಮಾತ್ರವಲ್ಲ ವಿಧಾನ ಪರಿಷತ್‌ನ ಸದಸ್ಯರೂ ಹೌದು. ಅಷ್ಟು ಮಾತ್ರವಲ್ಲ; ಸಾಧಾರಣವಾಗಿ ಯಾವುದೇ ಅಧ್ಯಕ್ಷ ಅಥವಾ ಸದಸ್ಯರನ್ನು ಆಯ್ಕೆ ಮಾಡುವಾಗ ಅವರ ಚಿತ್ರಗಳು ಪ್ರಶಸ್ತಿಯ ಸ್ಪರ್ಧಾಕಣದಲ್ಲಿರಬಾರದು ಎಂಬ ನಿಯಮವಿದೆ. ಈ ಬಾರಿ ಶ್ರೀನಾಥ್ ನಟಿಸಿರುವ 'ಜೋಷ್', 'ಗಂಗೆಬಾರೆ, ತುಂಗೆಬಾರೆ' ಚಿತ್ರಗಳಲ್ಲದೆ ಇತರೆ ಅನೇಕ ಚಿತ್ರಗಳೂ ಸ್ಪರ್ಧಾಕಣದಲ್ಲಿದ್ದರೂ ಅದನ್ನೆಲ್ಲಾ ಲೆಕ್ಕಿಸದೆ ಸರ್ಕಾರ ಶ್ರೀನಾಥರನ್ನು ಆಯ್ಕೆ ಸಮಿತಿಯ ಅಧ್ಯಕ್ಷರನ್ನಾಗಿ ಮಾಡುತ್ತಿರುವುದು ಕೇಸರೀಕರಣಕ್ಕೆ ಹಿಡಿದ ಕೈಗನ್ನಡಿ.

ಭಾರ್ಗವ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಿದ ಸಂದರ್ಭದಲ್ಲಿ ಅವರು ಅಮೆರಿಕಾದಲ್ಲಿದ್ದರು. ಎರಡು ತಿಂಗಳ ನಂತರವೇ ತಾವು ಬೆಂಗಳೂರಿಗೆ ವಾಪಸ್ಸಾಗುವುದು ಎಂದು ಭಾರ್ಗವ ಆಗಲೇ ಹೇಳಿದ್ದರಂತೆ. ಅದಕ್ಕೆ ವಾರ್ತಾ ಇಲಾಖೆಯ ಅಧಿಕಾರಿಗಳೂ ಅಸ್ತು ಎಂದಿದ್ದರು. ಆದರೀಗ ಭಾರ್ಗವ ಅಮೆರಿಕಾದಿಂದ ವಾಪಸ್ಸಾಗುವ ಎರಡು ದಿನಗಳ ಮೊದಲು ಸರ್ಕಾರ ತರಾತುರಿಯಲ್ಲಿ ಭಾರ್ಗವರಿಗೆ ಗೇಟ್‌ಪಾಸ್ ನೀಡಿ ಅವರ ಸ್ಥಾನದಲ್ಲಿ ಶ್ರೀನಾಥ್‌ರನ್ನು ಕುಳ್ಳಿರಿಸಲು ಹೊರಟಿದೆ. ಇಂತಹ ದಿಢೀರ್ ಕ್ರಮದ ಹಿಂದೆ ಖಂಡಿತವಾಗಿಯೂ ಬಿಜೆಪಿಯ ಹಿಡನ್ ಅಜೆಂಡಾ ಇದ್ದೇ ಇರುತ್ತದೆ ಎಂದು ಸುಲಭವಾಗಿಯೇ ಊಹಿಸಬಹುದು. ಹೀಗಾಗಿ ಈ ಬಾರಿ ಬಿಜೆಪಿಯ ಕಾರ್ಯಕರ್ತರಿಗೆ ಎಲ್ಲಾ ಪ್ರಶಸ್ತಿಗಳು ಲಭಿಸಲಿವೆ ಎಂದು ಈಗಲೇ ಭವಿಷ್ಯ ನುಡಿಯಬಹುದು. ●



Regd.No.KA/RNP/BGS/2036/2008-10 Posted at : GPO, Bangalore-01. R B P LANKESH, Kannada Weekly Price Rs. 12/- 22-09-2010 RNI No. KARKAN2005/146

ಪಂಚರಂಗಿ

'ದೇವರ ನೆನೆದು ಡೈಲಾಗ್ ಹೊಡಿ...'



ಯೋಗರಾಜ್ ಭಟ್ ನಿರ್ದೇಶನದ 'ಪಂಚರಂಗಿ' ಬಗ್ಗೆ ಒಂದೆರಡು ಮಾತುಗಳು.

ಭಟ್ಟರ ಹಿಂದಿನ ಮೂರೂ ಚಿತ್ರಗಳು (ಮುಂಗಾರುಮಳೆ, ಗಾಳಿಪಟ, ಮನಸಾರೆ) ಬಾಕ್ಸಾಫೀಸ್‌ನಲ್ಲಿ ಗೆದ್ದಿದ್ದರಿಂದ ಸಹಜವಾಗಿ 'ಪಂಚರಂಗಿ' ಬಗ್ಗೆಯೂ ಭಾರೀ ದೊಡ್ಡ ನಿರೀಕ್ಷೆಯಿತ್ತು. ಈ ಚಿತ್ರವನ್ನು ಭಟ್ಟರು ಸ್ವತಃ ತಮ್ಮ ಸ್ವಂತ ಬ್ಯಾನರ್‌ನಲ್ಲಿ ನಿರ್ಮಿಸಿದ್ದರಿಂದ ಮತ್ತೊಂದು ರೀತಿಯ ಕುತೂಹಲವೂ ಎಲ್ಲರಲ್ಲಿತ್ತು. ಭಟ್ಟರ ಬಾಕ್ಸಾಫೀಸ್ ರೆಕಾರ್ಡ್ 'ಪಂಚರಂಗಿ'ಯಲ್ಲೂ ಮುಂದುವರೆಯಬಹುದೇ ಎಂಬುದೇ ಗಾಂಧಿನಗರದವರ ಕಾತುರವಾಗಿತ್ತು.

ಈಗ 'ಪಂಚರಂಗಿ' ತೆರೆಕಂಡಿದ್ದು ಎಲ್ಲೆಡೆ ಎಂದಿನಂತೆ ತುಂಬಿದ ಪ್ರದರ್ಶನ ಕಾಣುತ್ತಿದೆ.

ಆದರೆ 'ಪಂಚರಂಗಿ'ಯ ಬಗ್ಗೆ ಗಂಭೀರವಾಗಿ ವಿಮರ್ಶಿಸಲು ಹೊರಟಾಗ ಎರಡು ಅಭಿಪ್ರಾಯಗಳು ಕಾಣಿಸುತ್ತಿವೆ. ಈ ಚಿತ್ರದ ಹೈಲೆಟ್: ಭಟ್ಟರ ಶೈಲಿಯ ಸಂಭಾಷಣೆಯೇ ಚಿತ್ರದುದ್ದಕ್ಕೂ ವಿಜೃಂಭಿಸಿರುವುದು. ಅಂದರೆ ಮಾತೇ ಈ ಚಿತ್ರದ ಬಂಡವಾಳ. ಇದು ಚಿತ್ರದ ಪ್ಲಸ್ ಪಾಯಿಂಟೂ ಹೌದು, ಮೈನಸ್ ಪಾಯಿಂಟೂ ಹೌದೆಂದು ಹೇಳಬಹುದು. ಯಾಕೆಂದರೆ ಪಡ್ಡೆ ಹುಡುಗರು ಈ ಡೈಲಾಗ್‌ಗಳನ್ನು ಕೇಳಿ ರಮಿಸಬಹುದು. ಆದರೆ ವಿದ್ಯಾವಂತ ಜನರ ಪಾಲಿಗೆ ಈ ಡೈಲಾಗ್‌ಗಳು ಸಂತೋಷಕ್ಕಿಂತ ಕಿರಿಕಿರಿಯಾಗಲಿದೆ.



ಚಿತ್ರದ ಕಥಾವಸ್ತು ಮತ್ತು ಪಾತ್ರಧಾರಿಗಳಿಗಿಂತ ತನ್ನ ಸಂಭಾಷಣೆಯ ಮೇಲೆಯೇ ಭಟ್ಟರು ಹೆಚ್ಚು ವಿಶ್ವಾಸವಿಟ್ಟಂತೆ ಕಾಣುತ್ತದೆ. ಹೀಗಾಗಿ ಅವರ ಎಂದಿನ ಚಿತ್ರಕಥೆಯ ಚುರುಕುತನ ಇಲ್ಲಿ ಮಾಯವಾಗಿಬಿಟ್ಟಿದೆ. ಒಂದೆರಡು ಕಡೆ ಮನ ಮಿಡಿಯುವ ಸೆಂಟಿಮೆಂಟ್ ದೃಶ್ಯಗಳನ್ನು ವಿಸ್ತರಿಸುವ ಅವಕಾಶವನ್ನು ಭಟ್ಟರು ಸದುಪಯೋಗಪಡಿಸಬಹುದಿತ್ತು. ಆದರೆ ಪಾತ್ರಗಳನ್ನು ಮತ್ತು ಪಾತ್ರಗಳ ನಡುವಿನ ಸಂಬಂಧವನ್ನು ವಿಸ್ತರಿಸುವ ಗೋಜಿಗೆ ಹೋಗದೆ ಭಟ್ಟರು ಗಡಿಬಿಡಿಯಲ್ಲಿ 'ಅಡುಗೆ' ಮಾಡಿದಂತಿದೆ.

ಇದನ್ನು ಮರೆತು ನೋಡಿದರೆ ಸಿದ್ಧಸೂತ್ರ ಮತ್ತು ಹೀರೋ ಇಮೇಜನ್ನು ಬದಿಗಿಟ್ಟು ಯೋಗರಾಜ್ ಭಟ್ಟರು ಒಂದು ಅಪಾಯಕಾರಿ ರಿಸ್ಕ್‌ಅನ್ನು ಕೈಗೆತ್ತಿಕೊಂಡು ಹೊಸತನ ನೀಡಲು ಪ್ರಯತ್ನಿಸಿದ್ದು 'ಪಂಚರಂಗಿ'ಯಲ್ಲಿ ಕಾಣಿಸುತ್ತಿದೆ. ಅದು ಕೆಲವೆಡೆ ಅವರ ಅತಿಯಾದ ಆತ್ಮವಿಶ್ವಾಸದಂತೆ ಕಾಣುವುದು ಕೂಡ ಸಹಜ.

ಈ ಚಿತ್ರ 'ಮುಂಗಾರು ಮಳೆ'ಯಷ್ಟು ಚೇತೋಹಾರಿಯಾಗಿಲ್ಲ, 'ಗಾಳಿಪಟ'ದಷ್ಟು ಲವಲವಿಕೆಯಿಂದ ಮೂಡಿಬಂದಿಲ್ಲ, 'ಮನಸಾರೆ'ಯಷ್ಟು ಮನೋಜ್ಞವಾಗಿ ಮೂಡಿ ಬಂದಿಲ್ಲವಾದರೂ 'ಪಂಚರಂಗಿ' ತನ್ನದೇ ವಿಕ್ಷಿಪ್ತತೆ ಮತ್ತು ವಿಶಿಷ್ಟತೆಯನ್ನು ಹೊಂದಿದೆ.

ಎರಡೇ ದೃಶ್ಯದಲ್ಲಿ ಬರುವ ಅನಂತನಾಗ್, ಪ್ರಿಯಾಂಕ ಬಗ್ಗೆ ಹೇಳಲು ಏನೂ ಇಲ್ಲ. ಭಟ್ಟರು ಸೃಷ್ಟಿಸಿದ ಹಾಸ್ಯಪಾತ್ರಗಳು ನರಳುತ್ತವೆ. ಮನೋಮೂರ್ತಿಯವರ ಸಂಗೀತ ಅಷ್ಟಕಷ್ಟೇ. ದಿಗಂತ್ ಪಾತ್ರಕ್ಕೆ ಜೀವ ತುಂಬಿದ್ದಾರೆ. ಆದರೆ ನಿಜವಾಗಿ ಮಿಂಚಿರುವುದು ನಿಧಿ ಸುಬ್ಬಯ್ಯ.

ಈ ಚಿತ್ರ ಒಂದು ಮದುವೆಯ ಕಥೆಯ ಸುತ್ತ ಹೆಣೆದಿದೆ. ಆದರೆ ಆ ಮದುವೆಯ ಭರಾಟೆಯಲ್ಲಿ ಇನ್ನೆರಡು ಪ್ರೇಮವಿವಾಹವಾಗುತ್ತದೆ. ಕೊನೆಯಲ್ಲಿ ಮತ್ತೊಂದು ಪ್ರೇಮವಿವಾಹ. ಆದರೆ ದೊಡ್ಡವರು ಫಿಕ್ಸ್ ಮಾಡಿದ ಮದುವೆ ಆಗುವುದೇ ಇಲ್ಲ. ಇದು ಭಟ್ಟರ 'ಪಂಚರಂಗಿ'ಯ ಕಥಾವಸ್ತು. ಸಮಾಜಕ್ಕೆ ಇಂತಹ ಚಿತ್ರಗಳು ಯಾವ ಸಂದೇಶ ಮತ್ತು ಕೊಡುಗೆ ನೀಡುತ್ತದೆ ಎಂಬುದಕ್ಕಿಂತ ನಿರೂಪಣೆಯಲ್ಲಿನ ಗೊಂದಲ ಪ್ರೇಕ್ಷಕರನ್ನು ಗಲಿಬಿಲಿ ಮಾಡುತ್ತದೆ. ●



'ಹುಡುಗ ಹುಡುಗಿ' ಸದಾ

'ಹುಡುಗ-ಹುಡುಗಿ' ಧ್ಯಾನದಲಿ ಇಂದ್ರಜಿತ್....

ಇಂದ್ರಜಿತ್ ಲಂಕೇಶ್ ಎರಡು ವರ್ಷಗಳ ಅಜ್ಞಾತವಾಸದ ನಂತರ ಗಾಂಧಿನಗರದಲ್ಲಿ ಮತ್ತೆ ಪ್ರತ್ಯಕ್ಷರಾಗಿದ್ದಾರೆ. ಅವರ ನಿರ್ದೇಶನದ 'ಹುಡುಗ-ಹುಡುಗಿ' ಸದ್ದುಗದ್ದಲವಿಲ್ಲದೆ ಮುಗಿದಿದ್ದು ಮುಂದಿನ ತಿಂಗಳು ಆ ಚಿತ್ರ ತೆರೆಕಾಣಲಿದೆ.



"ನನ್ನ 'ಮೊನಾಲಿಸಾ' ಚಿತ್ರದ ನೆರಳನ್ನು ಈ ಚಿತ್ರದಲ್ಲಿ ಮತ್ತೆ ಕಾಣಬಹುದು" ಎಂದು ಚುಟುಕಾಗಿ ಹೇಳಿದ ಇಂದ್ರಜಿತ್ ಮೊನ್ನೆ ತಮ್ಮ ಚಿತ್ರದ ಹಾಡುಗಳನ್ನು ಪತ್ರಕರ್ತರಿಗಾಗಿ ತೋರಿಸಿದರು. ಅದು ಚಿತ್ರದ ನಿರ್ಮಾಪಕರಾದ ಸಂದೇಶ್ ನಾಗರಾಜ್ ಅವರ ಹೋಟೆಲ್‌ನಲ್ಲಿ. ಈ ಹೋಟೆಲ್ ಗಾಂಧಿನಗರದ ಹೃದಯಭಾಗದಲ್ಲಿದ್ದು ಹೋಟೆಲ್‌ನ ನಾಲ್ಕನೇ ಮಹಡಿಯಲ್ಲಿರುವ 'ಸ್ಯಾಂಡಲ್‌ವುಡ್ ಹಾಲ್'ನಲ್ಲಿ ಚಿತ್ರದ ಪತ್ರಿಕಾಗೋಷ್ಠಿ ನಡೆಯಿತು. ಈ ಹಾಲ್‌ನಲ್ಲಿ ಕನ್ನಡ ಚಿತ್ರರಂಗದ ಅಗಲಿದ ಕಲಾವಿದರ ಫೋಟೋಗಳನ್ನು ಒಂದೆಡೆ, ಈಗ ವಿಜೃಂಭಿಸುತ್ತಿರುವ ನಾಯಕರ ಫೋಟೋಗಳನ್ನು ಮತ್ತೊಂದೆಡೆ ಸಂದೇಶ್ ನಾಗರಾಜ್ ಪ್ರದರ್ಶಿಸಿ ತಮ್ಮ ಚಿತ್ರಪ್ರೇಮವನ್ನು ತೋರ್ಪಡಿಸಿದರು.

'ಹುಡುಗ-ಹುಡುಗಿ' ಚಿತ್ರದ ಹಾಡುಗಳನ್ನು ನೋಡಿದಾಗ ಇದು ಹಿಂದಿ ಚಿತ್ರವನ್ನು ನೆನಪಿಸುವಷ್ಟು ಶ್ರೀಮಂತವಾಗಿ ಮೂಡಿಬಂದಿದೆ ಅನ್ನಿಸಿತು. ಈ ಚಿತ್ರದಲ್ಲಿ ಒಟ್ಟು ಅರ್ಧ ಡಜನ್ ನಾಯಕಿಯರನ್ನು ಇಂದ್ರಜಿತ್ ಕೂಡಿಹಾಕಿದ್ದಾರೆ. ಅವರುಗಳಲ್ಲಿ ಹಿಂದಿಯ ಇಲಿಯಾನ ಮತ್ತು 'ಮೊನಾಲಿಸಾ' ಖ್ಯಾತಿಯ ಸದಾ ಕೂಡಾ ಇದ್ದಾರೆ. ಆದರೆ ಈ ಆರು ಜನರಲ್ಲಿ ನಾಯಕ ಧ್ಯಾನ್‌ಗೆ ಯಾರು ಜೋಡಿ ಎಂಬ ಗುಟ್ಟನ್ನು ಮಾತ್ರ ಇಂದ್ರಜಿತ್ ಬಿಟ್ಟುಕೊಡಲಿಲ್ಲ. ಬಹುತೇಕ ಹೊಸ ತಂತ್ರಜ್ಞರೊಂದಿಗೆ 'ಹುಡುಗ-ಹುಡುಗಿ' ಕೆಲಸವನ್ನು ಮುಗಿಸಿರುವ ಇಂದ್ರಜಿತ್ ಎರಡು ವರ್ಷಗಳ ಗ್ಯಾಪ್ ನಂತರ ಮತ್ತೆ ಗಾಂಧಿನಗರದಲ್ಲಿ ಹವಾ ಎಬ್ಬಿಸುವಲ್ಲಿ ಯಶಸ್ವಿಯಾದಲ್ಲಿ ಆಶ್ಚರ್ಯಪಡಬೇಕಾಗಿಲ್ಲ. ●

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44